

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21
ಸಂಚಿಕೆ 8

ಫೆಬ್ರವರಿ 16-22, 1998

ರೂ.2.00

ಇನ್ನು ಸಾಕು ಈ ಸ್ವಾರ್ಥಪರ, ಜನವಿರೋಧಿ ಪಕ್ಷಗಳ ರಾಜ್ಯಭಾರ!

ಭಾರತೀಯ ಮತದಾರರಿಗೆ ಜ್ಯೋತಿ ಬಸು ಕರೆ

ಭ್ರಷ್ಟ ಹಾಗೂ ಅಪರಾಧೀಕರಣಗೊಂಡ ಕಾಂಗ್ರೆಸ್ ಹಾಗೂ ಕೋಮುವಾದಿ ಮತ್ತು ಫ್ಯಾಸಿಸ್ಟ್ ಮಾದರಿಯ ಬಿ.ಜೆ.ಪಿ.ಯನ್ನು ರಾಜಕೀಯದಲ್ಲಿ ಮೂಲೆಗುಂಪು ಮಾಡುವ ಮೊದಲು ದೇಶ ಇನ್ನೆಷ್ಟು ಸಂಕಷ್ಟಗಳನ್ನು ಅನುಭವಿಸಬೇಕಾಗಿದೆ? ಚುನಾವಣೆಗಳ ಮೊದಲು ಉದ್ದುದ್ದ ಭರವಸೆಗಳನ್ನು ನೀಡಿ ನಂತರ ಜನಗಳನ್ನು ಬದಿಗೊತ್ತಿ, ದೇಶದ ಸಾರ್ವಭೌಮತೆಯನ್ನೂ ಬದಿಗೊತ್ತಿ ಕೆಲವೇ ಉಳ್ಳವರ ಪ್ರಯೋಜನಕ್ಕಾಗಿ ಕೆಲಸ ಮಾಡುವ ಸ್ವಾರ್ಥಪರ ಹಾಗೂ ಜನ-ವಿರೋಧಿ ರಾಜಕೀಯ ಪಕ್ಷಗಳನ್ನು ಇನ್ನೂ ಎಷ್ಟು ಬಾರಿ ಆರಿಸುತ್ತೀರಾ? - ಇದು ದೇಶದ ಅಸ್ಥಿರತೆ, ಅಭದ್ರತೆಯ ಕಾರ್ಮೋಡಗಳ ನಡುವೆ ಆಶಾದೀಪದಂತಿರುವ ಪಶ್ಚಿಮ ಬಂಗಾಳದಲ್ಲಿ ಸತತವಾಗಿ ಇಪ್ಪತ್ತು ವರ್ಷಗಳಿಂದ ದಕ್ಷ ಆಡಳಿತ ನೀಡುತ್ತಿರುವ ಎಡರಂಗದ ಮುಖ್ಯಮಂತ್ರಿ, ದೇಶದ ಹಿರಿಯ ಮುತ್ಸದ್ದಿ ಹಾಗೂ ಸಿ.ಪಿ.ಐ(ಎಂ) ಹಿರಿಯ ಮುಖಂಡ ಜ್ಯೋತಿ ಬಸುರವರು 12ನೇ ಲೋಕ ಸಭಾ ಚುನಾವಣೆಗಳ ಸಂದರ್ಭದಲ್ಲಿ ದೇಶದ ಮತದಾರರನ್ನು ಕಳಕಳಿಯಿಂದ ಕೇಳಿರುವ ಪ್ರಶ್ನೆ.

ಸ್ವಾತಂತ್ರ್ಯದ 50 ವರ್ಷಗಳ ನಂತರ ದೇಶ ಒಂದು ತೀವ್ರ ಬಿಕ್ಕಟ್ಟಿನಲ್ಲಿದೆ. ಕಾಂಗ್ರೆಸ್(ಐ) ಅಕಾಲದಲ್ಲಿ ದೇಶದ ಮೇಲೆ ಹೇರಿರುವ ಲೋಕಸಭಾ ಚುನಾವಣೆ ಈ ದೇಶದ ಜನತೆಯನ್ನು ಅತ್ಯಂತ ನಿರ್ಣಾಯಕ ಘಟ್ಟದಲ್ಲಿ ತಂದು ನಿಲ್ಲಿಸಿದೆ. ದೇಶ ವಿಘಟನೆ, ದಬ್ಬಾಳಿಕೆ ಹಾಗೂ ವಿನಾಶದ ಹಾದಿಯಲ್ಲಿ ಸಾಗಬೇಕೋ ಅಥವಾ ಪ್ರಜಾಪ್ರಭುತ್ವ ಮತ್ತು ಅಭಿವೃದ್ಧಿ ಸಾಮರಸ್ಯ ಹಾಗೂ ಸ್ವಯಂ ಪೂರ್ಣತೆಯ ಹಾದಿಯಲ್ಲಿ ಸಾಗಬೇಕೋ ಎಂದು ಜನತೆ ನಿರ್ಧರಿಸಬೇಕಾಗಿದೆ ಎಂದು ಜ್ಯೋತಿ ಬಸು ಹೇಳಿದ್ದಾರೆ- ಅವರು ತ್ರಿಪುರಾದ ರಾಜಧಾನಿ ಅಗರ್ತಲಾ ದಲ್ಲಿ ಚುನಾವಣಾ ಪ್ರಚಾರ ಸಭೆ ಯೊಂದನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

"ಇತಿಹಾಸ ನಿರ್ಮಿಸುವವನು ಮಾನವ, ಅದೇ ವೇಳೆಗೆ ಪ್ರಮಾದಗಳನ್ನು ಮಾಡುವವನೂ ಮಾನವನೇ. ಆದರೂ ನನಗೆ ಮಾನವನ ಬುದ್ಧಿಮತ್ತೆಯಲ್ಲಿ ನಂಬಿಕೆಯಿದೆ. ಆತ ತನ್ನ ಮಿತ್ರ ಯಾರು, ಶತ್ರು ಯಾರು ಎಂದು ಕೊನೆಗೂ ಗುರುತಿಸಬಲ್ಲ" ಎಂದು ಅವರು ಹೇಳಿದರು.

ಬಿ.ಜೆ.ಪಿ.ಯ ನೀತಿಗಳನ್ನು ತೀವ್ರವಾಗಿ ಖಂಡಿಸುತ್ತಾ ಜ್ಯೋತಿ ಬಸುರವರು ಬಿ.ಜೆ.ಪಿ. ಹಿಂದೂ ಧರ್ಮವನ್ನು ಅಸಂಬದ್ಧ ರೀತಿಯಲ್ಲಿ ವಿವರಿಸುತ್ತಾ ಅದರಿಂದ ಲಾಭ ಗಿಟ್ಟಿಸಲು ಪ್ರಯತ್ನಿಸುತ್ತಿದೆ, 'ರಾಮರಾಜ್ಯ'ದ ನಕಲೀ 'ಧರ್ಮ ಯುದ್ಧ' ದಲ್ಲಿ ತೊಡಗಿದೆ ಎಂದು ಹೀಯಾಳಿಸಿದರು. ಆ ಮೂಲಕ ಬಿ.ಜೆ.ಪಿ. ಅಂತರ ರಾಷ್ಟ್ರೀಯ ಸಮುದಾಯದ ಕಣ್ಣಲ್ಲಿ ಹಿಂದೂ ಧರ್ಮವನ್ನು ಅವಮಾನ ಗೊಳಿಸಿದೆ, 5,000 ವರ್ಷಗಳ ದೀರ್ಘ ಇತಿಹಾಸ ದಲ್ಲಿನ ಅದರ ಗೌರವ ಪೂರ್ಣ ಸ್ಥಾನವನ್ನು, ವಿವಿಧತೆಯಲ್ಲಿ ಏಕತೆ ಯನ್ನು, ಭಾರತೀಯ ನಾಗರೀಕತೆಯ ಸಾಂಸ್ಕೃತಿಕ ಪರಂಪರೆ ಯನ್ನು ಮಣ್ಣುಪಾಲು ಮಾಡಿದೆ.

"ಭಾರತದ ಎಲ್ಲಾ ಪ್ರಜಾ ಪ್ರಭುತ್ವ ವಾದಿ ಹಾಗೂ ಶಾಂತಿ ಪ್ರಿಯ ಜನತೆ ಸಂಯುಕ್ತ ರಂಗ ಸರಕಾರವನ್ನು ಸ್ಥಾಪಿಸುತ್ತಾರೆ, ಈ ಸಂಯುಕ್ತ ರಂಗ ಸರ್ಕಾರಕ್ಕೆ ಕಾಂಗ್ರೆಸ್(ಐ) ನಂತಹ ಅತ್ಯಂತ ಅವನತಶೀಲ ಹಾಗೂ ಅಧಿಕಾರ ದಾಹಿ ಪಕ್ಷವನ್ನು ಆಧರಿಸುವಂತಹ ದುರದೃಷ್ಟ ಇರದಂತೆ ಮಾಡುತ್ತಾರೆ ಎಂಬ ನಂಬಿಕೆ ನನಗಿದೆ ಎಂದು ಅವರು ಹೇಳಿದರು.

ಪಶ್ಚಿಮ ಬಂಗಾಳದ ಎಡರಂಗ ಕೇಂದ್ರದಲ್ಲಿ ಮುಂದೆ ಬರ ಬಹುದಾದ ಸಂಯುಕ್ತರಂಗ ಸರ್ಕಾರಕ್ಕೆ ಮಾದರಿಯಾಗಬಲ್ಲದು. ಈ ಸಂಯುಕ್ತ ರಂಗ ವಿವಿಧ ಪ್ರದೇಶಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ದೊಡ್ಡ-ಸಣ್ಣ ಪಕ್ಷಗಳಲ್ಲಿನ ಭಿನ್ನತೆಗಳನ್ನು ತೂಗಿಸಿ ಕೊಂಡು ಹೋಗಬೇಕು. ಸಿ.ಪಿ.ಐ. (ಎಂ) 18 ತಿಂಗಳ ಸಂಯುಕ್ತ ರಂಗ ಸರ್ಕಾರದ ಮೇಲೆ ರಚನಾತ್ಮಕ ಪ್ರಭಾವ ಬೀರಿತು, ಮುಂದಿನ ಚುನಾವಣೆಗಳ ನಂತರ ಇಂತಹ ಸರಕಾರಕ್ಕೆ ಇನ್ನೂ ಹೆಚ್ಚಿನ ಕಾಣಿಕೆ ನೀಡುತ್ತದೆ ಎಂದು ಅವರು ಹೇಳಿದರು. (ಐಎನ್‌ಎನ್)

ಈಗ ಭಾರತದ ಅಂತರಿಕ್ಷದಲ್ಲೂ ಇಂಕ್ವಿಲಾಬ್ ಜಿಂದಾಬಾದ್ ಕೇಳಲಾರಂಭಿಸಿದೆ. ಫೆಬ್ರವರಿ 6 ರಂದು ಸಂಪರ್ಕ ತಂತ್ರಜ್ಞಾನದ ಅತ್ಯಾಧುನಿಕ ಸಾಧನವಾದ 'ಇಂಟರ್‌ನೆಟ್'ನ್ನು ಸಿಪಿಐ(ಎಂ) ಪ್ರವೇಶಿಸಿದೆ. ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಇದನ್ನು ಉದ್ಘಾಟಿಸಿದರು. ಸಿಪಿಐ(ಎಂ)ನ ವೆಬ್‌ಸೈಟ್‌ನ ವಿಶೇಷತೆಯೆಂದರೆ ಬಿಜೆಪಿಯಂತೆ ಅಥವಾ ಇತರರಂತೆ ಅದು ವಿದೇಶಗಳಲ್ಲಿ ತಯಾರಿಸಿ ಖಾಸಗಿ ಕಂಪನಿಗಳ ಮೂಲಕ ಹಾಕಿದ್ದಲ್ಲ, ಸಾರ್ವಜನಿಕ ವಲಯದ ಸಂಸ್ಥೆ ವಿದೇಶ್ ಸಂಚಾರ್ ನಿಗಮ್‌ನ ಮೂಲಕ ಹಾಕಿದ್ದು. ಈ ಬಗ್ಗೆ ಹೆಚ್ಚಿನ ವಿವರಕ್ಕೆ ಮುಂದಿನ ವಾರದ ಸಂಚಿಕೆ ನೋಡಿ.

ಸಂಯುಕ್ತ ರಂಗವನ್ನು ಆರಿಸಿ ತನ್ನಿ

ವಿ.ರಾಮಚಂದ್ರ ರಾವ್

ಸಂಯುಕ್ತರಂಗವು 1998ರ ಮಹಾ ಚುನಾವಣೆಯಲ್ಲಿ ಒಂದು ಪ್ರಮುಖ ಚುನಾವಣಾ ಕೂಟವಾಗಿದೆ. 13 ಪಕ್ಷಗಳ 18 ತಿಂಗಳ ಆಡಳಿತೆಯ ಸಾಧನೆಗಳೇ ಚುನಾವಣೆಯಲ್ಲಿ ಸಂಯುಕ್ತರಂಗದ ಪಕ್ಷಗಳಿಗೆ ಮತಗಳನ್ನು ಗಳಿಸುವ ಸಾಧನವಾಗಿದೆ.

ಈ ಸಾಧನೆಗಳು ಯಾವುವು? ಎಲ್ಲವನ್ನು ವಿವರಿಸುವುದು(ಈ ಲೇಖನದ ವ್ಯಾಪ್ತಿಗೆ) ಕಷ್ಟವಾದರೂ ಕೆಲವು ಮುಖ್ಯ ಸಾಧನೆಗಳನ್ನು ಇಲ್ಲಿ ವಿವರಿಸಲು ನಾನು ಪ್ರಯತ್ನಿಸುತ್ತೇನೆ. ಮತದಾರರು ಈ ಸಾಧನೆಗಳನ್ನು ಇತರ ಎರಡು ಕೂಟಗಳು-ಕಾಂಗ್ರೆಸ್(ಐ) ಪಕ್ಷ ಮತ್ತದರ ಮಿತ್ರ ಪಕ್ಷಗಳು ಮತ್ತು ಬಿ.ಜೆ.ಪಿ ಮತ್ತದರ ಮಿತ್ರಪಕ್ಷಗಳ ಸಾಧನೆಗಳನ್ನು ತುಲನೆ ಮಾಡಿದರೆ, ಖಂಡಿತವಾಗಿ ಸಂಯುಕ್ತರಂಗದ ಪಕ್ಷಗಳಿಗೆ ಮತವೀಯಬೇಕಾಗುವುದು ಎಂದು ಖಚಿತವಾಗುವುದರಲ್ಲಿ ಏನೂ ಸಂಶಯವಿಲ್ಲ.

1. ನೆರೆಹೊರೆ ರಾಷ್ಟ್ರಗಳ ಜೊತೆ ಸೌಹಾರ್ದ ಸಂಬಂಧಗಳನ್ನು ಬೆಳೆಸಲು ಪ್ರಯತ್ನಿಸಿ ಹೆಚ್ಚಿನ ಸಫಲತೆ ಪಡೆದುದು, ಬಾಂಗ್ಲಾದೇಶ ಭಾರತದ ನಡುವಿನ ಗಂಗಾ ನದಿಯ ನೀರಿನ ವಿವಾದವನ್ನು ಸೌಹಾರ್ದಯುತವಾಗಿ ಪರಿಹರಿಸಿರುವುದು. ನೇಪಾಲ ರಾಷ್ಟ್ರದೊಡನೆ ಸಂಬಂಧವನ್ನು ಸುಧಾರಿಸಿರುವುದು, ಚೀನಾದೊಡನೆ ವ್ಯಾಪಾರ, ವೈಜ್ಞಾನಿಕ ಸಂಶೋಧನೆ ಇತ್ಯಾದಿ ವಿಷಯಗಳಲ್ಲಿ ಹಲವು ಒಡಂಬಡಿಕೆಗಳನ್ನು ಮಾಡಿಕೊಂಡಿರುವ ಹಾಗೂ ಪಾಕಿಸ್ತಾನದೊಡನೆ ಸೌಹಾರ್ದತೆ ಬೆಳೆಸಲು ಪ್ರಯತ್ನಿಸಿದುದು... ನಿಜವಾಗಿ ಉಲ್ಲೇಖನೀಯ. ಈ ರೀತಿ ನೆರೆಹೊರೆಯ ರಾಷ್ಟ್ರಗಳ ಜೊತೆಯಲ್ಲಿ ಸಂಬಂಧ ಸುಧಾರಿಸುವುದರ ಹಿಂದೆ -ರಕ್ಷಣಾ ವೆಚ್ಚವನ್ನು ಕಡಿತಗೊಳಿಸಿ ಆ ಉಳಿತಾಯದ ಹಣವನ್ನು ಜನ ಸಾಮಾನ್ಯರ ಜೀವನ ವಿಕಸನಕ್ಕೆ ಉಪಯೋಗಿಸುವ ಉದ್ದೇಶವು ಇವೆ ಎಂಬುದನ್ನು ತಿಳಿಯುವುದು ಅಗತ್ಯ.

ಈ ಧೋರಣೆಗೂ ಬಿ.ಜೆ.ಪಿಯ 'ನಾವು ಅಧಿಕಾರಕ್ಕೆ ಬಂದರೆ ಅಣುಬಾಂಬು ತಯಾರಿಸುವೆವು' ಎಂಬ ಧೋರಣೆಗೂ ಎಂತಹ ಭಿನ್ನತೆ! ಸಾವಿರ ಸಾವಿರ ಕೋಟಿ ಹಣವನ್ನು ಅಣುಬಾಂಬುಗಳ ತಯಾರಿಗೆ ಬಳಸುವುದು, ಜನಸಾಮಾನ್ಯರ ಜೀವನ ಇನ್ನೂ ಕಡೆಗಣಿಸುವ ಕಣ್ನೋಟ-ಬಿ.ಜೆ.ಪಿ.ಯದು ಎಂದು ಬಯಲಾಗುವುದಿಲ್ಲವೇ?

2. ಅಮೇರಿಕಾ ಮತ್ತಿತರ ದೇಶಗಳು ಅಣುಬಾಂಬು ತಾವು ತಯಾರಿಸಿಟ್ಟುಕೊಂಡು ಭಾರತಕ್ಕೆ ಅಣು ನಿಶಸ್ತ್ರೀಕರಣ ಒಡಂಬಡಿಕೆಗೆ ಸಹಿ ಹಾಕಿ ಎಂದು ಒತ್ತಾಯಿಸುವ ಸಿಟಿಬಿಟಿಗೆ ರುಜು ಹಾಕುವುದಿಲ್ಲ ಎಂದು ಗಟ್ಟಿಯಾಗಿ ನಿಂತು "ಸಾರ್ವತ್ರಿಕ ನಿಶಸ್ತ್ರೀಕರಣ"ವೇ ಇದಕ್ಕೆ ನಿಜವಾದ ಪರಿಹಾರ ಎಂದು ಪ್ರತಿಪಾದಿಸಿದ ಧೋರಣೆ.

ಬಿ.ಜೆ.ಪಿ. ತಾವು ಅಧಿಕಾರಕ್ಕೆ ಬಂದರೆ, ಇಂತಹ ವಿಷಯದಲ್ಲಿ ಧೃಢತೆಯನ್ನು ತೋರಿಸುತ್ತೇವೆ" ಎಂದು ಅರ್ಭಟಿಸಿ ಇತರರಿಗೆ ಅಂತಹ ಧೃಢತೆ ಇಲ್ಲ ಎಂದು ಅಬ್ಬರಿಸುವುದರಲ್ಲಿ 'ಏನೂ ಹುರುಳಿಲ್ಲ" ಎಂದು ಸಂಯುಕ್ತರಂಗವು ಸಿಟಿಬಿಟಿಗೆ ಎಲ್ಲಾ ಒತ್ತಡಗಳನ್ನು ಲೆಕ್ಕಿಸದೇ ಸಹಿ ಮಾಡದೆ ಇದ್ದು ತೋರಿಸಿಕೊಟ್ಟಿದೆ.


3. ಮೊಟ್ಟಮೊದಲಿಗೆ ನಮ್ಮ ಸಂವಿಧಾನದ "ಫೆಡರಲ್"(ಒಕ್ಕೂಟ) ತತ್ವವನ್ನು ಅನುಷ್ಠಾನಕ್ಕೆ ತಂದ ಸರಕಾರ ಸಂಯುಕ್ತರಂಗ. ಹಲವು ಬಾರಿ ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳನ್ನು ಕರೆದು ದೇಶದ ಜನತೆಗೆ ಅವಶ್ಯವಾಗಿರುವ "ಆರೋಗ್ಯ, ವಸತಿ, ಆಹಾರ" ಈ ಕುರಿತು ಚರ್ಚಿಸಿ ಸೂಕ್ತ ತೀರ್ಮಾನಗಳನ್ನು ಮಾಡಿದ ಸರಕಾರ ಸಂಯುಕ್ತರಂಗ ಸರಕಾರ.


ತೆರಿಗೆಗಳಲ್ಲಿ ರಾಜ್ಯಗಳ ಆದಾಯದ ಪಾಲನ್ನು ಶೇ: 26 ರಿಂದ 29ಕ್ಕೆ ಹೆಚ್ಚಿಸಿದ ಪ್ರಥಮ ಸರಕಾರ ಇದಾಗಿದೆ.

4. ಸತತವಾಗಿ ಶೇ. 7ರಷ್ಟು ವಾರ್ಷಿಕ ಬೆಳವಣಿಗೆಯ ವೇಗವನ್ನು ಸಾಧಿಸಿಕೊಟ್ಟ ಸರಕಾರ ಸಂಯುಕ್ತರಂಗ ಸರಕಾರ.

5. ಸಂಯುಕ್ತ ರಂಗ ಸರಕಾರವು ಕೇಂದ್ರದಲ್ಲಿ ಅಧಿಕಾರದಲ್ಲಿರದಿದ್ದರೆ, ಎಲ್ಲಾ ಸಬ್ಸಿಡಿಗಳು ಈಗ

ಪುಟ 8 ನೋಡಿ





ಜನಗಳ ನೈಜ ಸಮಸ್ಯೆಗಳತ್ತ, ಅವುಗಳ ಕಾರಣ, ಪರಿಹಾರಗಳತ್ತ ಗಮನಸೆಳೆಯುವ → ಕಲಾತಂಡದ ಒಂದು ಪ್ರದರ್ಶನ

ಅವರು ಅಧಿಕಾರಕ್ಕೆ ಬಂದರೆ......

ಆರ್ಥಿಕ ಟಿಪ್ಪಣಿ

ಜಿ.ಎಸ್.ಮಣಿ

ಕಾಂಗ್ರೆಸ್ ಯಾ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಅಧಿಕಾರಕ್ಕೆ ಬಂದರೆ ಏನಾಗುತ್ತದೆ ? ಈಗ ಸಂಯುಕ್ತರಂಗ, ಬಿ.ಜೆ.ಪಿ ಮತ್ತು ಕಾಂಗ್ರೆಸ್ ಪಕ್ಷಗಳ ಚುನಾವಣಾ ಪ್ರಣಾಳಿಕೆಗಳು ಹೊರಬಂದಿವೆ. ಚುನಾವಣಾ ಪ್ರಣಾಳಿಕೆಗಳಲ್ಲಿ ಹೇಳಿರುವುದನ್ನೆಲ್ಲ ಅಧಿಕಾರಕ್ಕೆ ಬಂದ ಪಕ್ಷಗಳು ಚಾಚೂ ತಪ್ಪದೆ ಜಾರಿಗೆ ತರುತ್ತಾರೆಂದಲ್ಲ. ಅದರಲ್ಲೂ ಬೂರ್ಜ್ವಾ ಪಕ್ಷಗಳು ಮಾತು ಹೆಚ್ಚು ಕಾರ್ಯ ಕಡಿಮೆ ಎಂಬ ಸಿದ್ಧಾಂತದಲ್ಲಿ ನಂಬಿಕೆಯಿಟ್ಟವರು. ಆಳುವ ವರ್ಗಕ್ಕೆ ಪ್ರಣಾಳಿಕೆಗಳಲ್ಲಿ ಹೇಳಿದ್ದಕ್ಕಿಂತ ಹೆಚ್ಚಿಗೆ ಮಾಡಿ ಜನಸಾಮಾನ್ಯರಿಗಾಗಿ ಪ್ರಣಾಳಿಕೆಗಳಲ್ಲಿ ಹೇಳಿದ್ದಕ್ಕಿಂತ ಕಡಿಮೆ (ಈ ಕಡಿಮೆ ಎಷ್ಟು ಕಡಿಮೆ ಆದರೂ ಆಗಬಹುದು) ಮಾಡುವುದು ಅವುಗಳ ವರ್ಗ ಜಾಯಮಾನ.

ಆದರೂ ಚುನಾವಣಾ ಪ್ರಣಾಳಿಕೆಗಳು ಈ ಪಕ್ಷಗಳು ಹೇಗೆ ಚಿಂತಿಸುತ್ತವೆ, ಯಾವ ವರ್ಗಗಳ ಹಿತಾಸಕ್ತಿ ಕಾಯುತ್ತವೆ ಎಂಬಿತ್ಯಾದಿ ಪ್ರಶ್ನೆಗಳಿಗೆ ಸ್ಥೂಲ ಉತ್ತರ ನೀಡೇ ನೀಡುತ್ತವೆ.

ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಅಥವಾ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಅವು ಏನೇನನ್ನು ಮಾಡುವ ಭರವಸೆ ನೀಡಿವೆ ಮತ್ತು ಅದರಿಂದಾಗಿ ದೇಶದ ಜನ ಸಾಮಾನ್ಯರ ಮೇಲೆ ಎಂತಹ ಪರಿಣಾಮ ಬೀರುತ್ತದೆ ಎಂಬುದನ್ನು ನೋಡೋಣ.

ಬಂಡವಾಳ ಮಾರುಕಟ್ಟೆ

ಕಾಂಗ್ರೆಸ್: ಬಂಡವಾಳ ಮಾರುಕಟ್ಟೆಯ ಸುಧಾರಣಾ ಕಾರ್ಯವನ್ನು ಕಾಂಗ್ರೆಸ್ ಮುಂದುವರಿಸ ಬಯಸುತ್ತದೆ.

ಬಂಡವಾಳ ಮಾರುಕಟ್ಟೆಯ ಸುಧಾರಣೆಗಳು ಪ್ರಾರಂಭವಾಗುತ್ತಿದ್ದಂತೆ ಶೇರು ಹಗರಣದಂತಹ ದೊಡ್ಡ ಹಗರಣವಾದದ್ದು ಈಗ ಇತಿಹಾಸ. ಆನಂತರ ಚಿಕ್ಕ ಪುಟ್ಟ ಕಂಪನಿಗಳೆಲ್ಲ ಸಾರ್ವಜನಿಕರಿಗೆ ಶೇರು ಮಾರಿ ಹಣ ಮಾಡಿಕೊಂಡು ಕಂಪನಿಗಳನ್ನು ಮುಳುಗಿಸಿದ್ದೂ ಆಯಿತು. ಎಂ.ಎಸ್.ಶೂಸ್, ಸಿ.ಆರ್.ಬಿ ಕ್ಯಾಪಿಟಲ್ ಮತ್ತು ಇತರ ಹಲವು ಕಂಪನಿಗಳು ಹೂಡಿಕೆದಾರರಿಗೆ ಮೋಸ ಮಾಡಿದವು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮತ್ತೆ ಇಂತಹ ಹಗರಣಗಳಿಗೆ ರಹದಾರಿ ತೆರೆದಂತೆ.

ಇದಲ್ಲದೆ ಸಾರ್ವಜನಿಕ ವಲಯದ ಉದ್ದಿಮೆ ಗಳ ಶೇರುಗಳನ್ನು ಅದು ಮಾರಾಟ ಮಾಡ ಬಯಸುತ್ತದೆ. ಇದರ ಅರ್ಥವೇನೆಂದರೆ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಮೂರುಕಾಸಿಗೆ ಖಾಸಗಿಯವರಿಗೆ ಮಾರುತ್ತದೆ. ಖಾಸಗಿಯವರ ಕೈಗೆ ಇವು ಹೋದ ಮೇಲೆ ಅಲ್ಲಿನ ಉದ್ಯೋಗಿಗಳಿಗೆ, ಈ ಉದ್ದಿಮೆಗಳ ಸಾಮಾನ್ಯ ಗ್ರಾಹಕರಿಗೆ ಅನಾಥ ಪರಿಸ್ಥಿತಿ. ಉದ್ಯೋಗಿಗಳು ಉದ್ಯೋಗ ಕಳೆದುಕೊಂಡರೆ ಗ್ರಾಹಕರು ಎಲ್ಲ ಸರಕು ಸೇವೆಗಳಿಗೆ ಅಪಾರ ಬೆಲೆ ತೆರಬೇಕಾಗುತ್ತದೆ.

ಬಿ.ಜೆ.ಪಿ : ಬಿಜೆಪಿ ಆರೋಗ್ಯಕರ ಬಂಡವಾಳ ಮಾರುಕಟ್ಟೆಯನ್ನು ಬೆಳೆಸುವ ಮಾತನ್ನಾಡಿದೆ. ಆದರೆ ಆರೋಗ್ಯಕರ ಅಂದರೇನು? ಮತ್ತು ಅವನ್ನು ಹೇಗೆ ಸಾಧಿಸುತ್ತದೆ ಎಂಬ ವಿವರಗಳಿಲ್ಲ. ಕಾಂಗ್ರೆಸ್‌ನ ನೀತಿಗಳನ್ನೇ ಅಲ್ಪ ಸ್ವಲ್ಪ ಬದಲಾವಣೆ ಗಳೊಂದಿಗೆ ಅದು ಜಾರಿಗೆ ತರುತ್ತದೆ ಅಷ್ಟೇ.

ಸಂಯುಕ್ತರಂಗ: ಸಂಯುಕ್ತರಂಗದ ಪ್ರಣಾಳಿಕೆ ಈ ವಿಷಯದ ಮೇಲೆ ಏನೂ ಹೇಳಿಲ್ಲ. ಆದರೆ ಎಡಪಕ್ಷಗಳ ಮಧ್ಯಪ್ರವೇಶದಿಂದಾಗಿ ಜನ ಸಾಮಾನ್ಯರಿಗೆ ಅನ್ಯಾಯವಾಗುವ ರೀತಿಯಲ್ಲಿ ಉದಾರೀಕರಣ ಮಾಡಲು ಸಂಯುಕ್ತರಂಗಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದು ಬಹಳ ಎಚ್ಚರಿಕೆ ಯಿಂದ ನಡೆಯಬೇಕಾಗುತ್ತದೆ. ಹಗರಣಗಳಿಗೆ ಆಸ್ಪದವಿರುವುದಿಲ್ಲ.

ಉದ್ದಿಮೆಗಳಿಗೆ ರಕ್ಷಣೆ

ಕಾಂಗ್ರೆಸ್: ಕಾಂಗ್ರೆಸ್ ಉದಾರೀಕರಣ ತಂದಿತು. ಆಮದು ರಫ್ತು ಉದಾರೀಕರಣದಿಂದಾಗಿ ಎಂತಹ ಪರಿಸ್ಥಿತಿ ಉಂಟಾಯಿತೆಂದರೆ ವಿದೇಶೀ ಉತ್ಪಾದಕರು ಭಾರತವನ್ನು ತಿಪ್ಪೆಗುಂಡಿ ಮಾಡಿದರು. ತಮ್ಮ ಸರಕುಗಳನ್ನು ಇಲ್ಲಿ ತಂದು ತುಂಬತೊಡಗಿದರು ಈಗ ಕಾಂಗ್ರೆಸ್ ಮತ್ತಷ್ಟು ಸುಂಕಗಳ ಕಡಿತ ಮಾಡುವ ಮಾತನ್ನಾಡಿದೆ. ಅದರ ಪರಿಣಾಮ ನೀವೇ ಊಹಿಸಿಕೊಳ್ಳಿ. ಹೀಗೆ ವಿದೇಶೀ ಸರಕುಗಳನ್ನು ತುರುಕುವುದರಿಂದ ದೇಶೀ ಉದ್ದಿಮೆಗಳು ಮುಚ್ಚಿಹೋಗುತ್ತವೆ ನಿರುದ್ಯೋಗ ಬೆಳೆಯುತ್ತದೆ ನಮ್ಮ ಸ್ವಾವಲಂಬನೆ ಕೊಚ್ಚಿ ಹೋಗುತ್ತದೆ.

ಬಿಜೆಪಿ: ಈ ಪಕ್ಷ ನಮ್ಮ ದೇಶೀ ಕಂಪನಿಗಳಿಗೆ ಏಳರಿಂದ ಹತ್ತು ವರ್ಷಗಳ ಸಮಯ ನೀಡುವ ಮಾತನ್ನಾಡಿದೆ. ಆದರೆ ಕಾಂಗ್ರೆಸ್‌ನ ಕ್ರಮಗಳನ್ನು ತಿರುವು-ಮುರುವು ಮಾಡುವ ಮಾತಿಲ್ಲ. ಒಟ್ಟಾರೆ ಕಾಂಗ್ರೆಸ್ಸಿನದೇ ನೀತಿ.

ಸಂಯುಕ್ತರಂಗ: ಸಂಯುಕ್ತರಂಗದ ಪ್ರಣಾಳಿಕೆಯಲ್ಲಿ 'ಸ್ವಾವಲಂಬನೆ ಸ್ವಾತಂತ್ರ್ಯ ದೊರೆತಂದಿನಿಂದಲೂ ದೇಶ ನಂಬಿರುವ ಒಂದು ತತ್ವ. ಸಂಯುಕ್ತ ರಂಗ ಸರಕಾರ ಇನ್ನಷ್ಟು ಸ್ವಾವಲಂಬನೆ ಸಾಧಿಸುವಂತೆ ತನ್ನ ಅಭಿವೃದ್ಧಿ ನೀತಿಗಳನ್ನು ರೂಪಿಸುತ್ತದೆ' ಎಂದಿದೆ.

ವಿದೇಶೀ ನೇರ ಹೂಡಿಕೆ:

ಕಾಂಗ್ರೆಸ್: ಮಿತಿ ಇಲ್ಲದ ವಿದೇಶಿ ನೇರ ಹೂಡಿಕೆ ಗಾಗಿ ಪ್ರಯತ್ನಿಸುವುದು. ವಿದೇಶೀ ಹೂಡಿಕೆಗೆ ಅನುಕೂಲವಾಗುವಂತೆ ಆರ್ಥಿಕವನ್ನು ಮಾರ್ಪಡಿಸುವುದು. ಅಂದರೆ ಈ ಹಾಟ್‌ಮನಿ ನಮ್ಮ ಆರ್ಥಿಕದಲ್ಲಿ ಅತಿಮುಖ್ಯ ಪಾತ್ರ ವಹಿಸುತ್ತದೆ. ನಮಗೆ ಬೇಕಾದಾಗ ಇಲ್ಲದೇ ಇರುವುದು ಮತ್ತು ನಮಗೆ ಬೇಡವಾದಾಗ ಹರಿದು ಬರುವುದು ಇದರ ಗುಣ. ಇಡೀ ಆರ್ಥಿಕವನ್ನು ಅದು ಅಲ್ಲೋಲ ಕಲ್ಲೋಲ ಗೊಳಿಸುತ್ತದೆ.

ಬಿಜೆಪಿ: ವಿದ್ಯುತ್, ಬಂದರು, ರಸ್ತೆ ಇತ್ಯಾದಿಗಳಲ್ಲಿ ವಿದೇಶೀ ನೇರ ಹೂಡಿಕೆಗೆ ಪೂರಕ ಪಾತ್ರನೀಡುವ ಮಾತನ್ನು ಬಿ.ಜೆ.ಪಿ ಆಡಿದೆ. ಏನ್ರಾನ್‌ಗೆ ಅನುಮೋದನೆಯನ್ನು ನೀಡಿದ ಪರಿ ಬಿಜೆಪಿಯ ಕಾರ್ಯ ಹೇಗಿರುತ್ತದೆ ಎಂಬುದನ್ನು ಸ್ಪಷ್ಟಗೊಳಿಸುತ್ತದೆ.

ಸಂಯುಕ್ತ ರಂಗ: ಕನಿಷ್ಟ ಸಮಾನ ಕಾರ್ಯಕ್ರಮದ ಪ್ರಕಾರ ಎಲ್ಲಿ ವಿದೇಶೀ ಹೂಡಿಕೆ ಅತ್ಯಗತ್ಯವೊ ಅಲ್ಲಿ ಮಾತ್ರ ಅದಕ್ಕೆ ಸ್ವಾಗತ-ಅದು ನಮ್ಮ ಷರತ್ತುಗಳ ಪ್ರಕಾರ.

ಅಂತರ್‍ರಚನಾ ಸೌಕರ್ಯಗಳು

ಕಾಂಗ್ರೆಸ್: ತೈಲ, ಅನಿಲ, ಇತ್ಯಾದಿ ಎಲ್ಲ ಕ್ಷೇತ್ರಗಳಲ್ಲಿ ವಿದೇಶೀ ಹೂಡಿಕೆಗೆ ಸ್ವಾಗತ.

ಬಿ ಜೆಪಿ: ದೇಶೀ ಹೂಡಿಕೆಗಳಿಗೆ ಆದ್ಯತೆ. ಅಂದರೆ ವಿದೇಶೀ ಹೂಡಿಕೆಗೆ ಸ್ವಾಗತವಿದೆ ಎಂದೇ ಅರ್ಥ.

ಸಂಯುಕ್ತರಂಗ: ಕನಿಷ್ಠ ಸಮಾನ ಕಾರ್ಯಕ್ರಮದಂತೆ ಎಲ್ಲಿ ಅತ್ಯವಶ್ಯವೊ ಅಲ್ಲಿ ಮಾತ್ರ ವಿದೇಶೀ ಹೂಡಿಕೆ.

ಉದ್ಯೋಗಗಳು

ಕಾಂಗ್ರೆಸ್: ವರ್ಷಕ್ಕೊಂದು ಕೋಟಿ ಹೊಸ ಉದ್ಯೋಗಗಳ ಸೃಷ್ಟಿ. ಆದರೆ ಅದು ಅಧಿಕಾರದಲ್ಲಿದ್ದಾಗ ಉದ್ಯೋಗಗಳ ನಾಶವನ್ನೇ ಮಾಡಿರುವುದು.

ಬಿಜೆಪಿ: ಹತ್ತು ವರ್ಷಗಳಲ್ಲಿ ಹತ್ತು ಕೋಟಿ ಉದ್ಯೋಗಗಳು. ಒಟ್ಟುತ್ಪಾದನೆಯ ಬೆಳವಣಿಗೆ ಶೇ 8-9. ಸಣ್ಣ ಕೈಗಾರಿಕೆಗಳು, ಗ್ರಾಮೀಣ ಕೈಗಾರಿಕೆಗಳು, ವಸತಿ, ಮಹಿಳೆಯರಿಗೆ ಉದ್ಯೋಗ ಇತ್ಯಾದಿ.

ಸಂಯುಕ್ತರಂಗ: ಉದ್ಯೋಗ ಹಕ್ಕು ನೀಡಿಕೆ, ಕೆಲಸಕ್ಕೆ ಆಹಾರಧಾನ್ಯ. ಸಂಯುಕ್ತರಂಗದ ನೀತಿ ಹೆಚ್ಚು ವಾಸ್ತವವಾದದ್ದು.

ಹಣಕಾಸು ವಲಯ

ಕಾಂಗ್ರೆಸ್ : ಬ್ಯಾಂಕಿಂಗ್ ವಲಯದ ಸುಧಾರಣೆ ವಿಮಾ ವಲಯವನ್ನು ಖಾಸಗಿ ಮತ್ತು ವಿದೇಶೀಯರಿಗೆ ತೆರೆಯುವುದು.

ಬಿಜೆಪಿ: ಬ್ಯಾಂಕುಗಳ ವಿಲೀನ. ವಿಮಾವಲಯವನ್ನು ಸದ್ಯಕ್ಕೆ ದೇಶಿ ಖಾಸಗಿ ಯವರಿಗೆ ತೆರೆಯುವುದು.

ಸಂಯುಕ್ತರಂಗ : ವಿಮಾರಂಗದಲ್ಲಿ ಸುಧಾರಣೆ. ಆದರೆ ಇದು ಕನಿಷ್ಟ ಸಮಾನ ಕಾರ್ಯಕ್ರಮದಂತೆ.

ಸಹಾಯಧನಗಳು

ಕಾಂಗ್ರೆಸ್ : ಜನಸಾಮಾನ್ಯರಿಗೆ ಸ್ವಲ್ಪವಾದರೂ ಪರಿಹಾರ ನೀಡುವ ಸಹಾಯಧನಗಳಲ್ಲಿ ಕಡಿತ ಮಾಡುವುದು. ರೇಷನ್ ವ್ಯವಸ್ಥೆಯನ್ನು ಮೊಟಕುಗೊಳಿಸುವುದು.

ಬಿಜೆಪಿ : ರಸಗೊಬ್ಬರಕ್ಕೆ ಸಹಾಯಧನ ಮುಂದುವರಿಸುವುದು (ಇದು ಬಂಡವಾಳಿಗರಿಗೆ) ಬಡ ಜನತೆಗೆ ಲಭ್ಯವಾಗುವ ಸಹಾಯಧನಗಳ ಕಡಿತ ಮಾಡುವುದು.

ಸಂಯುಕ್ತರಂಗ : ಇರುವ ಸಹಾಯಧನಗಳ ಮುಂದುವರಿಕೆ ಇದಲ್ಲದೆ ರೈತರ ಸಾಲದ ಮೇಲೆ ಬಡ್ಡಿ ರಿಯಾಯಿತಿ ರೂಪದಲ್ಲಿ ಸಹಾಯಧನ. ಜನಸಾಮಾನ್ಯರ ಆಹಾರ ಭದ್ರತೆಗಾಗಿ ವಿಶೇಷ ಕ್ರಮ - ರೇಷನ್ ವ್ಯವಸ್ಥೆಯನ್ನು ಇನ್ನಷ್ಟು ಬಲಗೊಳಿಸುವುದು.

ಕೃಷಿ

ಕಾಂಗ್ರೆಸ್: ಕೃಷಿಗೆ ಉದ್ದಿಮೆ ಸ್ಥಾನ. ಭೂ ಸುಧಾರಣೆ ಮುಂದುವರಿಸುವುದು.

ಇಲ್ಲಿ ಭೂ ಸುಧಾರಣೆಯೆಂದರೆ ಭೂಮಿತಿ ಕಾಯಿದೆ ಸಡಿಲ ಗೊಳಿಸುವುದು.

ಬಂಡವಾಳಿಗರು ಭೂಮಿ ಕಬಳಿಸಲು ಅನುಕೂಲ ಮಾಡುವುದು ಇತ್ಯಾದಿ.

ಬಿಜೆಪಿ: ಕೇಂದ್ರ ಯೋಜನೆಯ ಶೇ 60 ರಷ್ಟನ್ನು ಕೃಷಿಗೆ ಮೀಸಲಿಡುವುದು ಸಕ್ಕರೆ ಕಾಕಂಬಿಗಳ ಮೇಲಿನ ನಿರ್ಬಂಧ ರದ್ದು ಇತ್ಯಾದಿ. ಇವರೂ ಬಂಡವಾಳಿಗರ ಪರವಾಗಿ ಕೃಷಿ ಸುಧಾರಣೆ ಮಾಡುವವರು.

ಸಂಯುಕ್ತರಂಗ : ಬೆಲೆ ಸ್ಥಿರೀಕರಣ ನಿಧಿಯ ಸ್ಥಾಪನೆ. ಮತ್ತೆ ಕನಿಷ್ಠ ಸಮಾನ ಕಾರ್ಯಕ್ರಮದಂತೆ ನಡೆಯುವುದು, ಸೀಮಿತ ಉದಾರೀಕರಣ.

ವಿಶ್ವ ವ್ಯಾಪಾರ ಸಂಸ್ಥೆ

ಕಾಂಗ್ರೆಸ್: ವಿಶ್ವ ವ್ಯಾಪಾರ ಸಂಸ್ಥೆಗೆ ನೀಡಿದ ಮಾತನ್ನು ಉಳಿಸಿಕೊಳ್ಳುವುದು. ಅಂದರೆ ಈ ಒಪ್ಪಂದವನ್ನು ಪೂರ್ಣ ಮಾನ್ಯಮಾಡುವುದು.

ಬಿಜೆಪಿ: ವಿಶ್ವ ವ್ಯಾಪಾರ ಸಂಸ್ಥೆಯೊಡನೆ ಸಮಾನ ಸಂಬಂಧ.

ಸಂಯುಕ್ತರಂಗ: ಕನಿಷ್ಠ ಸಮಾನ ಕಾರ್ಯಕ್ರಮದಂತೆ.

ಹೀಗೆ ಒಟ್ಟಾರೆ ಹೇಳುವುದಾದರೆ ಕಾಂಗ್ರೆಸ್ ಅನಿರ್ಬಂಧಿತ ಉದಾರೀಕರಣವನ್ನು ಪ್ರತಿಪಾದಿಸಿದೆ. ಬಿಜೆಪಿ ಅದರಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿಕೊಂಡು ಬೇರೆ ಹೆಸರಿನಲ್ಲಿ ಅದೇ ನೀತಿ ಜಾರಿಗೆ ತರುವ ಮಾತನಾಡುತ್ತದೆ.

ಸಂಯುಕ್ತರಂಗದ ಬಹುತೇಕ ಪಕ್ಷಗಳು ಹೆಚ್ಚುಕಡಿಮೆ ಕಾಂಗ್ರೆಸ್ ಮತ್ತು ಬಿಜೆಪಿಯ ನೀತಿಗಳನ್ನೇ ಹೊಂದಿದ್ದರೂ ಎಡಪಕ್ಷಗಳು ಇರುವುದರಿಂದ ಕನಿಷ್ಠ ಸಮಾನ ಕಾರ್ಯಕ್ರಮವನ್ನು ಅವು ಒಪ್ಪಿಕೊಂಡಿವೆ. ಈ ಕನಿಷ್ಟ ಸಮಾನ ಕಾರ್ಯಕ್ರಮದಿಂದಾಗಿ ಸಂಯುಕ್ತರಂಗದ ನೀತಿಗಳು ಹೆಚ್ಚು ಜನಪರವಾಗಬೇಕಾದ ಅನಿವಾರ್ಯತೆಯನ್ನು ಹೊಂದಿದೆ. ಇದೇ ಕಾರಣದಿಂದಾಗಿ ವಿಮಾ ವಲಯವನ್ನು ವಿದೇಶೀ ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆಯಲು ಸಂಯುಕ್ತರಂಗ ಸರ್ಕಾರ ಪ್ರಯತ್ನಿಸಿದರೂ ಅದು ಸಾಧ್ಯವಾಗಲಿಲ್ಲ.

ಎಲ್ಲಕ್ಕೂ ಮುಖ್ಯವಾದದ್ದೊಂದು ವಿಷಯವಿದೆ. ಅದೇ ಭ್ರಷ್ಟಾಚಾರ. ಕಾಂಗ್ರೆಸ್ ಭ್ರಷ್ಟತೆ ಶಿಖರಕ್ಕೇರಿದರೆ ಬಿಜೆಪಿ ತಾನೇನೂ ಈ ವಿಷಯದಲ್ಲಿ ಕಡಿಮೆಯಲ್ಲ ಎಂಬುದನ್ನು ಉತ್ತರ ಪ್ರದೇಶದಲ್ಲಿ ಸರ್ಕಾರ ರಚಿಸುವ ಸಂದರ್ಭದಲ್ಲಿ ತೋರಿಸಿಕೊಟ್ಟಿತು.

ಆದರೆ ಸಂಯುಕ್ತ ರಂಗ ಸರ್ಕಾರ ತನ್ನ ಆಡಳಿತದ ಅಲ್ಪ ಅವಧಿಯಲ್ಲಿ ಭ್ರಷ್ಟಾಚಾರ ಹಗರಣಗಳಿಂದ ಮುಕ್ತವಾಗಿತ್ತು.

ಕಾಂಗ್ರೆಸ್ ಮತ್ತು ಪ್ರಸ್ತಾಪ ಮಾಡದ ಕೆಲವು ಅಂಶಗಳನ್ನು ಸಂಯುಕ್ತ ರಂಗದ ಪ್ರಣಾಳಿಕೆ ಹೇಳಿದೆ.

- "ಭಾರತ ತ್ವರಿತ ಕೈಗಾರೀಕರಣಕ್ಕೆ ಮೂಲಭೂತ ಅಡ್ಡಿಯೆಂದರೆ ಅದರ ಆಂತರಿಕ ಮಾರುಕಟ್ಟೆಯ ಮೇಲಿನ ಮಿತಿ. ಸಂಯುಕ್ತ ರಂಗ ಈ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸಲು ಪ್ರಯತ್ನಿಸುತ್ತದೆ-ಬಹುಪಾಲು ಜನರಿಗೆ ಹೆಚ್ಚಿನ ಕೊಳ್ಳುವ ಶಕ್ತಿ ಬರುವಂತೆ ಮಾಡುವ ಮೂಲಕ. ಇದು ತೀವ್ರಗಾಮಿ ಭೂಸುಧಾರಣೆಗಳ ಮೂಲಕ ಮಾತ್ರವೇ ಸಾಧ್ಯ. ಇದು ಒಂದೇ ಏಟಿಗೆ ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸುತ್ತದೆ ಹಾಗೂ ಕೃಷಿಯನ್ನು ಅವಲಂಬಿಸಿರುವವರ ಜೀವನ ಮಟ್ಟವನ್ನು ಹೆಚ್ಚಿಸುತ್ತದೆ. ರಾಜ್ಯ ಸರಕಾರಗಳು ಭೂಸುಧಾರಣಾ ಶಾಸನಗಳನ್ನು ಜಾರಿಗೆ ತರುವಂತೆ ಮಾಡಲು ಸಂಯುಕ್ತ ರಂಗ ಸರ್ವಪ್ರಯತ್ನ ಮಾಡುತ್ತದೆ" ಇಂದು ಸಂಯುಕ್ತ ರಂಗದ ಪ್ರಣಾಳಿಕೆಯ ಜನಪರ ಒತ್ತನ್ನು ಎತ್ತಿತೋರಿಸುವ ಒಂದು ಅಂಶ.

ಕೋಲಾರ : ಮನೆ-ಮನೆ ಮನ-ಮನದತ್ತ ಸಿಪಿಐ(ಎಂ)

ದುಡಿಯುವ ಜನಗಳ ಪಕ್ಷ ಸಿಪಿಐ(ಎಂ) ಸ್ಪರ್ಧಿಸುತ್ತಿರುವ ಕ್ಷೇತ್ರದಿಂದ ಇತರ ಪಕ್ಷಗಳಿಗಿಂತ ಭಿನ್ನ ರೀತಿಯ ಪ್ರಚಾರ ಕಾರ್ಯದ ಒಂದು ವಿಶೇಷ ವರದಿ

ರಾಜ್ಯದ ಬರಪೀಡಿತ ಜಿಲ್ಲೆಗಳಲ್ಲಿ ಕೋಲಾರಕ್ಕೆ ಒಂದು ಪ್ರಮುಖ ಸ್ಥಾನ.

ಇಡೀ ದೇಶದಲ್ಲೆ ಅತ್ಯಧಿಕ ಅಂದರೆ ಮೂರು ಲಕ್ಷಕ್ಕೂ ಹೆಚ್ಚು ದಲಿತ ಮತದಾರರನ್ನು ಹೊಂದಿರುವ ಲೋಕಸಭಾ ಕ್ಷೇತ್ರ ಇದಾಗಿದೆ. ಇಲ್ಲಿ ಜಾತಿ ವೈಷಮ್ಯ, ದಲಿತರು ಮತ್ತು ಸವರ್ಣಿಯರ ನಡುವೆ ಜಿದ್ದಾ ಜಿದ್ದಿನ ಹೋರಾಟ ನಡೆದೇಇದೆ. ಇವುಗಳೆಲ್ಲವೂಕ್ಕಿಂತಲೂ ಇಲ್ಲಿಯ ಜನತೆ ಹಲವಾರು ಸಂಕಷ್ಟಗಳನ್ನು ಎದುರಿಸಿ ಬರಗಾಲದಲ್ಲಿ ಬೆಂದು ಬವಣೆಯ ಬದುಕು ಬದುಕುತ್ತಿರುವುದು ಸರ್ವವಿದಿತ ಸತ್ಯವೇ ಆಗಿದೆ.

ಚುನಾವಣೆ ದಿನ ಸಮೀಪಿಸುತ್ತಿರುವಂತೆ ರಾಜಕೀಯ ಪಕ್ಷಗಳ ಪ್ರಚಾರದ ವೈಖರಿ ಅಬ್ಬರಕ್ಕೇರತೊಡಗಿದೆ. ಬ್ಯಾನರ್, ಆಟೋ, ಕಾರು, ವ್ಯಾನ್, ಮೈಕ್‌ಗಳ ಮುಖಾಂತರ ಪ್ರಮುಖ ಪಕ್ಷಗಳು ಬೀದಿ ಬೀದಿಯಲ್ಲಿ ಪ್ರಚಾರ ನಡೆಸತೊಡಗಿದ್ದಾರೆ. ಆದರೆ ಸಿಪಿಐ(ಎಂ)ನ ಕಾರ್ಯಕರ್ತರು ಬೆಳಗ್ಗೆ ಎದ್ದು ಜೊತೆಗೂಡಿ ಇಂದು ತಾವು ಮತಕೇಳುವ ಮನೆಗಳ ಪಟ್ಟಿಮಾಡಿ ಅದರಂತೆ ಬೀದಿಗಳನ್ನು ಹಂಚಿಕೊಂಡು ಮನೆ ಮನೆಗಳಿಗೆ ಹೋಗಿ ಕರಪತ್ರ ನೀಡಿ ಜಿಲ್ಲೆಯ ಸಮಸ್ಯೆಗಳನ್ನು ವಿವರಿಸಿ ಅವುಗಳ ಪರಿಹಾರ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಅವರ ಮುಂದಿಟ್ಟು ಸಿಪಿಐ(ಎಂ)ನ ಹೋರಾಟದ ಪರಂಪರೆ, ಅದು ದುಡಿಯುವ ಜನತೆಯ, ರೈತರ ಪರವಾಗಿ ಕೈಗೊಂಡಿರುವ ಹಾಗೂ ಕೋಲಾರ ಜಿಲ್ಲೆಯಲ್ಲಿ ಕೆಂಬಾವುಟದ ಅಡಿಯಲ್ಲಿ ನಡೆಸಿದ ಭೂ ಹೋರಾಟದಿಂದಾಗಿ ಹಿಂದುಳಿದ ಹಾಗೂ ದಲಿತ ಜನ ಸಮುದಾಯಕ್ಕೆ ಸಿಕ್ಕ ಪ್ರತಿಫಲ ವಿವರಿಸಿ ಸಿಪಿಐ (ಎಂ) ಅಭ್ಯರ್ಥಿಗೆ ಮತ ನೀಡುವಂತೆ ಕೇಳಲಾರಂಭಿಸಿದ್ದಾರೆ.

ಕೆ.ಜಿ.ಎಫ್, ಮುಳಬಾಗಿಲು, ಚಿಂತಾಮಣಿ ಹೀಗೆ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ರಾಜ್ಯದ ಎಲ್ಲೆಡೆಯಿಂದ ಬಂದಂತಹ ಕಾರ್ಯಕರ್ತರ ಜೊತೆಗೆ ಸ್ಥಳಿಯ ಕಾರ್ಯಕರ್ತರನ್ನೊಳಗೊಂಡು ತಂಡಗಳನ್ನು ರಚಿಸಿ ಎಲ್ಲಾ ಮನೆಗಳನ್ನು ಸಂಪರ್ಕಿಸಿ ಸ್ಥಳೀಯ ಸಮಸ್ಯೆಗಳ ಜೊತೆ ಚುನಾವಣೆ ಹೇರಿಕೆ ಹಿನ್ನೆಲೆ ಹಾಗೂ ಈ ಚುನಾವಣೆಯ ಮಹತ್ವವನ್ನು ವಿವರಿಸಿ ಪಕ್ಷಕ್ಕೆ ಮತ ನೀಡುವಂತೆ ಜನತೆಯ ಮನ ಪರಿವರ್ತನೆಯಲ್ಲಿ ಕಾರ್ಯಕರ್ತರು ಮಗ್ನರಾಗಿದ್ದಾರೆ.

ಕಛೇರಿ ಎಲ್ಲಿದೆ? ನಾವು ಬರ್ತೀವಿ

ಮನೆ ಮನೆಗೆ ಹೋಗಿ ಮತ ಕೇಳುವುದರ ಜೊತೆಗೆ ವಿಶೇಷ ಜಾತ್ರೆಗಳು, ವಾರದ ಸಂತೆಗಳುಲ್ಲಿ ಬೀದಿ ಬದಿಯ ಸಭೆಗಳನ್ನು ನಡೆಸಿ, ಭ್ರಷ್ಟಚಾರದ ಹಗರಣಗಳಲ್ಲಿ ಮುಳುಗಿರುವ ಕಾಂಗ್ರೆಸ್ಸಿನ ಬಗ್ಗೆ, ಧರ್ಮದ ಅಮಲು ಹತ್ತಿಸಿ ಅಧಿಕಾರ ಬೇಡುವ ಬಿಜೆಪಿ ಬಣ್ಣವನ್ನು ಬೆತ್ತಲು ಗೊಳಿಸುತ್ತಾ ದೇಶದ ಮುಂದಿರುವ ನೈಜ ಸಮಸ್ಯೆಗಳಿಗೆ ಪರಿಹಾರ ಕೊಡಬಲ್ಲ ಪರ್ಯಾಯ ಮಾರ್ಗವನ್ನು ವಿವರಿಸುತ್ತಿದ್ದಾರೆ. ಇದನ್ನು ಕೇಳಿದ ಹಲವಾರು ಜನತೆ ಕರಪತ್ರದಲ್ಲಿರುವ ದೂರವಾಣಿ ಸಂಖ್ಯೆ ನೊಡಿ ಪಕ್ಷದ ಕಛೇರಿಗೆ ಫೋನ್ ಮಾಡುತ್ತಾರೆ - ನಿಮ್ಮ ಕಛೇರಿ ವಿಳಾಸ ಏನು? ನಾವು ನಿಮ್ಮ ಜೊತೆ ಮಾತಾಡಬೇಕು. ನಿಮ್ ಜೊತೆ ಬರಬೇಕಾಗಿದೆ. ದಿನಾಲು ಹೀಗೆ ಹತ್ತಾರು ದೂರವಾಣಿ ಕರೆಗಳು. ಬರದಲ್ಲಿ ಬೆಂದು ಬಸವಳಿದ ಜನತೆ ದುಡಿಯುವ ಜನರ ಪಕ್ಷದತ್ತ ಆಶಾ ಭಾವನೆಯಿಂದ ನೋಡುತ್ತಿರುವ ದ್ಯೋತಕ ಇದು.

ದೇವರ ಮೇಲೆ ಆಣೆ ಮಾಡಿದ್ದರು......

ಗಂಗಂಪಾಳ್ಯಾ ಇದು ಕೋಲಾರನಗರದ ಕೆ.ಎಸ್.ಆರ್ ಟಿ.ಸಿ. ಡಿಪೊ ಪಕ್ಕದಲ್ಲಿರುವ ಒಂದು ಪ್ರದೇಶ. ಅಲ್ಲಿಯ ನಿವಾಸಿ ಒಬ್ಬರು ಫೋನ್ ಮಾಡ್ತಾರೆ-ಸಾರ್, ಸಂತೆಯಲ್ಲಿ ನಿಮ್ಮವರ ಭಾಷಣ ಕೇಳಿದೆವು. ನಮ್ಮ ಪ್ರದೇಶಕ್ಕೆ ಯಾವಾಗ ಬರ್ತೀರಿ. ಸಾರ್, ಕಳೆದ ಚುನಾವಣೆ ಯಲ್ಲಿ ಕಾಂಗ್ರೆಸ್ ಮುನಿಯಪ್ಪ ದೇವರ ಮೇಲೆ ಆಣೆ ಮಾಡಿ ಹೇಳಿದ್ದರು-ನಾನು ಗೆದ್ದರೆ ರಸ್ತೆ, ನೀರು, ಬೀದಿ ದೀಪ ಹಾಕಿಸ್ತೀವಿ ಅಂತ ಹೇಳಿದ್ದರು. ಯಾವುದೂ ಮಾಡಿಲ್ಲ ಸಾರ್, ಈ ಸಾರಿ ನಿಮಗೆ ಓಟು ಕೊಡ್ತೀವಿ ಎಂದು ಹೇಳಿದರು. ಇದು ಕ್ಷೇತ್ರದ ವಿವಿಧಡೆಯಿಂದ ಕೆಂಬಾವುಟ ಹೊತ್ತ ಜನರನ್ನು ಕಂಡಾಗ ಬಂದ ಪ್ರತಿಕ್ರಿಯೆ.

ಮನ ಪರಿವರ್ತನೆಯಲ್ಲಿ ಕಲಾ ತಂಡಗಳು

ಇಡೀ ಕ್ಷೇತ್ರದಲ್ಲಿ ಈಗಾಗಲೇ ನಾಲ್ಕು ಕಲಾತಂಡಗಳು ಸಂಚರಿಸಿ ದೇಶದ ರಾಜಕೀಯ ಪರಿಸ್ಥಿತಿಯನ್ನು 'ಕಬಡ್ಡಿ' ಎಂಬ ರಾಜಕೀಯ ವಿಡಂಬನಾತ್ಮಕ ನಾಟಕದೊಂದಿಗೆ ಹಳ್ಳಿಗಳನ್ನು ತಲುಪಿ ಜನತೆಗೆ ಮನನ ಮಾಡತೊಡಗಿವೆ. ಹೀಗೆ ಕೋಲಾರದಿಂದ ಹೊರಟ ಕಲಾತಂಡ 200 ಮತದಾರರಿರುವ ಹಳ್ಳಿ ಹಂಚಾಳದಲ್ಲಿ ನಾಟಕ ಪ್ರದರ್ಶಿಸಿತು. ಕೊನೆಯಲ್ಲಿ ಕಾರ್ಯಕರ್ತರು ಕಾಗ್ರೆಸ್‌ನ ಬ್ರಹ್ಮಾಂಡ ಭ್ರಷ್ಟತೆಯನ್ನು ಹಾಗೂ ಬಿಜೆಪಿಯ ಬದಲಾದ ಬಣ್ಣದ ಜೊತೆ ಸ್ವಾತಂತ್ರ್ಯ ಹೋರಾಟದಲ್ಲಿ ಅವರ ಪಾತ್ರ ಹಾಗೂ ಭಾಜಪದ ಪ್ರಧಾನಿ ಪಟ್ಟದ ಅಭ್ಯರ್ಥಿ ವಾಜಪೇಯಿಯವರ ಬಗ್ಗೆ ವಿವರಿಸಿದರು. ಪ್ರೇಕ್ಷಕರಲ್ಲಿ ಹಳ್ಳಿಯ ಮುಂದಾಳುಗಳೂ ಇದ್ದರು. ಅವರು ಬಿಜೆಪಿ ಬೆಂಬಲಿಗರು ಕೂಡ ಆಗಿದ್ದರು. ಅವರು ತಮ್ಮ ಅಂಗಿಯ ಮೇಲೆ ಕಮಲದ ಚಿಹ್ನೆಯನ್ನು ಎಂಬ್ರಾಯಿಡ್ ಹಾಕಿಸಿ ಕೊಂಡಿದ್ದರು. ಕೊನೆಗೆ ಕಮಲ ಕಳಚಿ ಎಂತಹ ಅನಾಹುತದತ್ತ ಹೊರಟಿದ್ದೀವಿ, ಬಿಜೆಪಿಗೆ ಇಂತಹ ಕರಾಳ ಇತಿಹಾಸ ಇದೆ ಎಂದು ಗೊತ್ತಿರಲ್ಲಿಲ್ಲ. ಅದು ಕೂಡ ಸಮಯ ಸಾಧಕ ಪಕ್ಷ ಎಂಬುವುದು ಸಾಬೀತು ಪಡಿಸಿದ್ದಿರಿ ಎಂದು ಪ್ರಶಂಸಿಸಿ ಇಡೀ ತಂಡಕ್ಕೆ ಊಟ ಹಾಕಿ, ಚುನಾವಣೆಗೆ ನಿಧಿ ಕೊಡುವುದರ ಜೊತೆಗೆ ಚುನಾವಣೆಯಲ್ಲಿ ನಮ್ಮ ಹಳ್ಳಿಯ 200 ಮತಗಳು ಕುಡುಗೋಲು ಸುತ್ತಿಗೆ ನಕ್ಷತ್ರಕ್ಕೆ ಎಂದು ಹೇಳುವುದನ್ನು ಮರೆಯಲಿಲ್ಲ. ಹಾಗೆಯೆ ಕೆ.ಜಿ.ಎಫ್.ನಲ್ಲಿ ಅಂಬೇಡ್ಕರ್ ಫೊಟೋ ಹಾಕಿ ಕೊಂಡು ಪ್ರಚಾರ ಮಾಡುವ ಬಿಜೆಪಿ ಕಾರ್ಯಕರ್ತರಿಗೆ ಅಲ್ಲಿಯ ವೃದ್ಧರ ಪ್ರಶ್ನೆ-ನಾವು ದಲಿತರು, ನಾವು ಎಲ್ಲಾ ರೀತಿಯ ಮಾಂಸತಿನ್ನುವ ಜನ, ಜನಿವಾರದ ಜನ ನಮ್ಮ ಕಾಲೋನಿಗೆ ಬರಬಾರದು ನಿಮಗೆ ಮೈಲಿಗೆ ಆಗುತ್ತದೆ ಎಂದು ಹಿಂದೆ ಕಳುಹಿಸಿದರಂತೆ. ಕೆ.ಜಿ.ಎಫ್.ನ ಒಬ್ಬ ವೃದ್ಧನ ಮಾತೆಂದು ತಳ್ಳಿಹಾಕುವಂತಿಲ್ಲ. ಶತಶತ ಮಾನಗಳಿಂದ ಬ್ರಾಹ್ಮಣಶಾಹಿ ಪದ್ಧತಿಯಡಿ ನೋವುಂಡು ಅವಮಾನ ಅನುಭವಿಸಿದ ಇಡೀ ದಲಿತ ಸಮುದಾಯದ ಅಂತರಾಳದ ಪ್ರತಿ ಕ್ರಿಯೆ ಇದಾಗಿದೆ.

ಮುಂದಿರುವ ಸಮಸ್ಯೆಗಳು

ಮೇಲೆ ಹೇಳಿದಂತೆ ಇಡೀ ಜಿಲ್ಲೆ ಸದಾಕಾಲ ಬರಗಾಲದಿಂದ ಕೊಡಿದ್ದು ಇಡೀ ಜನ ಸಮುದಾಯ ಬರದ ಛಾಯೆಯಲ್ಲಿ ಬದುಕುವುದು ಅನಿವಾರ್ಯವಾಗಿಬಿಟ್ಟಿದೆ. ಇದರ ಜೊತೆಗೆ ಅಂತರ್ಜಲ ಕೂಡ ಕಡಿಮೆಯಾಗುತ್ತಿದ್ದು ಕೃಷಿಕರು, ಅಷ್ಟೆ ಅಲ್ಲ ಕೂಲಿಕಾರರು ಹಾಗೂ ದಲಿತರು ದೈನಂದಿನ ಬದುಕಿಗಾಗಿ ಬವಣೆ ಪಡುತ್ತಿದ್ದಾರೆ. ಇಷ್ಟೇ ಅಲ್ಲದೆ ಇಲ್ಲಿನ ಕುಡಿಯುವ ನೀರು ಕೂಡ ಶುದ್ಧವಾಗಿಲ್ಲದೆ ಒಂದೆಡೆ ಫ್ಲೋರೈಡ್‌ನಿಂದ ಕೂಡಿದ್ದರೆ, ಮತ್ತೊಂದು ಕಡೆ ಸಲ್ಫೈಡ್ ನಿಂದ ಕೂಡಿದೆ. ಕುಡಿಯಲು ಆರೋಗ್ಯಕರವಾಗಿಲ್ಲ. ಜಿಲ್ಲೆಯಲ್ಲಿ ರಸ್ತೆ ಹಾಗೂ ಬಸ್ ವ್ಯವಸ್ಥೆ ಇಲ್ಲವಾಗಿದೆ. ಕೃಷಿ ಆಧಾರಿತ ಉದ್ದಿಮೆಗಳು ಈಗಾಗಲೇ ಜಿಲ್ಲೆಯಲ್ಲಿ ಸ್ಥಾಪತವಾಗಿರಬೇಕಿತ್ತು. ಜನ ಪ್ರತಿನಿಧಿಗಳ ಹಾಗೂ ರಾಜಕೀಯ ಪಕ್ಷಗಳ ನಡುವಿನ ವೈಷಮ್ಯಗಳಿಂದ ಅದು ನೆನೆಗುದಿಗೆ ಸರಿದಂತಾಗಿದೆ. ರೇಷ್ಮೆ ಜಿಲ್ಲೆಯ ಆದಾಯದ ಮಧ್ಯಮ, ಕೆಳಮಧ್ಯಮ ಹಾಗೂ ಬಡ ರೈತರ ಜೀವನಾಧಾರ ರೇಷ್ಮೆ ಕೃಷಿಯಾಗಿದೆ. ಇಲ್ಲಿ ಉತ್ಪಾದನೆಯಾಗುವ ರೇಷ್ಮೆ ದೇಶದಲ್ಲಿ ಅತ್ಯುತಮವಾದದ್ದು. ಆದರೆ ಬೆಳೆಗಾರರಿಗೆ ಸರಿಯಾದ ಬೆಲೆ, ಉತ್ತಮವಾದ ಬಿತ್ತನೆ ಸಿಗದೆ ಜೊತೆಗೆ ಸರಿಯಾದ ಮಾರುಕಟ್ಟೆ ಸೌಲಭ್ಯ ಸಿಗದೆ ರೇಷ್ಮೆ ಬೆಳೆಗಾರ ತೀವ್ರ ಸಂಕಷ್ಟದಲ್ಲಿದ್ದಾನೆ. ಇಲ್ಲಿನ ಮತ್ತೊಂದು ಆರ್ಥಿಕತೆಯ ಮೂಲವೆಂದರೆ ಹೈನುಗಾರಿಕೆ ಇಂದು ಅದುಕೂಡ ಕುಂಟತೊಡಗಿದೆ. ಉತ್ಪಾದನಾ ವೆಚ್ಚ ಹೆಚ್ಚಾಗಿ ಸೂಕ್ತವಾದ ಬೆಲೆ ಸಿಗದೆ ಹೈನುಗಾರಿಕೆ ಕೋಲಾರದಿಂದ ಕಾಲ್ತೆಗೆಯುವಂತಹ ಪರಿಸ್ಥಿತಿ ನಿರ್ಮಾಣಗೊಂಡಿದೆ. ಹೈನುಗಾರಿಕೆಯ ಬೆಳವಣಿಗೆಗೆ ಬ್ಯಾಂಕುಗಳು ಪರಿಣಾಮ ಕಾರಿಯಾಗಿ ಮಧ್ಯ ಪ್ರವೇಶಿಸಿ ಸುಲಭ ದರದಲ್ಲಿ ಸಾಲ ನೀಡುವಂತಿದ್ದರೆ ಹೈನುಗಾರಿಕೆ ಹೆಚ್ಚಿನ ಬೆಳವಣಿಗೆ ಕಾಣಬಹುದಾಗಿತ್ತು.

ಕೈಗಾರಿಕಾ ಸಮಸ್ಯೆಗಳು

ಜಿಲ್ಲೆಯ ಎರಡು ಸರ್ಕಾರಿ ಉದ್ದಿಮೆಗಳಾದ ನೂರಾರು ವರ್ಷದಷ್ಟು ಹಳೆಯದಾದ ಕೋಲಾರದ ಚಿನ್ನದ ಗಣಿ ಮುಚ್ಚುವಿಕೆಯತ್ತ ಸಾಗಿದೆ ಹಾಗೆಯೇ ಬಿ.ಇ.ಎಂ .ಎಲ್ ಕಾರ್ಖಾನೆ ರೋಗಗ್ರಸ್ಥಗೊಂಡಿದೆ. ಇದರಿಂದಾಗಿ ಒಂದು ಕಾಲದಲ್ಲಿ 13 ಸಾವಿರ ಕಾರ್ಮಿಕರು ಕೆಲಸ ಮಾಡುತ್ತಿದ್ದ ಗಣಿಯಲ್ಲಿ ಕೇವಲ 3 ಸಾವಿರ ಕಾರ್ಮಿಕರು ಮಾತ್ರ ಕೆಲಸ ಮಾಡುತ್ತಿದ್ದಾರೆ. ಅವರಿಗೂ ಕೂಡ ಸರಿಯಾದ ಸಂಬಳ ಸಿಗುತ್ತಿಲ್ಲವಾಗಿದೆ. ಉಳಿದವರು ಪಕ್ಕದ ರಾಜ್ಯಗಳಿಗೆ ಪ್ರತಿನಿತ್ಯ ಕೆಲಸ ಹುಡುಕಲು ವಲಸೆ ಪ್ರಾರಂಭಿಸಿದ್ದಾರೆ. ಅವರ ಕುಟುಂಬಗಳ ಕಥೆ ಇಂದು ಚಿಂತಾಜನಕ ವಾಗಿದೆ. ಜೊತೆಗೆ ಜಿಲ್ಲೆಯಲ್ಲಿ ರೈಲ್ವೆ ಅಭಿವೃದ್ಧಿ ಕಾರ್ಯ ಗಳನ್ನು ಕೈಗೊಂಡಿಲ್ಲ

ಈ ಮೇಲಿನ ನೈಜ ಸಮಸ್ಯೆಗಳಿಗೆ ಪರಿಹಾರ ಕಾಣುವ ಬದಲು ಜನ ಪ್ರತಿನಿಧಿಗಳು ಹಾಗೂ ಪ್ರಮುಖ ಪಕ್ಷಗಳು ಸಮಾಜದಲ್ಲಿ ಸವರ್ಣಿಯ ಹಾಗೂ ದಲಿತ ಎಂಬ ಸಮಸ್ಯೆಯನ್ನು ಸೃಷ್ಟಿಸಿ ಬಡವರ, ದಲಿತರ ಬದುಕಿನ ಸಂಕಟ ಹೆಚ್ಚಿಸಿದ್ದಾರೆ.

ಜಿಲ್ಲೆಯಲ್ಲಿ ದಲಿತರು ಶೇ 23 ರಷ್ಟಿದ್ದು ಅವರ ಬದುಕಿನ ಮೂಲ ಪ್ರಶ್ನೆಯಾದ ಭೂಮಿ ಕೂಲಿ ವಸತಿ ವಿದ್ಯಾಭ್ಯಾಸ, ಆರೋಗ್ಯ ಇವುಗಳಿಗೆ ಎಳ್ಳು ನೀರು ಬಿಟ್ಟು ತಮ್ಮ ಪಾಳೇಗಾರಿ ಮೌಲ್ಯದಡಿಯಲ್ಲಿಯೇ ತಮ್ಮ ರಾಜಕೀಯ ನೆಲೆಯನ್ನು ಭದ್ರಪಡಿಸಿಕೋಳ್ಳುವತ್ತ ಸಾಗಿದ್ದಾರೆ.

ಮೇಲಿನ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಿಪಿಐ(ಎಂ)ನ ಅಭ್ಯರ್ಥಿ ಸಂಸತ್ತನ್ನು ಪ್ರವೇಶಿಸಿದರೆ ಮಾತ್ರ ಸಾಧ್ಯ ಎನ್ನುತ್ತಾರೆ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾದ ಜಿ.ವಿ.ಶ್ರೀರಾಮರೆಡ್ಡಿಯವರು ಬಿ.ಇ.ಎಂ.ಎಲ್. ರೋಗಗ್ರಸ್ಥವಾಗಲು ಹಾಗೂ ಜಿಲ್ಲೆಗೆ ಕೃಷಿ ಆಧಾರಿತ ಉದ್ದಿಮೆಗಳು ಬರಬೇಕಾದರೆ ದೇಶದ ಆರ್ಥಿಕ ಕೈಗಾರಿಕಾ ನೀತಿಗಳಲ್ಲಿ ಬದಲಾವಣೆ ಅಗತ್ಯ. ನಮ್ಮ ಪಕ್ಷ ಸಾರ್ವಜನಿಕ ಉದ್ದಿಮೆಗಳನ್ನು ರಕ್ಷಿಸುವಂತೆ ಒತ್ತಾಯಿಸುವುದಲ್ಲದೆ ರಾಷ್ಟ್ರಾಭಿವೃದ್ದಿಗೆ ಪೂರಕವಾದಂತಹ ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದರಿಂದಾಗಿ ದಲಿತ ಹಾಗೂ ಹಿಂದುಳಿದ ಅಲ್ಪಸಂಖ್ಯಾತರ ಪರವಾಗಿರುವುದರ ಜೊತೆಗೆ ಅವರ ಹೋರಾಟಗಳ ಜೊತೆ ನಾವು ಸದಾ ಇರುವುದರಿಂದಾಗಿಯೇ ಕೋಲಾರದಲ್ಲಿ 4 ಲಕ್ಷಕ್ಕೂ ಹೆಚ್ಚು ಎಕರೆ ಭೂಮಿಯನ್ನು ದಲಿತರು ಮತ್ತು ಬಡವರು 1973 ರ ಭೂಗ್ರಹಣ ಚಳುವಳಿಯಲ್ಲಿ ಪಡೆಯುವಂತಾಯಿತು ಎನ್ನುತ್ತಾರೆ. ಈ ಎಲ್ಲಾ ಕಾರ್ಯಗಳಿಂದಾಗಿ ಜಿಲ್ಲೆಯ ಜನತೆ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಒಲವುಳ್ಳವರಾಗಿದ್ದಾರೆ. ಪಕ್ಷಕ್ಕೆ ಮತ ಹಾಕಲು ಸಂತೋಷವಾಗುತ್ತಿದೆ ಎನ್ನುತ್ತಾರೆ ಮುಳುಬಾಗಿಲಿನ ಬಹುತೇಕ ಹಳ್ಳಿಯ ಹಿರಿಯರು.

ಈ ಕ್ಷೇತ್ರದ ಮತದಾರರ ಸಂಖ್ಯೆ 10,81,952. ಅದರಲ್ಲಿ ಮಹಿಳಾ ಮತದಾರರ ಸಂಖ್ಯೆ 5,34,643 ಕಳೆದ ಚುನಾವಣೆಗಿಂತ 44,776 ಹೆಚ್ಚಿನ ಮತದಾರರನ್ನು ಹೊಂದಿದೆ. ಕಣದಲ್ಲಿ ಸಿಪಿಐ(ಎಂ), ಜನತಾದಳ, ಕಾಂಗ್ರೆಸ್, ಬಿಜೆಪಿ ಹಾಗೂ ಕೆಪಿಸಿ ಪಕ್ಷಗಳ ಅಭ್ಯರ್ಥಿಗಳು ಇದ್ದಾರೆ. ಸಿಪಿಐ(ಎಂ)ನ ಪ್ರಚಾರ ವೈಖರಿ ಮುಳಬಾಗಿಲು, ಕೆಜಿಎಫ್, ಚಿತಾಮಣಿ ಕಡೆಗಳಲ್ಲಿ ವಿರೋಧ ಪಕ್ಷಗಳಲ್ಲಿ ನಡುಕ ಹುಟ್ಟಿಸಿದೆ.



ಚುನಾವಣಾ ಕಛೇರಿಯೊಂದನ್ನು ಉದ್ಘಾಟಿಸುತ್ತಿರುವ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯ ಎಸ್.ವೈ.ಗುರುಶಾಂತ್

ವರದಿ: ಎಂ. ಜಯರಾಂ


ಜಾತ್ಯಾತೀತತೆ,ಪ್ರಜಾಪ್ರಭುತ್ವ, ಆರ್ಥಿಕ ಸಾರ್ವಭೌಮತೆಯ ರಕ್ಷಣೆಗಾಗಿ ಬುದ್ಧಿಜೀವಿಗಳ ಕರೆ

ಧಾರವಾಡ: ಭಾರತದ ಸ್ವಾತಂತ್ರದ ಸುವರ್ಣ ಮಹೋತ್ಸವದ ಹಾಗೂ 12ನೇ ಲೋಕಸಭಾ ಚುನಾವಣೆಯ ಸಂದರ್ಭ, ಸಂವಿಧಾನದ ಮೂಲಭೂತ ಆಶಯಗಳಾದ ಜಾತ್ಯಾ ತೀತತೆ, ಸಂಸದೀಯ ಪ್ರಜಾ ಪ್ರಭುತ್ವ, ಸಾಮಾಜಿಕ ನ್ಯಾಯ, ಆಡಳಿತದಲ್ಲಿ ಪಾರ ದರ್ಶಕತೆ, ಆರ್ಥಿಕ ಸಾರ್ವಭೌಮತೆ ಇತ್ಯಾದಿ ಗಳ ರಕ್ಷಣೆ ಗಾಗಿ ಧಾರವಾಡದ ಬುದ್ಧಿ ಜೀವಿಗಳ ಸಮಾವೇಶ ಕರೆ ಕೊಟ್ಟಿದೆ. ಈ ದಿನ ಸಂಜೆ ವಿದ್ಯಾವರ್ಧಕ ಸಂಘದಲ್ಲಿ "ಸಮ ಕಾಲೀನ ರಾಜಕೀಯ ಸವಾಲುಗಳು" ಕುರಿತು ನಡೆದ ವಿಚಾರ ಗೋಷ್ಠಿಯಲ್ಲಿ ತೀವ್ರ ಆರ್ಥಿಕ ಬಿಕ್ಕಟ್ಟು, ರಾಜಕೀಯ ಅಸ್ಥಿರತೆ, ಭ್ರಷ್ಟಾಚಾರ, ರಾಜಕೀಯ ಅಪರಾಧೀಕರಣ, ಕೋಮುವಾದ ಮತ್ತು ದಲಿತರ ಮೇಲಿನ ದೌರ್ಜನ್ಯ, ಧರ್ಮಾಂಧತೆ, ಜಾತೀಯತೆ ಪ್ರತ್ಯೇಕತೆ ಹಾಗೂ ವಿಚ್ಛಿದ್ರಕಾರಿ ಪ್ರವೃತ್ತಿ, ಮಹಿಳೆ ಯರ ಹಾಗೂ ದಲಿತರ ಮೇಲಿನ ದೌರ್ಜನ್ಯ, ಸಮೂಹ ಮಾಧ್ಯಮದಲ್ಲಿ ಗ್ರಾಹಕ ಸಂಸ್ಕೃತಿ ಇತ್ಯಾದಿ ವಿಷಯುಗಳ ಕುರಿತು ಗಂಭೀರ ಚರ್ಚೆಗಳಾದವು. ಈ ವಿಚಾರ ಗೋಷ್ಠಿಯನ್ನು ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ, ಸಂಯುಕ್ತ ಮಹಿಳಾ ವೇದಿಕೆ, ಇಪ್ಟಾ, ಬಂಡಾಯ ಸಾಹಿತ್ಯ, ಸಮುದಾಯ ಸಂಘಟನೆಗಳ ಜಂಟಿ ಆಶ್ರಯ ದಲ್ಲಿ ಏರ್ಪಡಿಸಲಾಗಿತ್ತು. ಚರ್ಚೆಯಲ್ಲಿ ಜಿ.ಟಿ.ಪಡಕಿ, ಡಾ.ಸಂಜೀವ ಕುಲಕರ್ಣಿ, ಪ್ರೊ.ಎಲ್.ಆರ್.ಅಂಗಡಿ, ಡಾ.ಸಿದ್ಧನಗೌಡ ಪಾಟೀಲ, ಆರ್.ಎಚ್.ಆಯಿ, ಪ್ರೊ.ಎಸ್. ಆರ್.ತೋಂಟ ದಾರ್ಯ, ಡಾ. ಹೇಮಾ ಪಟ್ಟಣಶೆಟ್ಟಿ, ಸಿ.ಎಸ್. ಶಾಸ್ತ್ರಿ ಮಠ ಭಾಗ ವಹಿಸಿದ್ದರು. ಆಧ್ಯಕ್ಷತೆ ವಹಿಸಿದ್ದ ಡಾ. ವಿ.ಎಮ್. ದೇಶಪಾಂಡೆ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಚರ್ಚೆಗೆ ಚಾಲನೆ ನೀಡಿದರು. ಕೊನೆಯಲ್ಲಿ ದೇಶದ ಮುಂದಿರುವ ಸವಾಲು ಗಳನ್ನು ಸಮರ್ಥ ವಾಗಿ ಪರ್ಯಾಯ ಆರ್ಥಿಕ ನೀತಿಯನ್ನು ಅಂಗೀಕರಿಸಲು ಮುಂಬ ರುವ ಹೊಸ ಸರಕಾರಕ್ಕೆ ಒತ್ತಾಯಿಸುವಂತೆ ಮತದಾರರಿಗೆ ಮನವಿಯನ್ನು ಬಿ.ಎನ್. ಪೂಜಾರ ಮಂಡಿಸಿದರು. ವಿವಿಧ ಸಾಂಸ್ಕೃತಿಕ ಸಂಘಟನೆಗಳ ಪರವಾಗಿ ಮನವಿ ಸರ್ವಾನು ಮತದಿಂದ ಅಂಗೀಕರಿಸಲಾಯಿತು.

ಪ್ರಾರಂಭದಲ್ಲಿ ಸಿ.ಆರ್.ಭಟ್ ಅವರು ಬರೆದ 'ಶ್ರೀಮಂತ ಭಾರತದಲ್ಲಿ ಬಡ ಭಾರತೀಯರು' ಎಂಬ ಪುಸ್ತಕವನ್ನು ಎಸ್.ಬಿ.ಪೂಜಾರ ಬಿಡುಗಡೆ ಮಾಡಿದರು. ಬಿ.ಎಸ್.ಸೊಪ್ಪಿನ ಸ್ವಾಗತಿಸಿಕಾರ್ಯಕ್ರಮ ನಿರ್ವಹಣೆ ಮಾಡಿದರು. ಬಿ.ಐ.ಈಳಿಗೇರ ಧನ್ಯವಾದ ನೀಡಿದರು.

ಹಿಂದಿನ ತಪ್ಪುಗಳ ಅಜೆಂಡಾ ತಾನಿಲ್ಲದೆ ದೇಶವಿಲ್ಲ ಎಂಬ ಭ್ರಮೆ

ಕಾಂಗ್ರೆಸ್ ಪ್ರಣಾಳಿಕೆ



'ಹಿಂದೂ'ನಲ್ಲಿ ಸುರೇಂದ್ರನ್

ಕಾಂಗ್ರೆಸ್ ಪಕ್ಷ ತನ್ನ ಹಿಂದಿನ ತಪ್ಪುಗಳಿಂದ ಪಾಠ ಕಲಿಯಲು ಸಿದ್ಧವಿಲ್ಲ, ಅದು ಅದಕ್ಕೆ ಸಾಧ್ಯವೂ ಇಲ್ಲ. ಇದು ೧೨ನೇ ಲೋಕಸಭಾ ಚುನಾವಣೆಗಳ ಅದರ ಪ್ರಣಾಳಿಕೆಯನ್ನು ನೋಡಿದಾಗ ಅನಿಸುವ ಮೊದಲ ಸಂಗತಿ ಎನ್ನುತ್ತಾರೆ ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರವರು. ಕಾಂಗ್ರೆಸ್ ಮುಖಂಡರು ಸಾಲುಗಟ್ಟಿ ಬಿ.ಜೆ.ಪಿ. ಕಡೆಗೆ ಹೋಗುತ್ತಿರುವಾಗ, ಇಂತಹ ಅಧಃಪತನಕ್ಕೆ ಕಾರಣಗಳನ್ನು ಪರಿಶೀಲಿಸದ ಬೇರೆ ಪಕ್ಷಗಳ ಮೇಲೆಯೇ, ಅದರಲ್ಲೂ ಬಿ.ಜೆ.ಪಿ.ಗಿಂತ ಸಂಯುಕ್ತರಂಗದ ಮೇಲೆಯೇ ದಾಳಿಮಾಡುತ್ತಾ ತಾನಿಲ್ಲದೆ ದೇಶವಿಲ್ಲ ಎಂಬಂತೆ ಮಾತನಾಡುತ್ತಿದೆ. ಕಾಂಗ್ರೆಸ್ ಪ್ರಣಾಳಿಕೆಯ ಕೆಲವು ಮುಖ್ಯ ಅಂಶಗಳ ವಿಮರ್ಶೆ ಇಲ್ಲಿದೆ.

• **ತಾ**ನೇಕೆ ಸಂಯುಕ್ತರಂಗ ಸರಕಾರಕ್ಕೆ ಬೆಂಬಲ ಹಿಂತೆಗೆದುಕೊಂಡೆ ಎಂಬ ಬಗ್ಗೆ ವಿವರವಾದ ಸಮರ್ಥನೆಯೊಂದಿಗೇ ಈ ಪ್ರಣಾಳಿಕೆ ಆರಂಭವಾಗುತ್ತದೆ. ರಾಜೀವ್ ಗಾಂಧಿಯವರನ್ನು ಕೊಂದ ಎಲ್.ಟಿ.ಟಿ.ಇ.ಗೆ ಆರಂಭದಲ್ಲಿ ಪೋಷಣೆ, ಪ್ರೋತ್ಸಾಹ ದೊರೆತದ್ದು ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಸರಕಾರದಿಂದಲೇ. ಅವರ ಹತ್ಯೆ ನಡೆದಾಗ ತಮಿಳುನಾಡಿನಲ್ಲಿ ರಾಷ್ಟ್ರಪತಿ ಆಳ್ವಿಕೆಯಿತ್ತು. ಕೇಂದ್ರದಲ್ಲಿ ಕಾಂಗ್ರೆಸ್ ಬೆಂಬಲಿತ ಚಂದ್ರಶೇಖರ್ ಸರಕಾರವಿತ್ತು ಎಂಬುದನ್ನು ಮಾತ್ರ ಅದು ಹೇಳುವುದಿಲ್ಲ. ಈ ಮಧ್ಯಂತರ ಚುನಾವಣೆಗಳಿಗೆ ಕಾಂಗ್ರೆಸ್‌ನ ಈ ಬುದ್ಧಿ ಹೀನ ಒತ್ತಾಯವೇ ಕಾರಣವಾದರೂ ಚುನಾವಣಾ ಪ್ರಚಾರದಲ್ಲಿ ಮುಖ್ಯ ಪ್ರಚಾರಕರಾದ ಸೋನಿಯಾ ಗಾಂಧಿ ಈ ಬಗ್ಗೆ ಚಕಾರವನ್ನೂ ಎತ್ತುತ್ತಿಲ್ಲ. ಬಿ.ಎಸ್.ಪಿ.ಯ ಮಾಯಾವತಿ ನೇತೃತ್ವದ ಉತ್ತರಪ್ರದೇಶದಲ್ಲಿ ಸರಕಾರ ರಚಿಸಲು ಸಂಯುಕ್ತರಂಗ ಅಡ್ಡಿಯಾಯಿತು ಎಂಬ ಅಂಶ ಪ್ರಣಾಳಿಕೆಯಲ್ಲಿನ ಇನ್ನೊಂದು ಟೀಕೆ. ಆದರೆ ಈ ಬಿ.ಎಸ್.ಪಿ. ಬಿ.ಜೆ.ಪಿ ಜೊತೆ ಸೇರುವುದಿಲ್ಲ ಎಂಬ ಮಾತು ಕೊಡಲು ಸಿದ್ಧವಾಗಲಿಲ್ಲ, ನಂತರ ಬಿ.ಜೆ.ಪಿಯೊಂದಿಗೆ ಕೈಮಿಲಾಯಿಸಿತು ಕೂಡಾ. ಆದರೂ ಕಾಂಗ್ರೆಸ್ ಈಗಲೂ ಇಂತಹ ಟೀಕೆಗಿಳಿದಿದೆ.

• ಹೀಗೆ ಬಿ.ಜೆ.ಪಿ.ಯ ಬಗ್ಗೆ ಮೃದು ನಿಲುವಿಗೆ ಕಾಂಗ್ರೆಸ್ ಕುರುಡಾಗಿರುವುದು ಇದೇ ಮೊದಲಲ್ಲ. ಪ್ರಣಾಳಿಕೆಯ 56 ಪುಟಗಳಲ್ಲಿ 3 ಪುಟ ಆರ್.ಎಸ್.ಎಸ್./ಬಿ.ಜೆ.ಪಿ.ಯ ಟೀಕೆಗೇ ಮಿಸಲಾಗಿದ್ದರೂ ಆರಂಭದಿಂದಲೂ ಪ್ರತಿ ನಿರ್ಣಾಯಕ ಘಟ್ಟದಲ್ಲೂ ಅದು ಕೋಮುವಾದಿಗಳೊಂದಿಗೆ ರಾಜಿಗಿಳಿದ ಫಲವನ್ನೇ ತಾನೀಗ ಉಣ್ಣುತ್ತಿದ್ದೇನೆ-ತನ್ನ ಮುಖಂಡರುಗಳು ಯಾವುದೇ ನಾಚಿಕೆ-ಬೇಸರವಿಲ್ಲದೆ ಬಿ.ಜೆ.ಪಿ. ಕಡೆಗೆ ಹೋಗುತ್ತಿದ್ದಾರೆ ಎಂಬುದನ್ನು ಅರಿಯಲು ಅದಕ್ಕಿನ್ನೂ ಆಗಿಲ್ಲ- ರಾಜೀವ್‌ಗಾಂಧಿಯವರ ಆಡಳಿತ ಕಾಲದಲ್ಲಿ ಮಸೀದಿಯ ಬೀಗ ತೆಗೆದದ್ದು, ಶಿಲಾನ್ಯಾಸಕ್ಕೆ ಅವಕಾಶ ಕೊಟ್ಟದ್ದರಿಂದ ಹಿಡಿದು ನರಸಿಂಹರಾಯರ ಕಾಲದಲ್ಲಿ ಮಸೀದಿಯ ಧ್ವಂಸದವರೆಗೆ ಜಾತ್ಯಾತೀತತೆಗೆ ಕಾಂಗ್ರೆಸ್ ಮಾಡಿದ ವಿಶ್ವಾಸಘಾತವೇ ಅದರ ಈಗಿನ ಸ್ಥಿತಿಗೆ ಮುಖ್ಯ ಕಾರಣ-1992ರ ನಂತರವೂ ನರಸಿಂಹರಾಯರ ಸರಕಾರ ಶಂಕರಾಚಾರ್ಯರ ಮೂಲಕ ವಿ.ಹೆಚ್.ಪಿ.ಯೊಂದಿಗೆ ಸ್ಪರ್ಧೆಗಿಳಿಯಿತೇ ವಿನಃ ಜಾತ್ಯಾತೀತತೆಯ ರಕ್ಷಣೆಗೆ ನಿಲ್ಲಲಿಲ್ಲ. ಕಾಂಗ್ರೆಸ್ ಪ್ರಣಾಳಿಕೆ ಇದನ್ನು ಮರೆಮಾಚಿದೆ. ಆದ್ದರಿಂದಲೇ ಈಗ ಕಾಂಗ್ರೆಸ್ ಬಿ.ಜೆ.ಪಿ.ಯನ್ನು ಎದುರಿಸಬಲ್ಲ ರಾಜಕೀಯ ಶಕ್ತಿಯಾಗಿ ಉಳಿದಿಲ್ಲ ಎಂಬುದು ಜನರಿಗೆ ಸ್ವಯಂ ವೇದ್ಯ. ಈ ಹಿನ್ನೆಲೆಯಲ್ಲಿ *ಬಾಬ್ರಿಮಸೀದಿ ಧ್ವಂಸದ ಬಗ್ಗೆ ಕಾಂಗ್ರೆಸ್ ಪ್ರಣಾಳಿಕೆಯ ಕ್ಷಮಾಯಾಚನೆ ಅರ್ಥ ಹೀನ.*

ಎಡ ಪಕ್ಷಗಳ ಮೇಲೆ ಹರಿಹಾಯುವುದೇಕೆ?

• ಕಾಂಗ್ರೆಸ್ ಪ್ರಣಾಳಿಕೆ ಎಡಪಕ್ಷಗಳ ಮೇಲೆ ಹರಿಹಾಯ್ದಿದೆ. ಕಳೆದ 20 ವರ್ಷಗಳಲ್ಲಿ ಎಡರಂಗ ಪಶ್ಚಿಮಬಂಗಾಳವನ್ನು ಹಾಳುಗೆಡವಿದೆಯಂತೆ. ಹಳ್ಳಿಗಳಿಗೆ ಅಧಿಕಾರಗಳನ್ನು ವಿಕೇಂದ್ರೀಕರಿಸಿದ ಅತ್ಯಂತ ಅಭಿವೃದ್ಧಿ ಹೊಂದಿದ ಪಂಚಾಯತ್ ರಾಜ್ಯದ ಪ್ರಸ್ತಾಪವಿಲ್ಲ. ನಿರ್ಣಯ ಪ್ರಕ್ರಿಯೆ, 'ಪಕ್ಷಪಾತೀ ಹಿತಾಸಕ್ತಿಗಳ' ಕೈಯಲ್ಲಿದೆಯಂತೆ. ಅಲ್ಲಿ 'ಕ್ಯಾಡರ್ ರಾಜ್'(ಪಕ್ಷದ ಕಾರ್ಯಕರ್ತರ ರಾಜ್ಯ) ನಡೆಯುತ್ತಿದೆಯೆಂದು ಹೇಳಿ ಎಡರಂಗದ ಸಾಧನೆಗಳನ್ನು ಮರೆಮಾಚುವ ಪ್ರಯತ್ನ ಮಾಡಲಾಗಿದೆ.

• ತನ್ನ ಕುರುಡು ಕಾಂಗ್ರೆಸ್-ವಿರೋಧದಿಂದ ಸಿಪಿಐ(ಎಂ) ಬಿಜೆಪಿಗೆ ಗೌರವಾರ್ಹತೆ ತಂದುಕೊಟ್ಟಿದೆಯೆಂಬುದು ಪ್ರಣಾಳಿಕೆಯಲ್ಲಿರುವ ಆರೋಪ. ಈಗ ಬಿಜೆಪಿಗೆ ಮುಖಂಡರನ್ನು ಒದಗಿಸುತ್ತಿರುವ ಒಂದು ಪಕ್ಷದಿಂದ ಇಂತಹ ಮಾತುಗಳು ಅಸಂಬದ್ಧವಲ್ಲದೆ ಇನ್ನೇನು?

• ತನ್ನನ್ನು ಬಿಟ್ಟರೆ *ಬಿಜೆಪಿಯನ್ನು ಎದುರಿಸಲು ಬೇರಾರಿಗೂ ಸಾಧ್ಯವಿಲ್ಲ ಎಂದು ನಂಬಿದ್ದ ಕಾಂಗ್ರೆಸ್ ಸಂಯುಕ್ತ ರಂಗದ ರಚನೆ, ಅದರಲ್ಲಿ ಎಡಪಕ್ಷಗಳ ಪಾತ್ರವನ್ನು ಹೇಗೆ ತಾನೆ ಸಹಿಸಲು ಸಾಧ್ಯ?*

ರಾಷ್ಟ್ರವಿರೋಧಿ ಆರ್ಥಿಕ ನೀತಿ

• ನರಸಿಂಹರಾಯರನ್ನು ಕೋಮುವಾದಿಗಳನ್ನು ತೃಪ್ತಿಪಡಿಸಿದ ಕಾಂಗ್ರೆಸ್ ನೀತಿಗಳಿಗೆ ಬಲಿಪಶು ಮಾಡಿದರೂ ದೇಶವನ್ನು ವಿನಾಶದೆಡೆಗೆ ಒಯ್ದ ಅವರ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ಈಗಿನ ಕಾಂಗ್ರೆಸ್ ಮುಖಂಡತ್ವ ಅಂಗೀಕರಿಸಿದೆ- ಈ ಪ್ರಣಾಳಿಕೆ ಆ ನೀತಿಗಳನ್ನು ಯಾವ ನಾಚಿಕೆಯೂ ಇಲ್ಲದೆ ಪ್ರತಿಪಾದಿಸಿದೆ. *ಇದು ಕಾಂಗ್ರೆಸ್ ಪ್ರಣಾಳಿಕೆಗಳಲ್ಲಿ ಅತ್ಯಂತ ದೊಡ್ಡ ಬಂಡವಾಳ-ಪರವಾದ, ಬಹುರಾಷ್ಟ್ರೀಯ ಕಂಪನಿಗಳ ಪರವಾದ, ಐ.ಎಂ.ಎಫ್.-ವಿಶ್ವಬ್ಯಾಂಕ್ ಹೇರಿದ ಮಾದರಿಯ ಪರವಾದ ಪ್ರಣಾಳಿಕೆ.* ಕಾಂಗ್ರೆಸ್ಸಿನ ಹಣಕಾಸು ಮಂತ್ರಿ ಮನಮೋಹನ್ ಸಿಂಗ್ ಭಾರತಕ್ಕೆ ಉದಾಹರಣೆಯೆಂದು ತೋರಿದ ಏಶ್ಯನ್ ಹುಲಿಗಳೆಂಬ ದಕ್ಷಿಣ ಕೋರಿಯಾ ಮತ್ತಿತರ ದೇಶಗಳ ಆರ್ಥಿಕದ ಅಧೋಗತಿಯ ನಂತರವೂ ಕಾಂಗ್ರೆಸ್ ಯಾವುದೇ ನಾಚಿಕೆಯಿಲ್ಲದೆ ಅದೇ ನೀತಿಗಳನ್ನು ಪ್ರತಿಪಾದಿಸಿದೆ.

• ಸಾರ್ವಜನಿಕ ವಲಯದ ಶೇರುಗಳನ್ನು ಮಾರಿ ತಿನ್ನುವ ಭರವಸೆ ನೀಡಿರುವ ಈ ಪ್ರಣಾಳಿಕೆ ಈ ಮೂಲಕ ಕಾರ್ಮಿಕ ವರ್ಗದ ಮೇಲೆ ಒಂದು ದೊಡ್ಡ ದಾಳಿ ಮಾಡಿದೆ.

• ಭಾರತೀಯ ಜನರ ಬದುಕನ್ನು ನಾಶಮಾಡಿ ಅದರಿಂದಾಗಿ ಅಧಿಕಾರ ಕಳಕೊಂಡರೂ ಬುದ್ಧಿ ಬಾರದ ಕಾಂಗ್ರೆಸ್ ಈ ಪ್ರಣಾಳಿಕೆಯಲ್ಲೂ ರೇಷನ್ ವ್ಯವಸ್ಥೆಯನ್ನು ಕಳಚಿಹಾಕುವ 'ಭರವಸೆ' ನೀಡಿದೆ - ರೇಷನ್ ವ್ಯವಸ್ಥೆಯನ್ನು ಕೇವಲ ಅತಿ ಬಡವರಿಗೆ ಸೀಮಿತಗೊಳಿಸುವ ಹೆಸರಲ್ಲಿ ಅದು ಕೇರಳದಲ್ಲಿ ಶೇ. 95 ಜನರನ್ನು ಒಳಗೊಂಡಿರುವ ಅತ್ಯುತ್ತಮ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ನಾಶಮಾಡಲು ಹೊರಟಿದೆ. *ಜನಗಳಿಗೆ ಅಗ್ಗದ ಆಹಾರ ಒದಗಿಸುವ ಅಪಾರ ಸಬ್ಸಿಡಿಯನ್ನು ತೆಗೆಯಬೇಕೆಂದು ಐ.ಎಂ.ಎಫ್. ಆದೇಶದ ಪಾಲನೆಗಾಗಿ ಈ ಭರವಸೆ!*

• ವಿದ್ಯುತ್ ವಲಯದಲ್ಲಿ ಸಾರ್ವಜನಿಕ ಹಣ ವಿನಿಯೋಗಕ್ಕೆ ಮತ್ತೆ ಯೋಗ್ಯ ಸ್ಥಾನ ಕೊಡವುದಾಗಿ ಪ್ರಣಾಳಿಕೆ ಹೇಳಿದೆ. ಆದರೆ ಆ ಸ್ಥಾನವನ್ನು ಕಾಂಗ್ರೆಸ್ 1991-96ರಲ್ಲಿ ಕಸಿದುಕೊಂಡದ್ದು ಯಾಕೆ ಎಂದು ಮಾತ್ರ ಹೇಳಲಿಲ್ಲ. ಕೆಲವು ತಿಂಗಳ ಹಿಂದೆ ಇದೊಂದು ಪ್ರಮಾದವಾಯಿತು ಎಂದು ಮನಮೋಹನ್ ಸಿಂಗ್ ಒಪ್ಪಿಕೊಂಡಿದ್ದರು - ಆದರೆ ಪ್ರಣಾಳಿಕೆ ಈ ಬಗ್ಗೆ ಮೌನವಾಗಿದೆ. ಜೊತೆಗೆ ಇತರ ಮೂಲ ಸೌಕರ್ಯಗಳಾದ ತೈಲ, ಕಲಿದ್ದಲು, ರಸ್ತೆಗಳು, ದೂರಸಂಪರ್ಕಗಳ ಖಾಸಗೀಕರಣವನ್ನು ಪ್ರಣಾಳಿಕೆ ಪ್ರತಿಪಾದಿಸಿದೆ-ವಿದೇಶಿ ಗುತ್ತೇದಾರರಿಗೆ ವಹಿಸಿ ಕೊಡಲು ಸಿದ್ಧವಾಗಿದೆ.

ಭ್ರಷ್ಟಾಚಾರದ ಬಗ್ಗೆ ದಿವ್ಯ ಮೌನ!

• ಇಡೀ ಪ್ರಣಾಳಿಕೆಯಲ್ಲಿ ಅತಿ ಕಮ್ಮಿ ಸ್ಥಾನ ದೊರೆಯುವುದು ಭ್ರಷ್ಟಾಚಾರದ ಪ್ರಶ್ನೆಗೆ. *56 ಮುದ್ರಿತ ಪುಟಗಳ ಪ್ರಣಾಳಿಕೆಯಲ್ಲಿ ಭ್ರಷ್ಟಾಚಾರದ ಪ್ರಸ್ತಾಪ ಇರುವುದು ಕೇವಲ 3 ಸಾಲುಗಳಲ್ಲಿ ಮಾತ್ರ!* ಸಿ.ಬಿ.ಐ.ಗೆ ಸ್ವಾಯತ್ತತೆ, ಲೋಕಪಾಲ ರಚನೆ ಇತ್ಯಾದಿ ಬಗ್ಗೆಯೆಲ್ಲಾ ಈ ಮೂರು ಸಾಲುಗಳಲ್ಲೇ. ಇಡೀ ಭಾರತೀಯ ಸಮಾಜವನ್ನು ತೀವ್ರ ಆತಂಕಕ್ಕೊಳಪಡಿಸಿರುವ ಈ ಪ್ರಮುಖ ಪ್ರಶ್ನೆಯ ಬಗ್ಗೆ ಕಾಂಗ್ರೆಸ್ ಮಾತನಾಡಲೂ ಹಿಂಜರಿಯುತ್ತಿರುವುದು ಸ್ಪಷ್ಟ. ಅದಕ್ಕೆ ಕಾರಣವೂ ಸ್ಪಷ್ಟ. ಪೆಟ್ರೋಲ್ ಪಂಪ್‌ಗಳಿಂದ ಹಿಡಿದು, ಸರಕಾರಿ ಕ್ವಾಟರ್ಸ್‌ಗಳು, ತೈಲಭಾವಿಗಳು ಇತ್ಯಾದಿ ಎಲ್ಲವನ್ನೂ *ಸೂಕ್ತ ಬೆಲೆಗಳಿಗೆ ಮಾರುವುದನ್ನು ಲಲಿತಕಲೆಯಾಗಿ ಮಾಡಿಕೊಂಡು ಹಗರಣಗಳ ಪಕ್ಷವೆನಿಸಿಕೊಂಡ ಒಂದು ಪಕ್ಷದಿಂದ ಇನ್ನೇನು ತಾನೇ ನಿರೀಕ್ಷಿಸಲು ಸಾಧ್ಯ?*

• ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಸಂಯುಕ್ತರಂಗ ಸರ್ಕಾರದ ಮೇಲೆ ಮಾಡಿರುವ ಒಂದು ಆರೋಪ ವೆಂದರೆ "ಸರಕಾರದ ಸಂಸ್ಥೆಗಳನ್ನು ಕಾಂಗ್ರೆಸ್ಸನ್ನು ಬುಡಮೇಲು ಮಾಡಲು ನೇರವಾಗಿ ಬಳಸಲಾಯಿತು" ಎಂದು. ಈ ಮೂಲಕ ಅದು ಎಪ್ರಿಲ್ 1997ರಲ್ಲಿ ಸರಕಾರದ ಮುಖಂಡತ್ವ ಬದಲಿಸುವ ತನ್ನ ಒತ್ತಾಯವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದೆ. ಅದರ ಇದರರ್ಥವೇನು? ಸರಳ ಮಾತುಗಳಲ್ಲಿ ಹೇಳುವುದಾದರೆ ದೇವೇಗೌಡ ಸರಕಾರ ಹಲವಾರು ಕಾಂಗ್ರೆಸ್ ಮಂತ್ರಿಗಳ ಮತ್ತು ಮುಖಂಡರ ಮೇಲಿನ ಭ್ರಷ್ಟಾಚಾರದ ಮೊಕದ್ದಮೆಗಳನ್ನು ದಬಾಯಿಸಿ ಅಥವಾ ಮುಚ್ಚಿ ಕಾಂಗ್ರೆಸ್ಸಿಗೆ ನೆರವಾಗಲಿಲ್ಲ ಎಂದೇ ಇದರರ್ಥ.

• *ತನ್ನ ಪಕ್ಷದ ಹಿತ ಎಂದರೆ ಭ್ರಷ್ಟಾಚಾರದ ಆರೋಪಕ್ಕೊಳಗಾದವರ ರಕ್ಷಣೆ ಎಂದು ಬಗೆಯುವ* ಒಂದು ಮುಖಂಡತ್ವ ದೇಶವನ್ನು ಪರಿಣಾಮ ಕಾರಿಯಾಗಿ ಆಳಬಲ್ಲ ಏಕೈಕ ಪಕ್ಷ ತಾನು ಎಂಬ ಭಂಡತನ ಪ್ರದರ್ಶಿಸುತ್ತಿದೆ. ಈ ಭ್ರಮೆಯೇ ಕಾಂಗ್ರೆಸ್ಸಿನ ಪ್ರಣಾಳಿಕೆಯಲ್ಲೆಲ್ಲ ಎದ್ದು ಕಾಣುತ್ತಿದೆ, ವಾಸ್ತವತೆಗೆ ಕುರುಡಾಗಿರುವ ಅದು ಸಮ್ಮಿಶ್ರ ಸರಕಾರಗಳ ವಿಚಾರವನ್ನು ತಿರಸ್ಕರಿಸುತ್ತದೆ. ಕೇಂದ್ರದಲ್ಲಿ ಏಕಪಕ್ಷ ಆಡಳಿತದ ದಿನಗಳು ಮುಗಿದವು ಎಂದು ಸಂಯುಕ್ತ ರಂಗ ಹೇಳಿರುವುದನ್ನು ಅದು ಖಂಡಿಸಿದೆ. ಪ್ರಾದೇಶಿಕ ಪಕ್ಷಗಳನ್ನು ಅದು ಖಂಡಿಸುತ್ತದೆ. ನಿಜವಾದ ಅರ್ಥದಲ್ಲಿ ಒಕ್ಕೂಟ ತತ್ವವನ್ನು ಅದು ಒಪ್ಪುವುದಿಲ್ಲ. ಈ ಭ್ರಮೆಯಿಂದಾಗಿಯೇ ಕಾಂಗ್ರೆಸ್ ಅಧಿಕಾರಕ್ಕೆ ಮರಳಲು ಸೋನಿಯಾ ಗಾಂಧಿಯನ್ನು ಮುಂದಿಟ್ಟುಕೊಂಡಿದೆ. ಹಳೆಯ ತಪ್ಪುಗಳನ್ನು ಸರಿಪಡಿಸಿಕೊಂಡು ಹೊಸ ಧೋರಣೆಗಳನ್ನು ಜನಗಳ ಮುಂಡಿಡುವ ಬದಲು ಕಾಂಗ್ರೆಸ್ ಮತ್ತೆ ನೆಹರೂ-ಗಾಂಧಿ ಕುಟುಂಬಕ್ಕೆ ಶರಣು ಹೋಗಿದೆ, ಸೋನಿಯಾ ಗಾಂಧಿ ಪಕ್ಷದಲ್ಲಿ ಪುನಶ್ಚೇತನ ತರಬಹುದು ಎಂಬ ಆಸೆಯಿಟ್ಟುಕೊಂಡಿದೆ. ಸಾರ್ವಜನಿಕ ಸೇವೆ ಮಾಡಿದ್ದೇನೆ ಎಂದು ಹೇಳಿಕೊಳ್ಳಲಾರದ ವ್ಯಕ್ತಿಯೊಬ್ಬರು ಪಕ್ಷದ ರಾಜಕೀಯ ಹಾಗೂ ಸಂಘಟನಾತ್ಮಕ ಶಕ್ತಿಯನ್ನು ಕೊರೆದು ಹಾಕುತ್ತಿರುವ ಆಳವಾದ ಕಾಯಿಲೆಯನ್ನು ಮರೆಮಾಚಬಹುದು ಎಂಬ ನಿಷ್ಫಲ ಆಸೆ ಕಾಂಗ್ರೆಸ್ ಪಕ್ಷದ್ದು. ಮುಂಬರುವ ವಾರಗಳಲ್ಲಿ, ಈ ಭ್ರಮೆಯೂ ನುಚ್ಚುನೂರಾಗಲಿದೆ.

ಸಂಯುಕ್ತ ರಂಗದ ಪ್ರಣಾಳಿಕೆ: ಅಪೂರ್ಣವಾಗುಳಿದ ಕರ್ತವ್ಯಗಳ ಈಡೇರಿಕೆಗೆ ಜನಾದೇಶ

ಮಹಾತ್ಮ ಗಾಂಧಿಯವರು ಹುತಾತ್ಮರಾದ ೫೦ನೇ ವಾರ್ಷಿಕದಂದು ಬಿಡುಗಡೆ ಮಾಡಿದ ಸಂಯುಕ್ತ ರಂಗದ ಪ್ರಣಾಳಿಕೆ ಜಾತ್ಯಾತೀತ ಪ್ರಜಾಪ್ರಭುತ್ವ, ಒಕ್ಕೂಟ ತತ್ವ, ಸಾಮಾಜಿಕ ನ್ಯಾಯ ಹಾಗೂ ಸ್ವಾವಲಂಬನೆಯ ನೀತಿಗಳನ್ನು ಬಲಗೊಳಿಸಲು ಬಹುಪಾಲು ಭಾರತೀಯರ ಆಕಾಂಕ್ಷೆಗಳನ್ನು ಈಡೇರಿಸುವಂತಹ 'ಉತ್ತಮ ಆಡಳಿತ' ನೀಡುವ ವಚನ ನೀಡಿದೆಯೆಂಬುದನ್ನು ಈಗಾಗಲೇ ನೀವು 'ಐಕ್ಯರಂಗ'ದಲ್ಲಿ ಓದಿರುವಿರಿ. 'ಪ್ರತಿ ಮನೆಯಲ್ಲಿ ಆಹಾರಧಾನ್ಯ, ಪ್ರತಿಯೊಬ್ಬರಿಗೂ ಆರೋಗ್ಯ - ಸಾಕ್ಷರತೆ, ಪ್ರತಿ ಮಗುವೂ ಶಾಲೆಯಲ್ಲಿ' ಎಂಬ ಮಾತುಗಳಲ್ಲಿ 'ಉತ್ತಮ ಆಡಳಿತ'ಯ ಸಾರವನ್ನು ನೀಡಿದ ಈ ಪ್ರಣಾಳಿಕೆಯ ಬಗ್ಗೆ ಇನ್ನಷ್ಟು ವಿವರಗಳು.

• ಪ್ರಣಾಳಿಕೆಯ ಆರಂಭದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನ ಪರಿಸ್ಥಿತಿ ಹಾಗೂ ಈ ಹಿನ್ನೆಲೆಯಲ್ಲಿ ಸಂಯುಕ್ತ ರಂಗ ಮೂಡಿಬಂದುದರ ಬಗ್ಗೆ ಸಂಕ್ಷಿಪ್ತ ವಿವರಣೆಯಿದೆ.

- ಒಂದೆಡೆ ಗುಜರಾತಿನಲ್ಲಿ ಕೋಮುವಾದಿ ಕಾರ್ಯಕ್ರಮ, ಇನ್ನೊಂದೆಡೆ ಗುಜರಾತಿನಲ್ಲಿ ಮೂರನೇ-ಎರಡು ಬಹುಮತ ಪಡೆದರೂ ಸರಕಾರ ಉಳಿಸಿಕೊಳ್ಳಲಾರದ ಆಂತರಿಕ ಕಿತ್ತಾಟ, ಮತ್ತೊಂದೆಡೆ ಉತ್ತರ ಪ್ರದೇಶದಲ್ಲಿ ಯಾವುದೇ ನೀತಿ-ನಿಯಮವಿಲ್ಲದ ರಾಜಕೀಯ. "ಎಲ್ಲಾ ನೈತಿಕ ಸೋಗುಗಳನ್ನೂ ತ್ಯಜಿಸಿದ ಬಿಜೆಪಿ ಸಿದ್ಧಾಂತ-ವಿಹೀನ ಮೈತ್ರಿಗಳನ್ನು ಏರ್ಪಡಿಸಿಕೊಳ್ಳಲು ಮುಂದಾಗಿದ್ದರೂ ಅದರ ಮೂಲದಲ್ಲಿ ಅದೇ ಕೋಮುವಾದಿ ಅಜೆಂಡಾ ಇದೆ. ಇದನ್ನು ಸಂಯುಕ್ತ ರಂಗ ನೇರವಾಗಿ ಎದುರಿಸುವುದು.
- ಕಾಂಗ್ರೆಸ್ ಯಾವ ಕಾರಣವೊಡ್ಡಿ ಸಂಯುಕ್ತ ರಂಗ ಸರ್ಕಾರವನ್ನು ಉರುಳಿಸಿತೋ. ಅದು ಕೇವಲ ನೆಪವೆಂಬುದು ನಂತರ ಬಂದ ತೀರ್ಪಿನಲ್ಲಿ ಸ್ಪಷ್ಟವಾಗಿದೆ. ಕೋಮುವಾದಿ ಶಕ್ತಿಗಳನ್ನು ದೂರವಿಡುವ ಅದರ ಘೋಷಿತ ಗುರಿಯನ್ನು ಅದು ಮರೆತು ಬಿಟ್ಟಿತು.
- ಬಿಜೆಪಿಯ ಕರಾಳ ಸಂಚುಗಳನ್ನು ಹಾಗೂ ಕಾಂಗ್ರೆಸ್‌ನ ಅಪಾಯಕಾರಿ ನಿಷ್ಕ್ರಿಯತೆಯನ್ನು ಬಯಲಿಗೆಳೆಯುತ್ತಾ ಸಂಯುಕ್ತ ರಂಗ ತನ್ನ ಕಾರ್ಯನಿರ್ವಹಣೆ ಹಾಗೂ ಅಪೂರ್ಣವಾಗುಳಿದ ಕರ್ತವ್ಯಗಳನ್ನು ಈಡೇರಿಸಲು ಜನತೆಯ ಪೂರ್ಣ ಆದೇಶವನ್ನು ಕೇಳಿದೆ.

ಸಾಧನೆಗಳು

• ಸಂಯುಕ್ತ ರಂಗ ಕೇವಲ ಬಿಜೆಪಿಯನ್ನು ದೂರವಿಡುವ ಒಂದು ರಚನೆಯಷ್ಟೆ ಅಲ್ಲ, ಕೇವಲ ೧೮ ತಿಂಗಳ ಅಧಿಕಾರಾವಧಿಯಲ್ಲೇ ಇದುವರೆಗೆ ನಿರ್ಲಕ್ಷಿತ ಜನ ವಿಭಾಗಗಳಿಗೆ ಪ್ರಯೋಜನವಾಗುವ ಪ್ರಮುಖ ಕ್ರಮಗಳನ್ನು ಕೈಗೆತ್ತಿಕೊಂಡ ಶಕ್ತಿಗಳ ಒಂದು ರಂಗ ಎಂದಿರುವ ಪ್ರಣಾಳಿಕೆ ಒಂದೂವರೆ ವರ್ಷಗಳ ತನ್ನ ಸಾಧನೆಗಳನ್ನು ಹೀಗೆ ಪಟ್ಟಿ ಮಾಡಿದೆ.

- ಕೇಂದ್ರ-ರಾಜ್ಯ ಸಂಬಂಧಗಳ ಪುನರ್‌ರಚನೆಯ ಪ್ರಾಮಾಣಿಕ ಪ್ರಯತ್ನ; ಅಂತರ - ರಾಜ್ಯ ಮಂಡಳಿಯ ಪುನರುಜ್ಜೀವನ, ರಾಜ್ಯಗಳಿಗೆ ಹೆಚ್ಚಿನ ಹಣಕಾಸು ಅಧಿಕಾರಗಳು; ಕೇಂದ್ರ ಪ್ರಾಯೋಜಿತ ಯೋಜನೆಗಳು ರಾಜ್ಯಗಳಿಗೆ ಹಸ್ತಾಂತರ; ೩೫೬ನೇ ಕಲಮನ್ನು ಸೂಕ್ತವಾಗಿ ತಿದ್ದುಪಡಿ ಮಾಡಲು ಸಮಾಲೋಚನೆ.
- ಜಮ್ಮು-ಕಾಶ್ಮೀರದಲ್ಲಿ ಯಶಸ್ವಿ ಚುನಾವಣೆಗಳನ್ನು ನಡೆಸುವ ಮೂಲಕ ರಾಷ್ಟ್ರೀಯ ಐಕ್ಯತೆಯ ಸವಾಲನ್ನು ಎದುರಿಸಿತು; ಅಭಿವೃದ್ಧಿ ಅಗತ್ಯಗಳಿಗೆ ಹಣ ನೀಡಿಕೆ, ಮೊತ್ತಮೊದಲ ಬಾರಿಗೆ ನಿರ್ಲಕ್ಷಿತ ಈಶಾನ್ಯ ಭಾರತಕ್ಕೆ ೬೧೦೦ ಕೋಟಿ ರೂ.ಗಳ ಒಂದು ವಿಶೇಷ ಆರ್ಥಿಕ ನೆರವು ಯೋಜನೆ.
- ಎಲ್ಲಾ ನೆರೆಕರೆ ದೇಶಗಳೊಂದಿಗೆ ಸಂಬಂಧಗಳಲ್ಲಿ ತೀವ್ರ ಸುಧಾರಣೆ; ಭಾರತದ ಹಿತಾಸಕ್ತಿಗಳನ್ನು ರಕ್ಷಿಸಿದ (ಉದಾ: ಸಿಟಿಬಿಟಿ, ಎನ್.ಪಿ.ಟಿ. ಸಂಧಿಗಳಿಗೆ ಸಹಿ ಹಾಕಲು ನಿರಾಕರಣೆ) ಚೈತನ್ಯಶಾಲಿ ವಿದೇಶಾಂಗ ನೀತಿ.
- ಹಗರಣಗಳ ಹಾವಳಿಯೇ ಇಲ್ಲದ ಆಡಳಿತಾವಧಿ.
- ನಮ್ಮ ರಾಜಕೀಯ ವ್ಯವಸ್ಥೆಯ ಪ್ರಜಾಸತ್ತಾತ್ಮಕ ಸಾರವನ್ನು ಬಲಗೊಳಿಸುವ ಉದ್ದೇಶದಿಂದ ಹಲವು ಮಸೂದೆಗಳನ್ನು ತರಲು ಮುತುವರ್ಜಿ-ಕೃಷಿಕಾರ್ಮಿಕರ ಮಸೂದೆ, ಮಹಿಳಾ ಮೀಸಲಾತಿ ಮಸೂದೆ, ಲೋಕಪಾಲ್ ಮಸೂದೆ ಇತ್ಯಾದಿ - ಕಾಂಗ್ರೆಸ್ ಇದ್ದಕ್ಕಿದ್ದಂತೆ ದೇಶದ ಮೇಲೆ ಮಧ್ಯಂತರ ಚುನಾವಣೆಗಳನ್ನು ಹೇರದಿದ್ದರೆ ಇವನ್ನೆಲ್ಲಾ ಶಾಸನಗಳಾಗಿ ಮಾಡಬಹುದಾಗಿತ್ತು.

ಉತ್ತಮ ಆಡಳಿತದ ಭರವಸೆ


ಬಿ.ಜೆ.ಪಿ ಪ್ರಣಾಳಿಕೆ ಒಂದು ಅಪಾಯಕಾರಿ ಮಿಶ್ರಣ ಅಂತರ್ವಿರೋಧಗಳ ಕಂತೆ

೧೨ನೇ ಲೋಕಸಭಾ ಚುನಾವಣೆಗಳಿಗೆ ಬಿಜೆಪಿ ಚುನಾವಣಾ ಪ್ರಣಾಳಿಕೆ ಆರ್. ಎಸ್. ಎಸ್. ಪ್ರೇರಿತ ಹಿಂದುತ್ವ ಸಿದ್ಧಾಂತ ಮತ್ತು ಕೇಂದ್ರೀಯ ಅಧಿಕಾರಕ್ಕಾಗಿ ಹೊಲಸು ಸಮಯ ಸಾಧಕತನದ ಒಂದು ಅತ್ಯಂತ ಸ್ಫೋಟಕ ಮಿಶ್ರಣ.... ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ. ಪ್ರಕಾಶ್ ಕಾರಟ್.

ಬಿಜೆಪಿ ಪ್ರಣಾಳಿಕೆ ರಾಮ ರಾಜ್ಯ ತರುವುದಿಲ್ಲ. ಬಿಜೆಪಿಗೆ ರಾಮ ರಾಜ್ಯವೆಂದರೆ ೩೭೦ನೇ ಕಲಮಿನ ರದ್ಧತಿ, ರಾಮದೇವಸ್ಥಾನ ಕಟ್ಟುವುದು ಮತ್ತು ಒಂದು ಸಮಾನ ನಾಗರಿಕ ಸಂಹಿತೆಯನ್ನು ಹೇರುವುದು. ಸಮತಾಪಕ್ಷದಂತಹ ಅದರ ಸಮಯ ಸಾಧಕ ಮಿತ್ರರಿಗೆ ಇದು ರುಚಿಸುವುದಿಲ್ಲ. ಬಿಜೆಪಿ ಪ್ರಣಾಳಿಕೆ ಯನ್ನೆದುರಿಸಬೇಕಾಗಿ ಬಂದಿರುವ ಈ ವಿಭಿನ್ನ ನೆಲೆಯ ಪಕ್ಷಗಳು-ದಕ್ಷಿಣದಲ್ಲಿ ಜಯಲಲಿತಾರಿಂದ ಹಿಡಿದು ಉತ್ತರದಲ್ಲಿ ಅಕಾಲಿಗಳವರೆಗೆ ಎಲ್ಲರೂ ಒಂದು ಮುಜುಗರಪೂರ್ಣ ವಾಸ್ತವತೆಯನ್ನು ಎದುರಿಸಬೇಕಾಗಿ ಬಂದಿದೆ. ಅದೆಂದರೆ ಆರ್.ಎಸ್.ಎಸ್. ತನ್ನ ಹಿಂದೂರಾಷ್ಟ್ರದ ಭರವನ್ನು ಬಿಟ್ಟು ಕೊಡುವುದಿಲ್ಲ. ತನ್ನ ಮಿತ್ರರಿಗೆ ಬಿಜೆಪಿ ಯಾವ ರಿಯಾಯ್ತಿ ಯನ್ನೂ ತೋರಿಸಿಲ್ಲ.

ಬಿಜೆಪಿ ದೇಶದಲ್ಲಿಂದು ಅತ್ಯಂತ ಪ್ರತಿಗಾಮಿ ರಾಜಕೀಯ ಶಕ್ತಿ ಎಂಬುದನ್ನು ಈ ಪ್ರಣಾಳಿಕೆ ಸಾರಿ ಹೇಳುತ್ತಿದೆ. ಸುಲಿಗೆ ಕೋರ, ದೊಡ್ಡ ಬಂಡವಾಳಶಾಹಿ, ಭೂಮಾಲಕರು ಹಾಗೂ ದೊಡ್ಡ ವ್ಯಾಪಾರಸ್ಥರ ಹಿತಾಸಕ್ತಿಗಳ ಸಮ್ಮಿಶ್ರಣವನ್ನು ಪ್ರತಿನಿಧಿಸುವುದರೊಂದಿಗೆ ತನ್ನ ಅಧಿಕಾರ ಗಿಟ್ಟಿಸುವ ಪ್ರಯತ್ನಕ್ಕೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಅನುಮೋದನೆ ಕೇಳುವ ಪ್ರಣಾಳಿಕೆಯದು. ಈ ಸಮ್ಮಿಶ್ರಣ ವನ್ನು ಈಗ ಬಯಲಿಗೆಳೆದು ಸೋಲಿಸ ಬೇಕಾಗಿದೆ ಎಂದು ಕಾಂ. ಕಾರಟ್ ಹೇಳಿದ್ದಾರೆ.

ಬಿಜೆಪಿ ಪ್ರಣಾಳಿಕೆಯ ಮುಖ್ಯ ಅಂಶಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.



'ಹಿಂದುಸ್ತಾನ್ ಟೈಂಸ್'ನಲ್ಲಿ ಸುಧೀರ್ ತೆಲಾಂಗ್‌ರವರ ವ್ಯಂಗ್ಯ

• 'ಒಂದು ದೇಶ, ಒಂದು ಜನ, ಒಂದು ಸಂಸ್ಕೃತಿ' ಇದು ಆರ್.ಎಸ್.ಎಸ್.ನ ಹಳೆಯ ರಾಗ. ಬಿ.ಜೆ.ಪಿ.ಯ ಪ್ರಣಾಳಿಕೆ ಯಲ್ಲಿ ಇದನ್ನು ಎತ್ತಿ ಹಿಡಿಯುತ್ತಾ ಅದರೊಂದಿಗೇ "ವೈವಿಧ್ಯತೆ ಭಾರತದ ಹಿಂದಿನ ಹಾಗೂ ಇಂದಿನ ಪರಂಪರೆಯ ವಿಭಿನ್ನ ಅಂಶ" ಎಂದು ಒಪ್ಪಿಕೊಳ್ಳುತ್ತದೆ. ಅದೇ ವೇಳೆಗೆ ಹಿಂದುತ್ವ ಎಂದರೆ ಸಾಂಸ್ಕೃತಿಕ ರಾಷ್ಟ್ರೀಯವಾದದ ಮೂಲಾಂಶ ಎಂದೂ, ಶ್ರೀರಾಮ ಭಾರತೀಯ ಪ್ರಜ್ಞೆಯ ಮೂಲಾಂಶ ಎಂದೂ ಹೇಳುತ್ತಾ ಈ "ವೈವಿಧ್ಯತೆಯನ್ನೇ ನಿರಾಕರಿಸುತ್ತದೆ!. ಈ ಪ್ರಾಚೀನ ದೇಶ "ಸನಾತನ ಧರ್ಮ"ವನ್ನು ಮೈಗೂಡಿಸಿಕೊಂಡಿದೆ ಎಂದೂ ಹೇಳುತ್ತದೆ!

- "ಹಿಂದುತ್ವ"ದ ಮತ್ತು ಕೋಮುವಾದಿ ವೇದಿಕೆಯನ್ನು ಅಧಿಕಾರಕ್ಕಾಗಿ ಅಸೀಮಿತ ಸಮಯಸಾಧಕತನವನ್ನು ಬೆರೆಸಿದ ಪರಿಣಾಮ ಇದು.

ಸಂವಿಧಾನದ ಮೇಲೆಯೇ ಧಾಳಿ

- ಹಿಂದುತ್ವ ಸಿದ್ಧಾಂತ ಗಣತಂತ್ರದ ಸಂವಿಧಾನಕ್ಕೆ ವಿರುದ್ಧವಾದದ್ದು ಎಂದು ಈ ಪ್ರಣಾಳಿಕೆಯಿಂದ ಸ್ಪಷ್ಟವಾಗುತ್ತದೆ.

- "ಎಲ್ಲಾ ಪಂಥಗಳಿಗೆ ಸಮಾನ ಸ್ಥಾನಮಾನ ನೀಡಿರುವ ಸಂವಿಧಾನದ ಅಂಶವನ್ನು ರೂಪಿಸಿರುವುದು ಭಾರತದ ಪ್ರಾಚೀನ ಮನಸ್ಸೇ ಹೊರತು, ಭಾರತದ ಸಂವಿಧಾನದಿಂದಾಗಿ ಇಂತಹ ಭಾರತೀಯ ಮನಸ್ಸು ರೂಪಿತಗೊಂಡದ್ದಲ್ಲ" ಎಂದು ಬಿ.ಜೆ.ಪಿ. ಪ್ರಣಾಳಿಕೆ ಹೇಳುತ್ತದೆ.

ವಾಸ್ತವವಾಗಿ ಸಮ್ರಾಜ್ಯಶಾಹಿ-ವಿರೋಧಿ ಹೋರಾಟದಲ್ಲಿ ರೂಪುಗೊಂಡ ಆಧುನಿಕ, ಜಾತ್ಯಾತೀತ-ಪ್ರಜಾಸತ್ತಾತ್ಮಕ ಭಾವನೆಗಳಿಂದ ಈ ಸಂವಿಧಾನ ರೂಪುಗೊಂಡಿದೆ. "ಪ್ರಾಚೀನ ಭಾರತೀಯ ಮನಸ್ಸು" ಎನ್ನುವಾಗ ಅದರಲ್ಲಿ ಮೇಲು-ಕೀಳಿನ ಜಾತಿ ಪದ್ಧತಿ ಮತ್ತಿತರ ಊಳಿಗಮಾನ್ಯ ಅಂಶಗಳು ಸೇರಿರುತ್ತವೆ, ಸಂವಿಧಾನದಲ್ಲಿ ಅವನ್ನು ಸೇರಿಸಿಲ್ಲ ಎಂಬುದನ್ನೂ ಗಮನಿಸಬೇಕು.

ಅದೇನೇ ಇರಲಿ, ಈ ರೀತಿ 'ಪ್ರಾಚೀನ ಭಾರತೀಯ ಮನಸ್ಸು ರೂಪಿಸಿದಾಗ ಈ ಸಂವಿಧಾನವನ್ನು ಪುನರ್ರೂಪಿಸ ಬೇಕೆಂದೂ ಬಿ.ಜೆ.ಪಿ. ಪ್ರಣಾಳಿಕೆ ಕರೆ ನೀಡುತ್ತದೆ!

ಇದಕ್ಕಾಗಿ ಒಂದು ಆಯೋಗವನ್ನು ರಚಿಸಿ 50 ವರ್ಷಗಳ ಅನುಭವಗಳ ಆಧಾರದ ಅದು ಶಿಫಾರಸ್ಸುಗಳನ್ನು ನೀಡುತ್ತದಂತೆ.

ವಾಸ್ತವವಾಗಿ ಇದು ಸಂಸದೀಯ ಪ್ರಜಾಪ್ರಭುತ್ವವನ್ನು ತ್ಯಜಿಸಿ ಸರ್ವಾಧಿಕಾರಶಾಹಿಗೆ ಹೆಚ್ಚಿನ ಅವಕಾಶವಿರುವ ಅಧ್ಯಕ್ಷೀಯ ಮಾದರಿಯನ್ನು ಹೇರುವ ಪ್ರಯತ್ನ.

- "ಒಂದು ದೇಶ, ಒಂದು ಜನ, ಒಂದು ಸಂಸ್ಕೃತಿ"ಯ ಘೋಷಣೆಗೆ ಒಬ್ಬ ಮುಖಂಡ ಎಂಬುದನ್ನು ಸೇರಿಸುವ ಪ್ರಯತ್ನ ಇದು. ಸಂವಿಧಾನದಲ್ಲಿ ಇರುವ ಸ್ವಾಯತ್ತತೆ, ಅಲ್ಪ ಸಂಖ್ಯಾತರಿಗೆ ರಕ್ಷಣೆ, ಕಲಮು 370 ಇತ್ಯಾದಿಗಳನ್ನು ತೆಗೆದು ಅದನ್ನು ತನ್ನ "ಹಿಂದುತ್ವ"ಕ್ಕೆ ಅನುಗುಣಗೊಳಿಸಿ ಒಂದು ಸರ್ವಾಧಿಕಾರಶಾಹಿಗೆ ಅನುವು ಮಾಡಿಕೊಡುವುದು ಇದರ ಉದ್ದೇಶ.

"ಒಕ್ಕೂಟ ತತ್ವ" ಕ್ಕೆ ಕೇವಲ ಬಾಯುಪಚಾರ

• ಕೇಂದ್ರ-ರಾಜ್ಯ ಸಂಬಂಧಗಳ ಸುಧಾರಣೆಯ ಬಗ್ಗೆ ಬಹಳ ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಬಹಳ ತಡವಾಗಿ ಯಾದರೂ ಬಿ.ಜೆ.ಪಿಯೂ ಅದರ ಬಗ್ಗೆ ಈಗ ಮಾತನಾಡ ಲಾರಂಭಿಸಿದೆ. ಆದರೆ ರಾಜ್ಯಗಳ ರಚನೆಯ ಆಧಾರವಾದ ಭಾಷಾವಾರು ನೀತಿಯನ್ನೇ ದುರ್ಬಲಗೊಳಿಸಿ, "ಆಡಳಿತಾತ್ಮಕ" ದೃಷ್ಟಿಯಿಂದ ಸಣ್ಣ ರಾಜ್ಯಗಳನ್ನು ನಿರ್ಮಿಸುವ 'ವಚನ' ನೀಡಿದೆ! ಮರಾಠಿ ಭಾಷೆಯ ಆಧಾರದ ಮೇಲೆ ಏಕೀಕರಣಗೊಂಡ ಮಹಾರಾಷ್ಟ್ರವನ್ನು ಒಡೆದು ಎರಡು ರಾಜ್ಯ ಮಾಡುವುದಾಗಿ ಅದು ಭರವಸೆ ನೀಡುತ್ತದೆ! ಈ ಭರವಸೆ ಇಲ್ಲಿಗೇ ನಿಲ್ಲುತ್ತದೆಯೇ? ಬಿ.ಜೆ.ಪಿ.ಯ ಹಿಂದಿನ ಅವತಾರವಾದ ಜನಸಂಘ ಭಾಷಾವಾರು ಪ್ರಾಂತ್ಯ ರಚನೆಯನ್ನು ಬೆಂಬಲಿಸಿರಲಿಲ್ಲ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸಣ್ಣ ರಾಜ್ಯಗಳೆಂದರೆ ದುರ್ಬಲ ರಾಜ್ಯಗಳು- ಒಂದು ಬಲಿಷ್ಟ ಕೇಂದ್ರಕ್ಕೆ ಅಡಿಯಾಳಾಗಬಲ್ಲ ದುರ್ಬಲ ರಾಜ್ಯಗಳು! ಹೀಗಿರುವಾಗ ಕೇಂದ್ರ-ರಾಜ್ಯ ಸಂಬಂಧಗಳನ್ನು ಸುಧಾರಿಸುವ ವಚನಕ್ಕೆ ಏನು ಅರ್ಥ ಉಳಿಯುತ್ತದೆ!

ಶ್ರೀಮಂತ ಪರ ಆರ್ಥಿಕ ನೀತಿ

• ಆರ್ಥಿಕ ನೀತಿಗಳನ್ನು ಕುರಿತಂತೆ 1991ರಿಂದಲೂ ಬಿ.ಜೆ.ಪಿ. ತನ್ನ ಬಲಪಂಥೀಯ ಅಂದರೆ ಆಳುವ ವರ್ಗಗಳ ಪರ ವಾದ ಆರ್ಥಿಕ ನೀತಿಗಳ ನಿಜ ಸ್ವರೂಪವನ್ನು ಮರೆ ಮಾಚುವ ಪ್ರಯತ್ನ ನಡೆಸಿಕೊಂಡೇ ಬಂದಿದೆ. ಅದು ಈ ಪ್ರಣಾಳಿಕೆಯಲ್ಲೂ ಮುಂದುವರೆದಿದೆ.

• ಮೊದಲು ಒಳಗಿನ ಉದಾರೀಕರಣ ಆಮೇಲೆ ಹೊರ ಗಿನ ಉದಾರೀಕರಣ ಎನ್ನುತ್ತಾ ಬಂದಿರುವ ಬಿ.ಜೆ.ಪಿ ಈ ಪ್ರಣಾಳಿಕೆಯಲ್ಲಿ "ಅಳೆದು ತೂಗಿ ಕೈಗೊಂಡ ಜಾಗತೀ ಕರಣ"ದೊಂದಿಗೆ ಪೂರ್ಣ ಉದಾರೀಕರಣದ ಮಾತ ನಾಡಿದೆ. ಒಂದೆಡೆ ಖಾಸಗೀ ವಲಯ ಹಾಗೂ ಮಾರುಕಟ್ಟೆ ಮೌಲ್ಯಗಳೊಂದಿಗೆ "ಸ್ವದೇಶಿ"ಯನ್ನು ಸರಿಹೊಂದಿಸಲಾರದ ಬಿ.ಜೆ.ಪಿ. ಈ ಭಾಷಾ ಕಸರತ್ತಿಗ ಇಳಿದಿದೆ.

• ಸಾರ್ವಜನಿಕ ವಲಯವನ್ನು ಕಳಚಿ ಹಾಕಬೇಕೆಂದು, ಬ್ಯಾಂಕ್ ಮತ್ತು ವಿಮಾ ವಲಯದಲ್ಲಿ ಖಾಸಗೀ ಬಂಡವಾಳಿ ಗರಿಗೆ ಅವಕಾಶ ನೀಡಬೇಕೆಂದು ಹೇಳುತ್ತಾ ಭಾರತೀಯ ಬಂಡವಾಳಿಗರ ಪರವಾಗಿ 'ಸ್ವದೇಶಿ'ಯ ಪ್ರಚಾರ ಮಾಡುತ್ತಿದ್ದಾಗಲೇ ಭಾರತೀಯ ಬಂಡವಾಳಿಗರು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಜಂಟಿ ಉದ್ಯಮಗಳಿಗಿಳಿದರು-ಇದರಿಂದ ಬಿ.ಜೆ.ಪಿ.ಯ 'ಸ್ವದೇಶಿ' ಹಾಸ್ಯಾಸ್ಪದಗೊಂಡಿತು-ಆದ್ದರಿಂದ ಈಗ ಈ ಹೊಸ ಭಾಷಾ ಕಸರತ್ತು. ಮೂಲಭೂತವಾಗಿ ಕಾಂಗ್ರೆಸ್ಸಿಗಿಂತ ಭಿನ್ನವಲ್ಲದ ಆರ್ಥಿಕ ನೀತಿಯನ್ನು ಭಿನ್ನ ಎಂದು ತೋರಿಸುವ ಭಾಷಾ ಕಸರತ್ತು.

• ಮುಂದಿನ ಸರಕಾರ ತನ್ನದೇ ಎನ್ನುವ ಬಿ.ಜೆ.ಪಿ. ಪ್ರಣಾಳಿಕೆ ಬಂಡವಾಳದ ಪೂರ್ಣ ಪರಿವರ್ತನೀಯತೆ, ವಿದೇಶೀ ಶೇರು ಬಂಡವಾಳ ಹೂಡಿಕೆ, ವಿದೇಶೀ ಬಂಡವಾಳದ ಪಾತ್ರದ ಬಗ್ಗೆ ಮೌನವಾಗಿದೆ-ಇದರರ್ಥ "ಸ್ವದೇಶೀ" ಅರ್ಥಹೀನ, ಎಲ್ಲಾ ವಲಯಗಳಲ್ಲೂ ವಿದೇಶೀ ಬಂಡವಾಳಕ್ಕೆ ಪ್ರವೇಶವಿರುತ್ತದೆ ಎಂದೇ ಅಲ್ಲವೇ!

• ಬಿ.ಜೆ.ಪಿ.ಯ ಅತ್ಯಂತ ಹೊಲಸು ಗೋಸುಂಬೆತನ ಪ್ರಕಟವಾಗಿರುವುದು ಭೂಸುಧಾರಣೆಯ ವಿಷಯದಲ್ಲಿ. ತಾನು ಅಧಿಕಾರದಲ್ಲಿರುವ ರಾಜ್ಯಗಳಲ್ಲಿ ಮಿಗುತೆ ಭೂಮಿಯನ್ನು ಭೂಮಾಲಕರಿಂದ ಪಡೆದು ಹಂಚುವುದನ್ನು ಬಹಿರಂಗವಾಗಿ ವಿರೋಧಿಸಿದ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಭೂಸುಧಾರಣೆಯನ್ನು ಜ್ಯಾರಿಗೊಳಿಸಬೇಕಾಗಿದೆ ಎಂದಿದೆ!

ಅಮೇರಿಕಾ ಕೃಪಾಭಿಲಾಷೆ

ದೇಶದ ರಕ್ಷಣಾ ಸಿದ್ಧತೆ ಸರಿಯಾಗಿಲ್ಲ, ಅಗ್ನಿ ಕ್ಷಿಪಣಿ ಗಳನ್ನು ತಯಾರಿಸಬೇಕು, ಪರಮಾಣು ಬಾಂಬು ತಯಾರಿ ಸಬೇಕು ಎನ್ನುವ ಬಿ.ಜೆ.ಪಿ ಪ್ರಣಾಳಿಕೆ ಭಾರತ-ಅಮೇರಿಕಾ ಜಂಟಿ ಸೈನಿಕ ಕವಾಯತುಗಳ ಬಗ್ಗೆ ದಿವ್ಯ ಮೌನತಾಳಿದೆ. ಅಮೇರಿಕನ್ ಸೇನಾಪಡೆಗಳು ಪಾಕಿಸ್ತಾನದ ಸೇನಾ ಪಡೆಗಳೊಂದಿಗೆ ಸಾಮರಿಕ ಸಂಬಂಧ ಹೊಂದಿವೆ, ಅಮೇರಿಕಾದ ಸೇನಾ ಪಡೆಗಳು ಭಾರತ ಕ್ಷಿಪಣಿ ತಂತ್ರಜ್ಞಾನ ವನ್ನು ಅಭಿವೃದ್ಧಿಪಡಿಸುವುದಕ್ಕೆ ವಿರುದ್ಧವಾಗಿವೆ ಎಂದು ತಿಳಿದಿದ್ದೂ ಬಿ.ಜೆ.ಪಿ ಇಂತಹ ಪಡೆಯೊಂದಿಗೆ ಮಿಲಿಟರಿ ಸಹಕಾರ ಒಪ್ಪಂದವನ್ನು ಮುಂದುವರೆಸುತ್ತಿರುವ ಬಗ್ಗೆ ಸಂಪೂರ್ಣವಾಗಿ ಮೌನವಾಗಿದೆ ಏಕೆ? ಅಮೇರಿಕಾದ ಕೃಪೆಯಿಂದ ವಂಚಿತರಾಗಬಾರದೆಂದೇ? ಪರಮಾಣು ಶಸ್ತ್ರಾಸ್ತ್ರ ಉತ್ಪಾದಿಸಿ ನಮ್ಮ ಉಪಖಂಡದಲ್ಲಿ ಶಸ್ತ್ರಾಸ್ತ್ರ ಪೈಪೋಟಿ ಆರಂಭಿಸಿ, ಬಿ.ಜೆ.ಪಿ. ಅಮೇರಿಕನ್ ಸಾಮ್ರಾಜ್ಯಶಾಹಿಗಳ ಹಿತ ಸಾಧಿಸಬೇಕೆಂದಿದೆಯೇ?

ರಾಮರಾಜ್ಯದ ಮಾದರಿಗಳು!

• ತಾನು ಅಧಿಕಾರದಲ್ಲಿರುವ ರಾಜಾಸ್ತಾನ, ದಿಲ್ಲಿ, ಮಹಾರಾಷ್ಟ್ರ ಸಾಧನೆಗಳನ್ನು ಪ್ರಣಾಳಿಕೆ ಪಟ್ಟಿ ಮಾಡಿದೆ. ವಾಸ್ತವವಾಗಿ ಈ ರಾಜ್ಯ ಸರಕಾರಗಳ ದುಷ್ಕೃತ್ಯಗಳನ್ನು ಪಟ್ಟಿ ಮಾಡಿದರೆ ಅದು ಈ ಪ್ರಣಾಳಿಕೆಗಿಂತಲೂ ದೊಡ್ಡ ದಾಗುತ್ತದೆ. ಹರಿಜನ-ಗಿರಿಜನರ ಮೇಲೆ, ಮಹಿಳೆಯರ ಮೇಲೆ ದೌರ್ಜನ್ಯಗಳಲ್ಲಿ ಹೆಚ್ಚಳ, ಕಾರ್ಮಿಕ ಆಂದೋಲನದ ಬಗ್ಗೆ ವೈರ ಭಾವ, ಭೂಮಾಲಕ-ವ್ಯಾಪಾರಸ್ಥರ ಪರವಾಗಿ ಪಕ್ಷಪಾತ ಈ ರಾಜ್ಯ ಸರಕಾರಗಳ ಪ್ರಮುಖ 'ಸಾಧನೆ'ಗಳು. ರಾಜಾಸ್ತಾನದಲ್ಲಿ ಶೆಖಾವತ್ ಸರಕಾರ ರೇಶನ್ ವ್ಯವಸ್ಥೆಯನ್ನು ಸೀಮಿತಗೊಳಿಸಿತು. ಮಹಿಳೆಯರ ಮೇಲಿನ ಅತ್ಯಾಚಾರದ ಕೇಸುಗಳಲ್ಲಿ ಕ್ರಮ ಕೈಗೊಳ್ಳಲು ನಿರಾಕರಿಸಿತು- ಮಹಾರಾಷ್ಟ್ರದಲ್ಲಿ ಕ್ರಿಮಿನಲ್‌ಗಳು ಮತ್ತು ಬಿಲ್ಡರ್‌ಗಳೊಂದಿಗೆ ಶಾಮೀಲಿನಲ್ಲಿ ಬಿ.ಜೆ.ಪಿಯ ಸಹಯೋಗಿ ಪಕ್ಷ ಶಿವಸೇನೆ ಹೊಸ ದಾಖಲೆಗಳನ್ನೇ ನಿರ್ಮಿಸಿದೆ!

ಕಾಂಗ್ರೆಸ್ಸಿನ ನಕಲು - ಎಲ್ಲರಿಗೂ ಎಲ್ಲವೂ

ಬಿ.ಜೆ.ಪಿ.ಯ ಪ್ರಣಾಳಿಕೆಯಲ್ಲಿ ತುಂಬಿಹೋಗಿರುವ ವಚನಗಳು, ಭರವಸೆಗಳಲ್ಲಿ ಬಿ.ಜೆ.ಪಿಯ ಸಮಯ ಸಾಧಕತನ ಎದ್ದು ಕಾಣುತ್ತದೆ. ಮಹಿಳೆಯರಿಗೆ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಸೇರಿದಂತೆ ಎ.ಎ. ಕೋರ್ಸು ಗಳಿಗೆ ಪುಕ್ಕಟೆ ಶಿಕ್ಷಣ, ವರ್ಷಕ್ಕೆ ಒಂದು ಕೋಟಿ ಉದ್ಯೋಗಾವಕಾಶ, ಹತ್ತು ವರ್ಷಗಳಲ್ಲಿ ದೇಶದ ಆಹಾರ ಉತ್ಪಾದನೆ ದ್ವಿಗುಣ ಇತ್ಯಾದಿ-ಇತ್ಯಾದಿ-ಸಮಾಜದ ಪ್ರತಿ ವಿಭಾಗಕ್ಕೂ ಉದಾರ ಭರವಸೆಗಳನ್ನು ನೀಡುವಲ್ಲಿ ಬಿ.ಜೆ.ಪಿ. ಕಾಂಗ್ರೆಸ್ಸಿನ ನಕಲು ಮಾಡಿದಂತಿದೆ. ಆ ಪ್ರಕ್ರಿಯೆ ಯಲ್ಲಿ ಅದರ ಪ್ರಣಾಳಿಕೆ ತನ್ನ ಗಂಭೀರತೆಯನ್ನೇ ಕಳೆದುಕೊಂಡಿದೆ.

ಸಾರ್ವಜನಿಕ ಜೀವನದಲ್ಲಿ ಶುಚಿತ್ವ, ಸ್ಥಿರ ಸರಕಾರ ಇತ್ಯಾದಿ ಮಾತುಗಳೆಲ್ಲಾ ಇವೆ. ಆದರೆ ರಾಜಕೀಯದಲ್ಲಿ ಅಪರಾಧೀಕರಣವನ್ನು ಎದುರಿಸುವ ಬಗ್ಗೆ ಮಾತ್ರ ದಿವ್ಯ ಮೌನ! ಹರಿಶಂಕರ್ ತಿವಾರಿ, ಅಮರ್ ಮಣಿ ತ್ರಿಪಾಠಿ ಯಂತವರು ರಾರಾಜಿಸುತ್ತಿರು ವಾಗ ಆ ಬಗ್ಗೆ ಮೌನವೇ ಪಂಡಿತ ಲಕ್ಷಣಂ ಎಂದು ಅದು ಭಾವಿಸಿರಬೇಕು. ಅಂದರೆ ಪಕ್ಷಾಂತರಕ್ಕೆ ಆಮಿಷವೊಡ್ಡಿ, ಕ್ರಿಮಿನಲ್‌ಗಳನ್ನು ಸೇರಿಸಿಕೊಂಡು, ಸಂಸದೀಯ ಪ್ರಜಾಪ್ರಭುತ್ವದ ನೀತಿ-ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಹೇಗಾದರೂ ಅಧಿಕಾರ ಗಿಟ್ಟಿಸುವುದು - ಇದೇ ಬಿ.ಜೆ.ಪಿ.ಯ 'ಸ್ಥಿರತೆ'ಯಿರಬೇಕು! ○

- ಇದು ಸಂಯುಕ್ತ ರಂಗದ ಪ್ರಣಾಳಿಕೆಯ ಮುಖ್ಯ ಒತ್ತು. ಉತ್ತಮ ಆಡಳಿತವೆಂದರೆ ಕೇವಲ ಶ್ರೀಮಂತರಿಗೆ ಹಾಗೂ ಸೌಲಭ್ಯವಂತರಿಗೆ ಸ್ಥಿರತೆಯೆಂಬರ್ಥವಲ್ಲ, ಇದು ಭಾರತದ ಅಪಾರ ಜನಸಮೂಹಗಳ ಅಗತ್ಯಗಳನ್ನು, ನಿರೀಕ್ಷೆಗಳನ್ನು ಗಮನಿಸುವ ಆಡಳಿತ. ಜಾತ್ಯಾತೀತತೆಯ ದೃಢ ರಕ್ಷಣೆ ಇದರ ಮುಖ್ಯ ಅಂಶ. ಜಾತ್ಯಾತೀತತೆ ಎಂದರೆ ಧರ್ಮ ಮತ್ತು ಸರಕಾರವನ್ನು ಪ್ರತ್ಯೇಕಿಸುವುದು ಎಂದು ಪ್ರಣಾಳಿಕೆ ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಸೈದ ಒಕ್ಕೂಟ ತತ್ವ, ನಿರ್ಲಕ್ಷಿತ ಪ್ರದೇಶಗಳಿಗೆ ವಿಶೇಷ ನೆರವು, ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು ಹಾಗೂ ಹಿಂದುಳಿದ ವರ್ಗಗಳನ್ನು 'ಪರಿಶಿಷ್ಟ ಜಾತಿ-ಬುಡಕಟ್ಟು ಅಭಿವೃದ್ಧಿ ಪ್ರಾಧಿಕಾರ'ದಂತಹ ಸರ್ವವ್ಯಾಪಿ ಯೋಜನೆಗಳ ಮೂಲಕ ಅಧಿಕಾರ ಸಂಪನ್ನಗೊಳಿಸುವುದು, ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗಾಗಿ ಅವರಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಿಕ್ಕಾಗಿ ಬಜೆಟ್‌ನಲ್ಲಿ ವಿಶೇಷ ಅವಕಾಶ, ಅನಕ್ಷರತೆ ನಿವಾರಿಸಲು ಉರ್ದು ಪ್ರಾಥಮಿಕ ಶಾಲೆಗಳ ರಚನೆ ಹಾಗೂ ಮೌಲಾನಾ ಆಜಾದ್ ಶಿಕ್ಷಣ ನಿಧಿಯ ಮೂಲನಿಧಿಯಲ್ಲಿ ಹೆಚ್ಚಳ.

ಬಡತನದ ಮೇಲೆ ನೇರ ಧಾಳಿ

ಸಂಯುಕ್ತ ರಂಗದ ಪ್ರಣಾಳಿಕೆ ಕೈಗಾರಿಕೆ, ಕೃಷಿ, ಮೂಲರಚನೆ ಇತ್ಯಾದಿಗಳಲ್ಲಿ ಸರ್ವತೋಮುಖ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಸಾಧನೆಗಳು ಹಾಗೂ ಗುರಿಗಳ ಬಗ್ಗೆ ಹೇಳುತ್ತಾ ಇದರ ಮುಖ್ಯ ಅಂಶವೆಂದರೆ ಬಡತನದ ಮೇಲೆ ನೇರಧಾಳಿಗೆ ಯೋಜನೆಗಳು ಎಂದು ಒತ್ತಿ ಹೇಳಿದೆ. ಈ ಸಂದರ್ಭದಲ್ಲೇ ಮೇಲೆ ಹೇಳಿದ 'ಪ್ರತಿ ಮನೆಯಲ್ಲೂ ಆಹಾರಧಾನ್ಯ, ಪ್ರತಿಯೊಬ್ಬರಿಗೂ ಆರೋಗ್ಯ-ಸಾಕ್ಷರತೆ; ಪ್ರತಿ ಮಗು ಶಾಲೆಯಲ್ಲಿ' ಎಂಬ ಘೋಷಣೆಯನ್ನು ಪ್ರಣಾಳಿಕೆ ಕೊಟ್ಟಿದೆ.

- ಸಂಯುಕ್ತ ರಂಗ ಸರಕಾರ ಬಡತನ ರೇಖೆಯ ಕೆಳಗಿರುವವರಿಗೆ ಅರ್ಧ ಬೆಲೆಗಳಲ್ಲಿ ಆಹಾರಧಾನ್ಯಗಳನ್ನು ಒದಗಿಸುವ ಯೋಜನೆಯನ್ನು ಆಚರಣೆಗೆ ತಂದಿತು. ಪರಿಣಾಮಕಾರಿ ರೇಶನ್ ವ್ಯವಸ್ಥೆ ಇರುವ ರಾಜ್ಯಗಳಲ್ಲಿ ಇದು ಈಗಾಗಲೇ ಜಾರಿಗೆ ಬಂದಿದೆ. ಇದನ್ನು ಬಲಪಡಿಸಿ ವಿಸ್ತರಿಸಲಾಗುವುದು.

- ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಶಿಕ್ಷಣ, ಆರೋಗ್ಯ ಮತ್ತು ವಸತಿ ಬಗ್ಗೆ ನೀಡಿದ ಭರವಸೆಗಳನ್ನು ಈಡೇರಿಸುವುದಾಗಿ ಪ್ರಣಾಳಿಕೆ ಹೇಳಿದೆ. ಶಿಕ್ಷಣವನ್ನು ಒಂದು ಮೂಲಭೂತ ಹಕ್ಕಾಗಿ ಮಾಡಲಾಗುತ್ತದೆ. ೧೪ ವರ್ಷದ ವರೆಗೆ ಪ್ರತಿಯೊಂದು ಮಗುವಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಸಂವಿಧಾನದ ನಿರ್ದೇಶನವನ್ನು ಪಾಲಿಸಲಾಗುತ್ತದೆ. ಒಟ್ಟು ರಾಷ್ಟ್ರೀಯ ಉತ್ಪನ್ನದ ೬% ವನ್ನು ಶಿಕ್ಷಣಕ್ಕೆ ಮೀಸಲಿಡಲಾಗುತ್ತದೆ, ಮಧ್ಯಾಹ್ನದ ಊಟ, ಸಮವಸ್ತ್ರ ಪುಸ್ತಕಗಳು ಇತ್ಯಾದಿ ಇತರ ಪ್ರೋತ್ಸಾಹಕಗಳನ್ನು ವಿಶೇಷವಾಗಿ ಹೆಣ್ಣು ಮಕ್ಕಳಿಗೆ ಒದಗಿಸಲಾಗುವುದು ಎಂಬುದು ಪ್ರಣಾಳಿಕೆಯ ವಚನ.

- ಭ್ರಷ್ಟಾಚಾರವಿಲ್ಲದ, ಸ್ವಚ್ಛ ಹಾಗೂ ಜವಾಬ್ದಾರಿ ಆಡಳಿತ, ತ್ವರಿತ ಮತ್ತು ತಾಳಿಕೆಯ ಬೆಳವಣಿಗೆಗೆ ಅನುಗುಣವಾಗಿ ಪರಿಸರದ ರಕ್ಷಣೆ ಹಾಗೂ ಜನಗಳ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳನ್ನು ಉತ್ತಮಪಡಿಸಲು ಜನಗಳ ಚಳುವಳಿ-ಇವು ಸಂಯುಕ್ತ ರಂಗದ ಪ್ರಣಾಳಿಕೆಯ ಇತರ ಪ್ರಮುಖ ಅಂಶಗಳು.

ಸ್ಥಿರತೆ ಮತ್ತು ಭದ್ರತೆ

• ಕಾಂಗ್ರೆಸ್ ಮತ್ತು ಬಿಜೆಪಿಯ 'ಸ್ಥಿರತೆ'ಯ ರಾಗವನ್ನು ಬಯಲಿಗೆಳೆಯುತ್ತಾ ಸಂಯುಕ್ತರಂಗದ ಪ್ರಣಾಳಿಕೆ 'ಉತ್ತಮ ಆಡಳಿತ ಸ್ಥಿರತೆಯ ಅತ್ಯಂತ ನಂಬಲರ್ಹ ಗ್ಯಾರಂಟಿ' ಎಂದು ಒತ್ತಿ ನೀಡಿ ಹೇಳಿದೆ.

'ಇದೀ ಐದು ವರ್ಷಗಳು ಆಡಳಿತ ಮಾಡಿದ ಸರಕಾರಗಳನ್ನು ಕಂಡಿದ್ದೇವೆ. ಅವಧಿಯ ದೃಷ್ಟಿಯಿಂದ ಸ್ಥಿರವಾದ ಸರ್ಕಾರಗಳನ್ನು ನೋಡಿದ್ದೇವೆ. ಆದರೆ ಜನಗಳಿಗೆ ಸ್ಥಿರತೆ ಮಾತ್ರ ದೂರದ ಮಾತಾಗಿಯೇ ಉಳಿಯಿತು. ಜನ ಹಣದುಬ್ಬರ, ಹೆಚ್ಚುತ್ತಿರುವ ನಿರುದ್ಯೋಗ, ಅದರಿಂದ ಉಂಟಾಗಿರುವ ಅಭದ್ರತೆಗಳಿಂದ ನಲುಗಿ ಹೋದರು. ಕೋಮು ಗಲಭೆಗಳನ್ನು ಅನುಭವಿಸಬೇಕಾಯಿತು; ಅರ್ಥಹೀನ ಸಂಘರ್ಷಗಳಲ್ಲಿ, ಭ್ರಾತೃ ಹತ್ಯೆಗಳಲ್ಲಿ, ಸಾವಿರಾರು ಜನ ಪ್ರಾಣ ಕಳಕೊಂಡರು. ಜನಗಳಿಗೆ ಅವರ ಬದುಕಿನಲ್ಲಿ ಸ್ಥಿರತೆ ಒದಗಿಸಲು ಸರಕಾರದ ಸ್ಥಿರತೆ ಬೇಕು ನಿಜ, ಆದರೆ ಅದಷ್ಟೇ ಸಾಲುವುದಿಲ್ಲ' ಎಂದು ಪ್ರಣಾಳಿಕೆ ಹೇಳಿದೆ.

"ಸಂಯುಕ್ತ ರಂಗ ಭಾರತೀಯ ಜನತೆಗೆ ಸ್ಥಿರತೆ ಹಾಗೂ ಭದ್ರತೆ ಒದಗಿಸಲು ದುಡಿಯುವ ಜನಗಳ ನಿಜ ಆದಾಯವನ್ನು ಇಳಿಸುವ ಹಣದುಬ್ಬರವನ್ನು ಹತೋಟಿಗೆ ತಂದು ಒಟ್ಟಾರೆ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬಲ್ಲ ಆರ್ಥಿಕ ನೀತಿಗಳನ್ನು ಅನುಸರಿಸುತ್ತದೆ. ಕೋಮುವಾದ ಮತ್ತು ಅದು ಹುಟ್ಟಿಸುವ ಸಂಕುಚಿತ ಘರ್ಷಣೆಗಳನ್ನು ಎದುರಿಸುತ್ತದೆ; ಒಕ್ಕೂಟತತ್ವವನ್ನು ಬಲಪಡಿಸಿ ವಿವಿಧ ಭಾಗಗಳ ಆರ್ಥಿಕ ಹಿಂದುಳಿಕೆಯನ್ನು ತಗ್ಗಿಸುವ ನೀತಿಗಳನ್ನು ಅಂಗೀಕರಿಸಲು ಪ್ರಯತ್ನಿಸುತ್ತದೆ; ಪ್ರದೇಶಗಳು ಮತ್ತು ಜನಗಳ ನಡುವಿನ ಅಂತರವನ್ನು ತಗ್ಗಿಸುತ್ತದೆ. ಈ ಮೂಲಕ ಭಾರತೀಯ ಜನತೆಗೆ ಸ್ಥಿರತೆ ಮತ್ತು ಭದ್ರತೆ ಒದಗಿಸುತ್ತದೆ. ಇಂತಹ ಸಮಗ್ರ ಅಭಿವೃದ್ಧಿಯ ಕಟ್ಟೊಟದಿಂದ ಕೂಡಿದ ಅಭಿವೃದ್ಧಿ ಮಾತ್ರವೇ ಜನಗಳಿಗೆ ಪರಿಹಾರ ನೀಡಿ, ದೇಶದ ಹಿತಾಸಕ್ತಿಗಳನ್ನು ಕಾಪಾಡಬಲ್ಲದು' ಎಂದು ಸಂಯುಕ್ತ ರಂಗದ ಪ್ರಣಾಳಿಕೆಯ ಕೊನೆಯಲ್ಲಿ ಹೇಳಿದೆ. ○



ಉತ್ತರ ಪ್ರದೇಶದಲ್ಲಿ ಬಿ.ಜೆ.ಪಿ.ಯ 'ಪ್ರತಾಪ' ದರ್ಶನ

ಜಿಲ್ಲೆಯ ಪ್ರವೇಶಕ್ಕೆ ಮಂತ್ರಿಗೆ ನಿರ್ಬಂಧ

ಕರ್ತವ್ಯ ನಿರತ ಪೋಲೀಸ್ ಅಧಿಕಾರಿಗಳೊಂದಿಗೆ ಫೆಬ್ರವರಿ ನಾಲ್ಕರಂದು ಜಗಳಕ್ಕಿಳಿದ ಉತ್ತರ ಪ್ರದೇಶದ ಮಂತ್ರಿ ರಘುನಾಥ್ ರಾಜಾ ಪ್ರತಾಪ್‌ಸಿಂಗ್ ಲೋಕಸಭೆ ಚುನಾವಣೆ ಮುಗಿಯುವವರೆಗೆ ಪ್ರತಾಪ್‌ಗಢ್ ಜಿಲ್ಲೆಯನ್ನು ಪ್ರವೇಶಿಸದಂತೆ ನಿರ್ಬಂಧಿಸಬೇಕು ಎಂದು ಚುನಾವಣಾ ಆಯೋಗ ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿದೆ.

'ರಾಜು ಭಯ್ಯಾ' ಎಂದು ಕರೆಯಲಾಗುವ ಈ ಮಂತ್ರಿಯಿಂದ ಕಾಯ್ದೆ ಮತ್ತು ಸುವ್ಯವಸ್ಥೆ ಪಾಲನೆ ಕ್ರಿಯೆಯಲ್ಲಿ ಗಂಭೀರ ಸಮಸ್ಯೆ ಉಂಟಾಗುತ್ತಿದೆ ಎಂದು ಆಯೋಗ ಹೇಳಿದೆ. ಪ್ರಸ್ತುತ ಲೋಕಸಭೆ ಚುನಾವಣೆಯಲ್ಲಿ ಪ್ರತಾಪ್ ಸಿಂಗ್ ಅಭ್ಯರ್ಥಿ ಅಲ್ಲ. ಹಾಗಾಗಿ ಅಲ್ಲಿ ಅವರ ಅವಶ್ಯಕತೆ ಅನಪೇಕ್ಷಿತ ಎಂದು ಸ್ವತಃ ಮುಖ್ಯ ಚುನಾವಣೆ ಆಯುಕ್ತ ಡಾ|| ಎಂ.ಎಸ್. ಗಿಲ್ ಹೇಳಿದ್ದಾರೆ.

ಪ್ರತಾಪ್ ಗಢ್ ಜಿಲ್ಲೆಯಲ್ಲಿ ರಘುರಾಜ್ ಪ್ರತಾಪ್‌ಸಿಂಗ್ ಪೋಲೀಸ್ ಅಧಿಕಾರಿಗಳೊಂದಿಗೆ ಜಗಳವಾಡಿದ ಪ್ರಕರಣದ ಬಗ್ಗೆ ಪ್ರಥಮ ಮಾಹಿತಿ ವರದಿಯನ್ನು ಸಲ್ಲಿಸಿಯಾಗಿದೆ. ಅದೇ ದಿನ ಉತ್ತರ ಪ್ರದೇಶದ ಗೊಂಡಾ ಜಿಲ್ಲೆಯಲ್ಲಿ ಬಿ.ಜೆ.ಪಿ. ಅಭ್ಯರ್ಥಿಯೊಬ್ಬರು ಇಂಥದ್ದೇ ಒಂದು ಪ್ರಕರಣದಲ್ಲಿ ಭಾಗಿಯಾಗಿರುವ ಕುರಿತು ಕೂಡ ವರದಿ ಬಂದಿದ್ದು ಈ ಘಟನೆಯನ್ನು ಪರಿಶೀಲಿಸಲಾಗುತ್ತಿದೆ ಎಂದು ಗಿಲ್ ತಿಳಿಸಿದ್ದಾರೆ.

ಹಾಂ, ಅಂದ ಹಾಗೆ ಈ ರಘುರಾಜಾ ಪ್ರತಾಪ್ ಸಿಂಗ್ ಅವರ ಖಾತೆ ಯಾವುದು ಗೊತ್ತೆ? ಅವರು ಕಾರ್ಯಕ್ರಮ ಅನುಷ್ಠಾನ ಸಚಿವರು. ಹಾಗಾದರೆ ಅವರು ಸರಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಅಲ್ಲಿಗೆ ಹೋಗಿದ್ದರಾ ಅಥವಾ ಸರಕಾರಿ ಯಂತ್ರವನ್ನು ದುರುಪಯೋಗ ಪಡಿಸಿಕೊಂಡು ಏನಾದರೂ ಮಾಡಿ ಚುನಾವಣೆಯಲ್ಲಿ ಬಿ.ಜೆ.ಪಿ. ಗೆಲ್ಲಬೇಕೆಂದು ತನ್ನ ಪಕ್ಷದ ಕುಟಿಲ ಯೋಜನೆಗಳನ್ನು ಅನುಷ್ಠಾನಕ್ಕೆ ತರಲು ಅಲ್ಲಿಗೆ ಹೋಗಿದ್ದರಾ ಎಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುತ್ತದೆ.

ಮೊದಲನೆಯ ಉದ್ದೇಶಕ್ಕಂತೂ ಖಂಡಿತಾ ಹೋಗಿರಲಾರರು. ಎರಡನೆಯ ಉದ್ದೇಶ ಸಾಧನೆಗಾಗಿಯೇ ಅವರು ಅಲ್ಲಿಗೆ ಹೋಗಿ ತಮ್ಮ ಪ್ರತಾಪವನ್ನು ತೋರಿದ್ದಾರೆ. ಈ ಎರಡು ಪ್ರಕರಣಗಳನ್ನು ಗಮನಿಸಿದರೆ ಬಿ.ಜೆ.ಪಿ. ರಾಜ್ಯಭಾರದ ಉತ್ತರಪ್ರದೇಶದಲ್ಲಿ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಯುತ್ತದೆಂಬ ಬಗ್ಗೆ ಅನುಮಾನ ಉಂಟಾಗುತ್ತಿದೆ.

ಚುನಾವಣಾ ನೀತಿಸಂಹಿತೆಯನ್ನು ಉಲಂಘಿಸಿ ಕೆಲವು ನಿಗಮಗಳಿಗೆ ಅಧ್ಯಕ್ಷರನ್ನು ನೇಮಕ ಮಾಡಿ ಚುನಾವಣಾ ಆಯೋಗದಿಂದ ಇದೇ ಕಲ್ಯಾಣ್ ಸಿಂಗ್ ಸರಕಾರ ಛೀಮಾರಿ ಹಾಕಿಸಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಅಧಿಕಾರದ ಗದ್ದುಗೆ ಹಿಡಿಯಲು ಬಿ.ಜೆ.ಪಿ. ನಡೆಸುತ್ತಿರುವ ಕುಟಿಲೋಪಾಯಗಳು ಈಚೆಗೆ ಒಂದೊಂದಾಗಿ ಬಯಲಾಗುತ್ತಿದೆ. ಭ್ರಷ್ಟಾತಿಭ್ರಷ್ಟ ಮಾರ್ಗಗಳನ್ನು ಅದು ಅನುಸರಿಸುತ್ತಿದೆ. ತೋಳ್ಬಲವನ್ನು ಪ್ರದರ್ಶಿಸುತ್ತಿದೆ. ಅದೂ ಸ್ವತಃ ತನ್ನ ಪೋಲೀಸ್ ಅಧಿಕಾರಿಗಳೊಂದಿಗೆ! ಅದರ ಜೊತೆ ಜೊತೆಯಲ್ಲಿ ನೈತಿಕತೆ, ರಾಜಕೀಯ ಸ್ವಚ್ಛತೆ ಬಗ್ಗೆ ಅಣಿ ಮುತ್ತುಗಳನ್ನು ಉದುರಿಸುತ್ತಾರೆ! ಇಂಥ ಢೋಂಗಿ ಪಕ್ಷಕ್ಕೆ ಮತ ನೀಡಬೇಕೇ ಎಂಬುದನ್ನು ಮತದಾರರೇ ನಿರ್ಧರಿಸಬೇಕು. ಮೊದಲ ಪ್ರಕರಣದಲ್ಲಿ ಪ್ರಸ್ತಾಪವಾಗುವ 'ಪ್ರತಾಪ'ಗಳು (ಪ್ರತಾಪ್ ಗಢ್ ಮತ್ತು ಪ್ರತಾಪ್ ಸಿಂಗ್) ಬಿ.ಜೆ.ಪಿ. 'ಪ್ರತಾಪ' ಪ್ರದರ್ಶನ ದೊಂದಿಗೆ ತಳಕು ಹಾಕಿರುವುದು ಕೇವಲ ಕಾಕತಾಳೀಯ ಎನ್ನೋಣವೇ?

ಚುನಾವಣೆ ಕರ್ತವ್ಯದ ಮೇಲಿದ್ದ ಪೋಲೀಸ್ ಅಧಿಕಾರಿಗಳೊಂದಿಗೆ ಉತ್ತರ ಪ್ರದೇಶದ ಬಿ.ಜೆ.ಪಿ. ಮಂತ್ರಿಯ ಜಗಳ; ಮಧ್ಯಪ್ರದೇಶದಲ್ಲಿ ಕ್ರಿಮಿನಲ್ ಆರೋಪಗಳ ಆಧಾರದಲ್ಲಿ ಬಿ.ಜೆ.ಪಿ.ಯ ನಾಲ್ವರು ಅಭ್ಯರ್ಥಿಗಳ ನಾಮಪತ್ರಗಳ ತಿರಸ್ಕಾರ; ಗುಜರಾತ್ ವಿಧಾನಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಬದಲಾವಣೆಗೆ ಒತ್ತಾಯಿಸಿ ಬಿ.ಜೆ.ಪಿ. ಕಾರ್ಯಕರ್ತರಿಂದ ಅನಿರ್ದಿಷ್ಟಾವಧಿ ಧರಣಿ....

ದೇಶದೆಲ್ಲೆಡೆ 12ನೇ ಲೋಕಸಭಾ ಚುನಾವಣೆಯ ಕಾವು ಏರುತ್ತಿರುವುದರ ನಡುವೆ, 21ನೇ ಶತಮಾನಕ್ಕೆ ದೇಶವನ್ನು ಕೊಂಡೊಯ್ಯುವ ಪೊಳ್ಳು ಘೋಷಣೆ ಕೂಗುತ್ತಿರುವ ಶಿಸ್ತು ಬದ್ಧ, ಸಚ್ಚಾರಿತ್ರ್ಯದ ಪಕ್ಷವೆಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿರುವ ಭಾರತೀಯ ಜನತಾ ಪಕ್ಷದ ಮುಖವಾಡ ಅನಾವರಣಗೊಳ್ಳುತ್ತಿರುವ ಹಲವು ಪ್ರಕರಣಗಳು ವರದಿಯಾಗಿವೆ. ಮೇಲೆ ಉಲ್ಲೇಖಿಸಿರುವುದು ಅವುಗಳ ಸಾರಾಂಶ.

ಇಬ್ಬರು ಕ್ರಿಮಿನಲ್‌ಗಳ ನಾಮಪತ್ರ ತಿರಸ್ಕೃತ

'ಸಚ್ಚಾರಿತ್ರ್ಯ'ದ ಪಕ್ಷದ ಇನ್ನೊಂದು ಮುಖವನ್ನು ಪರಿಚಯಿಸುವ ಇನ್ನೆರಡು ಪ್ರಕರಣಗಳನ್ನು ತಿಳಿದುಕೊಳ್ಳೋಣ ಬನ್ನಿ.

ಮಧ್ಯ ಪ್ರದೇಶದಲ್ಲಿ ಬಿ.ಜೆ.ಪಿ.ಯ ಇಬ್ಬರು ಅಭ್ಯರ್ಥಿಗಳ ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ. ಚುನಾವಣಾ ಅಧಿಕಾರಿಗಳು ಹೀಗೆ ಮಾಡಿರುವುದು ಯಾವುದೇ ತಾಂತ್ರಿಕ ಕಾರಣಗಳಿಗಾಗಿ ಅಲ್ಲ; ಈ ಇಬ್ಬರೂ ಹೊಂದಿರುವ ಕೋರ್ಟ್ ದಾಖಲೆಯೇ ಅದಕ್ಕೆ ಕಾರಣ.

ಧಾರ್(ಮೀಸಲು) ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಛತ್ತಾರ್ ಸಿಂಗ್ ದರ್ಬಾರ್ ಕೊಲೆ ಪ್ರಕರಣವೊಂದರಲ್ಲಿ ಜೈಲು ಶಿಕ್ಷೆಗೆ ಒಳಗಾಗಿದ್ದ ಅಂಶ ನಾಮಪತ್ರ ಪರಿಶೀಲನೆ ವೇಳೆ ಗಮನಕ್ಕೆ ಬಂದಾಗ ಅವರ ನಾಮಪತ್ರವನ್ನು ತಿರಸ್ಕರಿಸಲಾಯಿತು. ಈ ಅಘಾತಕರ ಅವಮಾನದಿಂದ 'ಚೇತರಿಸಿಕೊಂಡ' ಬಿ.ಜೆ.ಪಿ 'ಬಿದ್ದರೂ ಮೀಸೆ ಮಣ್ಣಾಗಲಿಲ್ಲ' ಅನ್ನುವಂತೆ ದರ್ಬಾರ್‌ರ ಪತ್ನಿ ಹೇಮಲತಾರನ್ನು ಆ ಕ್ಷೇತ್ರದ ಚುನಾವಣಾ ಕಣದಲ್ಲಿ ಇಳಿಸಿದೆ. ಹೇಮಲತಾ 'ಡಮ್ಮಿ' ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಇದೇ ರಾಜ್ಯದ ಭಿಂದ್ ಲೋಕಸಭಾ ಕ್ಷೇತ್ರದ ಬಿ.ಜೆ.ಪಿ ಅಭ್ಯರ್ಥಿ ಡಾ|| ರಾಮ ಲಖನ್ ಸಿಂಗ್ ವಿರುದ್ಧ ಕಳೆದವಾರ ಒಂದು ಕೊಲೆ ಮೊಕದ್ದಮೆ ದಾಖಲಾಗಿದ್ದು ಅವರ ನಾಮಪತ್ರವೂ ತಿರಸ್ಕೃತವಾಗಿದೆ. ಇದು ಬಿ.ಜೆ.ಪಿ. ಪ್ರತಿಷ್ಠೆಗೆ ಇನ್ನೊಂದು ದೊಡ್ಡ ಹೊಡೆತವಾಗಿದೆ.

ಭಿಂದ್ ಕ್ಷೇತ್ರದ ತೊಸೆಡಾ ಪ್ರದೇಶದಲ್ಲಿ ಒಬ್ಬ ವ್ಯಕ್ತಿಯ ಕೊಲೆಯಾಗಿದೆ. ಡಾ|| ಸಿಂಗ್ ಮತ್ತು ಅವರ ಸಹಾಯಕರು ಹೊಡೆದು ಸಾಯಿಸಿದ್ದಾರೆ ಎಂದು ಮೃತ ವ್ಯಕ್ತಿಯ ಗೆಳೆಯರೊಬ್ಬರು ಪೋಲೀಸರಿಗೆ ಸಲ್ಲಿಸಿರುವ ದೂರಿನಲ್ಲಿ ಆಪಾದಿಸಿದ್ದಾರೆ.

ಛತ್ತರ್ ಸಿಂಗ್ ದರ್ಬಾರ್‌ಗೆ ಕೊಲೆ ಪ್ರಕರಣವೊಂದರಲ್ಲಿ 1981ರಲ್ಲಿ ಜೀವಾವಧಿ ಶಿಕ್ಷೆಯಾಗಿತ್ತು. 1995ರಲ್ಲಿ ಶಿಕ್ಷೆ ಅವಧಿ ಮುಗಿಯಬೇಕಿತ್ತಾದರೂ ಅವರನ್ನು 1987ರಲ್ಲಿ ಪ್ರೊಬೆಷನ್ ಮೇಲೆ ಬಿಡುಗಡೆ ಮಾಡಲಾಗಿತ್ತು.

ಇಂಥ ಒಬ್ಬ ವ್ಯಕ್ತಿಯನ್ನು ಲೋಕಸಭೆ ಚುನಾವಣೆಗೆ ನಿಲ್ಲಿಸುವ ಬಗ್ಗೆ ಬಿ.ಜೆ.ಪಿಯಲ್ಲಿ ಎಷ್ಟು ವಿರೋಧ ಇತ್ತೆಂದರೆ ಮಾಜಿ ಶಾಸಕ ಹಾಗೂ ಧಾರ್‌ನ ಮುಖಂಡರಲ್ಲಿ ಒಬ್ಬರಾದ ರಂಜನಾ ಬಘೇಲ್ ಬಿ.ಜೆ.ಪಿ. ಬಿಟ್ಟು ಕಾಂಗ್ರೆಸ್ ಸೇರಿದರು. ದರ್ಬಾರ್‌ರ ಅಭ್ಯರ್ಥಿತನವನ್ನು ಕಟುವಾಗಿ ಟೀಕಿಸಿದರು.

ನೈತಿಕತೆ ಮತ್ತು ಆದರ್ಶ ಕುರಿತ ಬಿ.ಜೆ.ಪಿ ಹೇಳಿಕೆ ಕೇವಲ ಪೊಳ್ಳು ಎಂಬುದು ಸಾಬೀತಾಗಿದೆ ಎಂದು ಈ ಎರಡು ಪ್ರಕರಣಗಳ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಿರುವ ಮಧ್ಯಪ್ರದೇಶದ ಬಹುತೇಕ ರಾಜಕೀಯ ಪಕ್ಷಗಳು ಹೇಳಿವೆ.

ಪಕ್ಷದ ಅಭ್ಯರ್ಥಿಗಳ ವಿರುದ್ಧ ಧರಣಿ

ಲೋಕಸಭಾ ಚುನಾವಣೆ ಜೊತೆಗೆ ಗುಜರಾತ್ ವಿಧಾನ ಸಭೆಗೂ ಚುನಾವಣೆ ನಡೆಯಲಿದ್ದು ಅಭ್ಯರ್ಥಿಗಳ ಆಯ್ಕೆ ವಿಚಾರದಲ್ಲಿ ಭಾರತೀಯ ಜನತಾ ಪಕ್ಷ ಭಾರೀ ಗೊಂದಲವನ್ನು ಎದುರಿಸುತ್ತಿದೆ. ಪ್ರತಿಭಟನೆಯ ಹಂತಕ್ಕೂ ಅತೃಪ್ತಿ ತಲುಪಿದೆ. ಅಹಮದಾಬಾದ್ ಮತ್ತು ಗಾಂಧಿನಗರ ಕ್ಷೇತ್ರಗಳ ಅನೇಕ ಬಿ.ಜೆ.ಪಿ. ಕಾರ್ಯಕರ್ತರು ಪಕ್ಷದ ರಾಜ್ಯ ಕೇಂದ್ರ ಕಛೇರಿ ಮುಂದೆ ಅನಿರ್ದಿಷ್ಟ ಅವಧಿಯ ಧರಣೆ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ. ಧರಣಿಯನ್ನು ವಾಪಸು ಪಡೆಯಬೇಕೆಂಬ ಪಕ್ಷದ ನಾಯಕರ ಮನವಿಯನ್ನು ಅವರು ಕಿವಿಗೆ ಹಾಕಿಕೊಂಡಿಲ್ಲ.

ಪೋಲೀಸ್‌ಗೆ ಹೊಡೆದ ಬಿ.ಎಸ್.ಪಿ. ಶಾಸಕನ ಸೆರೆ

ಕ್ರಿಮಿನಲ್ ಚುನಾವಣೆಗಳಲ್ಲಿ ಒಂದು ಕಾಲದ ತನ್ನ ಮಿತ್ರ ಬಿ.ಜೆ.ಪಿ.ಯೊಂದಿಗೆ ಪೈಪೋಟಿಗೆ ಇಳಿದಂತೆ ಕಾಣುವ ಬಹುಜನ ಸಮಾಜ ಪಕ್ಷ(ಬಿ.ಎಸ್.ಪಿ.)ದ ಒಬ್ಬ ಶಾಸಕ ಪೋಲೀಸರಿಗೆ ಹೊಡೆದು ಬಂಧನಕ್ಕೆ ಒಳಗಾಗಿರುವ ಪ್ರಕರಣ ಉತ್ತರ ಪ್ರದೇಶದಿಂದ ವರದಿಯಾಗಿದೆ.

ಅನೀಸ್ ಅಹಮದ್ ಆಲಿಯಾಸ್ ಫೂಲ್ ಬಾಬೂ ಬಿ.ಎಸ್.ಪಿ.ಯ ಶಾಸಕ. ಅವರು ಫಿಲಿಬಿತ್ ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯೂ ಆಗಿದ್ದಾರೆ.

ಫೆ. 6 ರಂದು ಫಿಲಿಬಿತ್ ಜಿಲ್ಲೆಯ ಬಿಲಾಸ್‌ಪುರ್ ಪ್ರದೇಶದಲ್ಲಿ ವಾಹನಗಳ ತಪಾಸಣೆ ನಡೆಸುತ್ತಿದ್ದಾಗ ಶಾಸಕ ಅಹಮದ್ ಸಬ್ ಇನ್ಸ್‌ಪೆಕ್ಟರ್ ಎಂ.ಎಸ್. ರಾವತ್‌ರಿಗೆ ಹೊಡೆದರು. ಈ ಹಲ್ಲೆ ಸಂಬಂಧದಲ್ಲಿ ಶಾಸಕನನ್ನು ಬಂಧಿಸಲಾಯಿತು.

ಬಿ.ಜೆ.ಪಿ. ಎಂಬ ಬೆಂಕಿ ಆರಿಸಲು ಗಟಾರದ ನೀರನ್ನಾದರೂ ಬಳಸಿ....

ನಮ್ಮ ಮನೆಗೆ ಬೆಂಕಿ ಬಿದ್ದಾಗ ಅದನ್ನು ಆರಿಸಲು ಗಂಗಾಜಲವೇ, ಕಾವೇರಿ ನೀರೇ ಎನ್ನುವುದನ್ನು ನೋಡುವುದಿಲ್ಲ. ಗಟಾರದ ನೀರನ್ನಾದರೂ ಬಳಸಿ ಅದನ್ನು ನಂದಿಸಲು ಪ್ರಯತ್ನಿಸುತ್ತೇವೆ. ಅದೇ ರೀತಿ ಕೋಮುವಾದವನ್ನು ಪ್ರತಿಪಾದಿಸುವ ಬಿ.ಜೆ.ಪಿ. ಬೆಂಕಿ ಇದ್ದಂತೆ. ಅದನ್ನು ಸೋಲಿಸಲು ಗಟಾರದ ನೀರನ್ನಾದರೂ ಬಳಸಿ...

ಹೀಗೆಂದು ಹೇಳಿದವರು ಕವಿ-ಪತ್ರಕರ್ತ ರಂಜಾನ್ ದರ್ಗಾ.

ವಿಚಾರ ಶೀಲರ ವೇದಿಕೆ ಕರ್ನಾಟಕ-'ವಿವೇಕ' ಫೆಬ್ರವರಿ 5 ರಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ 'ಕೋಮುವಾದ ಮತ್ತು ಲೋಕಸಭಾ ಚುನಾವಣೆಗಳು'- ವಿಚಾರ ಸಂಕಿರಣದಲ್ಲಿ ಅವರು ಮಾತನಾಡುತ್ತಿದ್ದರು.

ಸಂಘ ಪರಿವಾರವನ್ನು ಸೋಲಿಸಲು ಒಂದು ಕ್ರಿಮಿಗಾದರೂ ತಾನು ಮತ ಚಲಾಯಿಸುತ್ತೇನೆ ಎಂದು ದರ್ಗಾ ಹೇಳಿದಾಗ ಮಿಥಿಕ್ ಸೊಸೈಟಿಯ ಸಭಾಂಗಣದಲ್ಲಿ ಕಿಕ್ಕಿರಿದು ನೆರೆದಿದ್ದ ಪ್ರೇಕ್ಷಕರು ಪ್ರಚಂಡ ಕರತಾಡನ ಮಾಡಿದರು.

ಕಾಂಗ್ರೆಸ್ಸಿಗರಲ್ಲಿ, ಕಮ್ಯುನಿಸ್ಟರಲ್ಲಿ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯುಳ್ಳ ಅನೇಕ ಮುಖಂಡರಿದ್ದಾರೆ. ಆದರೆ ಬಿ.ಜೆ.ಪಿ.ಯಲ್ಲಿ ಅಂಥ ಒಬ್ಬನೇ ಒಬ್ಬ ನಾಯಕನಿಲ್ಲ ಎಂದು ದರ್ಗಾ ನುಡಿದರು. ಭಾರತ ಬಿಟ್ಟು ತೊಲಗಿ ಚಳುವಳಿಯಲ್ಲಿ ತಾನು ಪಾಲ್ಗೊಂಡಿದ್ದೆ ಎಂದು ಹೇಳಿಕೊಳ್ಳುವ ಅಟಲ್ ಬಿಹಾರಿ ವಾಜಪೇಯಿ ವಾಸ್ತವವಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಬಗೆದಿದ್ದ ದ್ರೋಹವನ್ನು ಜಗಜ್ಜಾಹೀರು ಮಾಡುವ 'ಫ್ರಂಟ್‌ಲೈನ್'ನಲ್ಲಿ ಪ್ರಕಟವಾದ ಸಂದರ್ಶನವನ್ನು ಅವರು ಉದ್ಧರಿಸಿದರು. ದಾಖಲೆ ಸಹಿತವಾದ, ಈ ಧ್ವನಿಮುದ್ರಿತ ಸಂದರ್ಶನವನ್ನು ಪ್ರಕಟಿಸುವ ಮೂಲಕ ಎನ್. ರಾಮ್ ದೇಶಕ್ಕೆ ಮಹದುಪಕಾರ ಮಾಡಿದ್ದಾರೆ ಎಂದು ದರ್ಗಾ ಹೇಳಿದರು.

ಈ ಸಲ ನಾವು ಮತ ಚಲಾಯಿಸಲೇಬೇಕು. ಯಾಕೆಂದರೆ ಮುಂದೆ ಅದರ ಖಾತರಿಯಿಲ್ಲ ಎಂದು ಹೇಳಿದ ದರ್ಗಾ, ಅಂತಿಮವಾಗಿ ಹಿಂದೂ ಕೋಮುವಾದಿಗಳು ಮತ್ತು ಮುಸ್ಲಿಂ ಕೋಮುವಾದಿಗಳು ಒಂದಾಗುತ್ತಾರೆ, ತೊಂದರೆ ಪಡುವವರು ಜನಸಾಮಾನ್ಯರು ಎಂದರು.

ಜನಸಾಮಾನ್ಯರು ಸಹಜ ಜಾತ್ಯಾತೀತರು. ಅವರೇ ಕೋಮುವಾದಿಗಳಾದರೆ ದೇಶವನ್ನು ಯಾರಿಂದಲೂ ಉಳಿಸಲು ಸಾಧ್ಯವಿಲ್ಲ. ನಿಸ್ಪೃಹ ಮನಸ್ಸಿನ ಜನರಲ್ಲಿ ಕೋಮುವಾದಿ ಪ್ರಜ್ಞೆ ತುಂಬಿದ್ದು ಬಿ.ಜೆ.ಪಿ. ಮಂದಿ ಎಂದು ದರ್ಗಾ ತರಾಟೆಗೆ ತೆಗೆದುಕೊಂಡರು.

ಸಂಕಿರಣವನ್ನು ಉದ್ಘಾಟಿಸಿದ ಪ್ರೊ. ಜಿ.ಕೆ. ಗೋವಿಂದ ರಾವ್, ಚುನಾವಣೆಯಲ್ಲಿ ಮತ ಚಲಾಯಿಸದಿರುವುದು ಅತಿ ದೊಡ್ಡ ದೇಶದ್ರೋಹ ಎಂದು ಅಭಿಪ್ರಾಯಪಟ್ಟರು. ಸಂಘ ಪರಿವಾರ ದೇಶದಲ್ಲಿ ನಡೆಸುತ್ತಿರುವ ವಿಷಮಯವಾದ ಚಟುವಟಿಕೆಗಳ ವೃತ್ತಾಂತವನ್ನು ಪ್ರೊ. ರಾವ್ ಸಭಿಕರ ಮುಂದೆ ವಿವರವಾಗಿ ತೆರೆದಿಟ್ಟರು.

ಪರಸ್ಪರ ನಂಬಿಕೆಗಳ ಸಹಿಷ್ಣುತೆ ತುಂಬಾ ಮುಖ್ಯವಾಗುತ್ತದೆ ಎಂದು ಖ್ಯಾತ ಚಲನಚಿತ್ರ ನಿರ್ದೇಶಕ ಎಂ.ಎಸ್. ಸತ್ಯು ಹೇಳಿದರು. ಜಾತ್ಯಾತೀತತೆ ಎಂದರೆ ಎಲ್ಲಾ ಧರ್ಮಗಳಿಗೆ ಸಮನಾದ ಅವಕಾಶ ಕೊಡುವುದು ಎಂಬ ಪರಿಕಲ್ಪನೆ ತಪ್ಪು ಎಂದವರು ಸ್ಪಷ್ಟಪಡಿಸಿದರು.

ಪ್ರಜೆಗಳ ಜಾಗೃತಿಯಿಂದ ಮಾತ್ರವೇ ಪ್ರಜಾಪ್ರಭುತ್ವದ ಉಳಿವು ಸಾಧ್ಯ ಎಂದವರು ಸ್ವಾತಂತ್ರ್ಯ ಹೋರಾಟಗಾರರಾದ ದೊರೆಸ್ವಾಮಿ.

ಪತ್ರಕರ್ತೆ ಡಾ|| ವಿಜಯ ಮಾತನಾಡಿ ಬಿ.ಜೆ.ಪಿ. ಪ್ರಣಾಳಿಕೆಯಿಂದಾಗಿ ಆ ಪಕ್ಷ ತನ್ನ ಗೋರಿಯನ್ನು ತಾನೇ ತೋಡಿಕೊಂಡಿದೆ ಎಂದು ವಿಶ್ಲೇಷಿಸಿದರು. ಕೊಳೆತು ನಾರುತ್ತಿರುವ ಇಂದಿನ ರಾಜಕೀಯ ವಾತಾವರಣದಲ್ಲಿ ಎಡಪಕ್ಷಗಳಷ್ಟೇ ವಿಶ್ವಾಸ ಯೋಗ್ಯವಾದವು. ನನ್ನ ಪ್ರದೇಶದಲ್ಲೇನಾದರೂ ಎಡಪಕ್ಷಗಳ ಅಭ್ಯರ್ಥಿಯೇನಾದರೂ ಇದ್ದಲ್ಲಿ ಅವರಿಗೇ ನನ್ನ ಮತ ಎಂದು ವಿಜಯಾ ಹೇಳಿದಾಗ ಸಭಾಂಗಣ ಚಪ್ಪಾಳೆಯಿಂದ ಅನುರಣಿಸಿತು.

ಚುನಾವಣೆಯಿಂದ ಏನಾಗುತ್ತದೆ. ಯಾರಿಗೆ ಓಟು ಹಾಕಿದರೆ ಏನು ಪ್ರಯೋಜನ ಎಂಬ ಸಿನಿಕತನ ಬೇಡ. ಇದರಿಂದ ಅರಾಜಕತೆ ಉಂಟಾಗುತ್ತದೆ. ದುಷ್ಟ ಶಕ್ತಿಗಳ ಕೈಮೇಲಾಗುತ್ತದೆ ಎಂದು ಎಚ್ಚರಿಕೆ ಕೊಟ್ಟವರು ಸಂಕಿರಣದ ಅಧ್ಯಕ್ಷತೆ ವಹಿಸಿದ್ದ ಎಚ್.ಎಸ್. ನಾಗಮೋಹನ್ ದಾಸ್.

ಕೆ.ಎಸ್. ವಿಮಲ ಸ್ವಾಗತಿಸಿದರು. ವೆಂಕಟೇಶ ಮೂರ್ತಿ ಧನ್ಯವಾದ ಅರ್ಪಿಸಿದರು.

ದೇಶದೊಳಗೆ

ವಿಶ್ವ

ತ್ರಿಪುರ : ಉಗ್ರಗಾಮಿಗಳಿಂದ ಸಿ.ಪಿ.ಐ.(ಎಂ) ಕಾರ್ಯಕರ್ತರ ಅಪಹರಣ

ಅಗರ್ತಲಾ: ನಿಷೇಧಿತ ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗದ (ಎನ್.ಎಲ್.ಎಫ್.ಟಿ) ಉಗ್ರಗಾಮಿಗಳು ದಕ್ಷಿಣ ತ್ರಿಪುರ ಜಿಲ್ಲೆಯಪೂರರ್ ವಾಮಾ ಬಂಕರ್ ಪ್ರದೇಶದಿಂದ ಫೆ. 8ರಂದು ಇಬ್ಬರು ಸಿ.ಪಿ.ಐ.(ಎಂ) ಕಾರ್ಯಕರ್ತರನ್ನು ಅಪಹರಿಸಿದ್ದಾರೆ.

ಅಖಿಲ ಭಾರತ ಕಿಸಾನ್ ಸಭಾದ ಸಕ್ರಿಯ ಕಾರ್ಯಕರ್ತ ಭಗೀರಥ ದಾಸ್ ಅವರ ಮನೆಗೆ ನುಗ್ಗಿದ ಉಗ್ರಗಾಮಿಗಳು ದಾಸ್ ಅವರ ಸೋದರರಾದ ಸುನಿಲ್ ಮತ್ತು ಅಧಿರಥ ಅವರನ್ನು ಬಂದೂಕು ತೋರಿಸಿ ಬೆದರಿಸಿ ಅಪಹರಿಸಿಕೊಂಡು ಹೋದರು. ಈ ಇಬ್ಬರೂ ಸಿ.ಪಿ.ಐ(ಎಂ) ಸ್ಥಳೀಯ ಸಮಿತಿಯ ಸಕ್ರಿಯ ಕಾರ್ಯಕರ್ತರು.

ಇವರ ಬಿಡುಗಡೆಗಾಗಿ ಅಪಾರ ಮೊತ್ತದ ಹಣವನ್ನು ನೀಡುವಂತೆ ದುಷ್ಕರ್ಮಿಗಳು ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಫೆ. 16ರಂದು ನಡೆಯ ಲಿರುವ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಳನ್ನು ಅಸ್ತವ್ಯಸ್ತಗೊಳಿಸಲು ಪಿತೂರಿಯ ಭಾಗವಾಗಿ ಉಗ್ರಗಾಮಿಗಳು ಈ ದುಷ್ಕೃತ್ಯ ಎಸಗಿದ್ದಾರೆ.

ಚುನಾವಣೆಗಳನ್ನು ಬಹಿಷ್ಕರಿಸುವಂತೆ ಉಗ್ರಗಾಮಿಗಳು ರಾಜ್ಯದ ಬೆಟ್ಟ ಪ್ರದೇಶದ ತ್ರಿಪುರಿ ಜನತೆಗೆ ಕರೆ ಕೊಟ್ಟಿದ್ದಾರೆ. ಫೆ. 16ರಂದು 'ಪ್ರತಿಭಟನಾ ದಿನ' ಮತ್ತು 'ಬಂದ್' ಆಚರಿಸುವಂತೆಯೂ ಅದಕ್ಕೆ ತಪ್ಪಿದರೆ ಘೋರ ಪರಿಣಾಮ ಎದುರಿಸಬೇಕಾದೀತೆಂದೂ ಅವರು ಬೆದರಿಕೆ ಹಾಕಿದ್ದಾರೆ.

ಆದರೆ ವಿಚ್ಛಿದ್ರಕಾರಿ ಶಕ್ತಿಗಳ ಬೆದರಿಕೆಗೆ ತ್ರಿಪುರಾ ಜನತೆ ಮಣಿದಿಲ್ಲ. ಪ್ರಜಾಸತ್ತಾತ್ಮಕ ಪ್ರಕ್ರಿಯೆ ಸುಗಮವಾಗಿ ಸಾಗುವ ದಿಸೆಯಲ್ಲಿ ಅವರು ಸಹಕಾರ ನೀಡುತ್ತಿದ್ದಾರೆ. ಇದರಿಂದ ಹತಾಶರಾದ ದೇಶದ್ರೋಹಿ ಶಕ್ತಿಗಳು ಅಪಹರಣ, ದೊಂಬಿಯಂಥ ದುಷ್ಕೃತ್ಯಗಳಲ್ಲಿ ತೊಡಗುತ್ತಿವೆ.

ಉಗ್ರಗಾಮಿಗಳ ಚುನಾವಣೆ ಬಹಿಷ್ಕಾರ ಕರೆಯ ಹಿನ್ನೆಲೆಯಲ್ಲಿ ದುಷ್ಕರ್ಮಿಗಳ ಚಟುವಟಿಕೆಗಳನ್ನು ಮಟ್ಟ ಹಾಕಲು ತೀಕ್ಷ್ಣ ಕಾರ್ಯಾಚರಣೆ ನಡೆಸುವಂತೆ ಸೇನೆ ಸಹಿತ ಎಲ್ಲಾ ಭದ್ರತಾ ಸಂಸ್ಥೆಗಳಿಗೆ ತ್ರಿಪುರ ಸರಕಾರ ಸೂಚಿಸಿದೆ.

ಬಿ.ಜೆ.ಪಿ. ಗೂಂಡಾಗಳ ದಾಳಿಗೆ ಡಿ.ವೈ.ಎಫ್.ಐ. ಕಾರ್ಯಕರ್ತನ ಬಲಿ

ಕೇರಳದ ತ್ರಿಶೂರ್‌ನ ತಾಳಿಕುಳಂ ಬಳಿ ಫೆ. 5 ರಂದು ಬಿ.ಜೆ.ಪಿ.ಯ ಗೂಂಡಾಗಳು ಡಿ.ವೈ.ಎಫ್.ಐ. ಕಾರ್ಯಕರ್ತರ ಮೇಲೆ ನಡೆಸಿದ ಅಮಾನುಷ ದಾಳಿಯಲ್ಲಿ ರವಿ(30.ವ) ಎಂಬ ಡಿ.ವೈ.ಎಫ್.ಐ. ಸದಸ್ಯ ಸಾವಿಗೀಡಾಗಿದ್ದಾರೆ. ಇನ್ನೊಬ್ಬ ಗಾಯಗೊಂಡಿದ್ದಾರೆ.

ತ್ರಿಶೂರ್ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ತಾಳಿಕುಳಂ ಇದೆ. ಚುನಾವಣೆ ಪ್ರಚಾರ ಕೆಲಸ ಮುಗಿಸಿಕೊಂಡು ಹಿಂದಿರುಗುತ್ತಿದ್ದ ಎಡ ಪ್ರಜಾಸತ್ತಾತ್ಮಕ ರಂಗದ(ಎಲ್.ಡಿ.ಎಫ್.) ಕಾರ್ಯಕರ್ತರ ಮೇಲೆ ಕಾವಿ ಪಡೆಯ ದುರುಳರು ಹೇಯ ಹಲ್ಲೆ ನಡೆಸಿದರು.

ರವಿ ಹಿಂದೆ ಬಿ.ಜೆ.ಪಿಯಲ್ಲಿದ್ದು ಎಂಟು ತಿಂಗಳ ಹಿಂದೆಯಷ್ಟೆ ಕೋಮುವಾದಿಗಳ ಸಂಗ ಬಿಟ್ಟು ಪ್ರಗತಿಪರ ಯುವಜನ ಸಂಘಟನೆಯಾದ ಡಿ.ವೈ.ಎಫ್.ಐ. ಸೇರಿದ್ದರು. ಡಿ.ವೈ.ಎಫ್.ಐ.ನ ಜನಪ್ರಿಯತೆ ಯನ್ನು ಸಹಿಸದ ಸಂಘ ಪರಿವಾರ ಒಬ್ಬ ಯುವಕನ ಪ್ರಾಣವನ್ನೇ ಬಲಿತೆಗೆ ದುಕೊಂಡಿದೆ. ಕೇರಳದಲ್ಲಿ ಚುನಾವಣಾ ಕಣದಲ್ಲಿ ತನ್ನ ಬೇಳೆ ಬೇಯುವುದಿಲ್ಲ ಎಂಬ ವಾಸ್ತವತೆಯನ್ನು ಅರಿತು ಬಿ.ಜೆ.ಪಿ. ಹತಾಶೆಯಿಂದ ಇಂಥ ಕೊಲೆ ರಾಜಕೀಯದಲ್ಲಿ ತೊಡಗಿದೆ.

12ನೇ ಲೋಕಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ)ನ 72 ಅಭ್ಯರ್ಥಿಗಳು ಕಣದಲ್ಲಿ

12 ನೇ ಲೋಕಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಇಬ್ಬರು ಬೆಂಬಲಿತ ಸ್ವತಂತ್ರ ಅಭ್ಯರ್ಥಿಗಳೂ ಸೇರಿದಂತೆ 72 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ.(ಅಭ್ಯರ್ಥಿಗಳ ಹೆಸರು ಹಾಗೂ ಕ್ಷೇತ್ರಗಳ ವಿವರವನ್ನು ಹಿಂದಿನ ಎರಡು ಸಂಚಿಕೆಗಳಲ್ಲಿ ಈಗಾಗಲೇ ಪ್ರಕಟಿಸಲಾಗಿದೆ)

ಇವರಲ್ಲಿ ಎಂಟು ಅಭ್ಯರ್ಥಿಗಳು ಮಹಿಳೆಯರು(11%), 9 ಪರಿಶಿಷ್ಟ ಜಾತಿ ಹಾಗೂ 4 ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದವರು. ಸಿಪಿಐ(ಎಂ) 11ನೇ ಲೋಕಸಭೆಯಲ್ಲಿ ಹೊಂದಿದ್ದ 32 ಸ್ಥಾನಗಳಲ್ಲಿ 8 ರಲ್ಲಿ ಹೊಸ ಅಭ್ಯರ್ಥಿಗಳನ್ನು ನಿಲ್ಲಿಸಲಾಗಿದೆ.

ರಾಜ್ಯವಾರು ಅಭ್ಯರ್ಥಿಗಳ ಸಂಖ್ಯೆ ಹೀಗಿದೆ

ರಾಜ್ಯ	ಒಟ್ಟು ಅಭ್ಯರ್ಥಿಗಳು	ಮಹಿಳೆ	ಪ.ಜಾ.	ಪ.ಬು
ಪಶ್ಚಿಮಬಂಗಾಳ	32	4	4	2
ಕೇರಳ	11	2	-	-
ಬಿಹಾರ	4	-	1	1
ಮಹಾರಾಷ್ಟ್ರ	3	1	-	2
ಆಂಧ್ರಪ್ರದೇಶ	3	1	1	-
ಪಂಜಾಬ್	3	-	1	-
ತ್ರಿಪುರಾ	2	-	-	-
ಅಸ್ಸಾಂ	2	-	-	-
ರಾಜಸ್ಥಾನ	2	-	-	-
ಮಧ್ಯಪ್ರದೇಶ	2	-	-	-
ತಮಿಳುನಾಡು	2	-	-	-
ಒರಿಸ್ಸಾ	2	-	-	-
ಉತ್ತರ ಪ್ರದೇಶ	1	-	-	-
ಕರ್ನಾಟಕ	1	-	1	-
ಹರ್‍ಯಾಣ	1	-	-	-
ಅಂಡಮಾನ್-ನಿಕೋಬಾರ್	1	-	-	-

ನಾಗಾಲ್ಯಾಂಡ್ : ಅವಿರೋಧ ಆಯ್ಕೆಯ ಪ್ರಹಸನ

ನಾಗಾಲ್ಯಾಂಡ್ ವಿಧಾನಸಭೆಗೆ 43 ಕಾಂಗ್ರೆಸ್(ಐ) ಅಭ್ಯರ್ಥಿಗಳು ಅವಿರೋಧ ವಾಗಿ ಆಯ್ಕೆಯಾಗಿರುವುದು ಒಂದು ಪ್ರಹಸನ ವಲ್ಲದೆ ಬೇರೇನೂ ಅಲ್ಲ ಎಂದು ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ವರ್ಣಿಸಿದೆ. ಅಸೆಂಬ್ಲಿ ಚುನಾವಣೆ ಯನ್ನು ಹೊಸದಾಗಿ ನಡೆಸುವಂತೆ ಅದು ಒತ್ತಾಯಿಸಿದೆ.

ಪಾಲಿಟ್ ಬ್ಯೂರೋ ಫೆಬ್ರವರಿ 10ರಂದು ಹೊರಡಿಸಿರುವ ಹೇಳಿಕೆ ಯೊಂದರಲ್ಲಿ ನಾಗಾಲ್ಯಾಂಡ್ ರಾಜಕೀಯ ವಿದ್ಯಾಮಾನಗಳ ಬಗ್ಗೆ ತೀವ್ರ ಕಳಕಳಿ ವ್ಯಕ್ತಪಡಿಸಿದೆ.

ಭೂಗತ ಉಗ್ರಗಾಮಿಗಳು ಹಾಕಿದ ಬೆದರಿಕೆಯಿಂದಾಗಿ ಫೆ. 23ರ ಚುನಾವಣೆಗಾಗಿ ಕಾಂಗ್ರೆಸೇತರ ಪಕ್ಷಗಳಿಗೆ ನಾಮಪತ್ರಗಳನ್ನು ಸಲ್ಲಿಸಲು ಆಗಲಿಲ್ಲ ಎಂದು ಸಿ.ಪಿ.ಐ(ಎಂ) ಹೇಳಿದೆ.

ಉಗ್ರಗಾಮಿಗಳ ಒಂದು ವಿಭಾಗ ಕಾಂಗ್ರೆಸ್(ಐ)ನೊಂದಿಗೆ ಕೈಜೋಡಿಸಿ ಚುನಾವಣೆ ಬಹಿಷ್ಕಾರದ ಕರೆ ಕೊಟ್ಟು ಕಾಂಗ್ರೆಸ್‌ನ 43 ಸದಸ್ಯರು ಅವಿರೋಧವಾಗಿ ಆಯ್ಕೆಯಾಗುವಂತೆ ನೆರವಾಗಿರುವುದು ಸ್ಪಷ್ಟವಾಗಿದೆ ಎಂದು ಪಿ.ಬಿ. ಹೇಳಿದೆ.

ಈಶಾನ್ಯ ಭಾರತದ ಪುಟ್ಟ ರಾಜ್ಯಗಳಲ್ಲಿ ಒಂದಾದ ನಾಗಾಲ್ಯಾಂಡ್ ವಿಧಾನಸಭೆಗೆ 43 ಸದಸ್ಯರು ಆಯ್ಕೆಯಾಗಿದ್ದಾರೆ. 60 ಸದಸ್ಯರ ರಾಜ್ಯ ವಿಧಾನ ಸಭೆಗೆ ಫೆ. 23ರಂದು ಚುನಾವಣೆ ನಡೆಯಬೇಕಿತ್ತು.

ಚುನಾವಣೆಯನ್ನು ಬಹಿಷ್ಕರಿಸುವಂತೆ ನಾಗಾಲ್ಯಾಂಡ್‌ನ ಭೂಗತ ಉಗ್ರಗಾಮಿ ಸಂಘಟನೆಗಳು ಕರೆ ಕೊಟ್ಟು ಬೆದರಿಕೆ ಹಾಕಿದ್ದ ಹಿನ್ನೆಲೆಯಲ್ಲಿ 60 ಸ್ಥಾನಗಳ ಪೈಕಿ 43 ರಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಮಾತ್ರ ಉಮೇದುವಾರಿಕೆ ಸಲ್ಲಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಿಸಲಾಗಿದೆ.

ಎಡ ಪಕ್ಷಗಳು ಇಲ್ಲಿ ದುರ್ಬಲವಾಗಿದ್ದು ಕಾಂಗ್ರೆಸ್ ಪಕ್ಷ ಮಾತ್ರವೇ ಚುನಾವಣಾ ಕಣಕ್ಕೆ ಇಳಿದಿತ್ತು. ಪ್ರಾದೇಶಿಕ ಪಕ್ಷಗಳು ಮಾತ್ರವೇ ಅಲ್ಲದೆ ತಾನೇ ಕಾಂಗ್ರೆಸ್‌ಗೆ ಪರ್ಯಾಯ, ದೇಶದ ಸಮಗ್ರತೆಯ 'ರಕ್ಷಣೆ' ತನ್ನ ಗುತ್ತಿಗೆ ಎಂಬಂತೆ ವರ್ತಿಸುತ್ತಿರುವ ಭಾರತೀಯ ಜನತಾ ಪಕ್ಷ ಕೂಡ ಅಭ್ಯರ್ಥಿಗಳನ್ನು ಇಳಿಸದೆ ದೇಶವಿರೋಧಿ ಶಕ್ತಿಗಳಿಗೆ ಕುಮ್ಮಕ್ಕು ಕೊಟ್ಟವು.

ಚುನಾವಣೆ ಬಹಿಷ್ಕಾರದ ಕರೆಗೆ ಬಿ.ಜೆ.ಪಿ. ಬೆಂಬಲ ಕೊಟ್ಟಿದ್ದರಿಂದ ಆ ಪಕ್ಷದ ದ್ವಿಮುಖ ಧೋರಣೆ ಮತ್ತೊಮ್ಮೆ ಬಯಲಿಗೆ ಬಂದಿದೆ.

ಚುನಾವಣಾ ಪೂರ್ವ ಸಮೀಕ್ಷೆ ಪೂರ್ವಾಗ್ರಹ ಪೀಡಿತ : ಸಾವಂತ್

ಎಲೆಕ್ಟ್ರಾನಿಕ್ ಹಾಗೂ ಪತ್ರಿಕಾ ಮಾಧ್ಯಮಗಳು ನಡೆಸುವ ಚುನಾವಣೆ ಪೂರ್ವ ಸಮೀಕ್ಷೆಗಳು 'ಅಸಮರ್ಪಕ ಹಾಗೂ ನ್ಯಾಯಸಮ್ಮತವಲ್ಲದ್ದು' ಎಂದು ಭಾರತೀಯ ಪತ್ರಿಕಾ ಮಂಡಳಿಯ ಅಧ್ಯಕ್ಷ ನ್ಯಾಯಮೂರ್ತಿ ಪಿ.ಬಿ. ಸಾವಂತ್ ಹೇಳಿದ್ದಾರೆ.

ವರದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು ಇಂಥ ಸಮೀಕ್ಷೆಗಳು ಪೂರ್ವಾಗ್ರಹ ಪೀಡಿತವಾಗಿರುವುದರಿಂದ ಜನಾಭಿಪ್ರಾಯದ ಮೇಲೆ ಪರಿಣಾಮ ಬೀರುತ್ತವೆ ಎಂದು ತಿಳಿಸಿದರು.

ಎಲೆಕ್ಟ್ರಾನಿಕ್ ಹಾಗೂ ಪತ್ರಿಕಾ ಮಾಧ್ಯಮಗಳಲ್ಲಿ ಚುನಾವಣಾಧಾರಿತ ಸಮೀಕ್ಷೆಗಳನ್ನು ಸಿದ್ಧಪಡಿಸಲು ವಿವಿಧ ಕ್ಷೇತ್ರಗಳ 100 ಜನಗಳನ್ನು ನಿಯೋಜಿಸಲಾಗಿದೆ. ಹಲವಾರು ಸಂದರ್ಭಗಳಲ್ಲಿ ಪತ್ರಕರ್ತರು ಸಮತೋಲನ ವರದಿಗಳನ್ನು ನೀಡುವುದಿಲ್ಲ ಎಂದವರು ಹೇಳಿದರು.

ಮಹಿಳೆಯರನ್ನು ನಿರ್ಲಕ್ಷಿಸುವುದು ಸುಲಭವಲ್ಲ- ಮಹಿಳಾ ಸಂಘಟನೆಗಳ ಎಚ್ಚರಿಕೆ

ಜನಸಂಖ್ಯೆಯ ಅರ್ಧ ಭಾಗದಷ್ಟಿರುವ ಮಹಿಳೆಯರನ್ನು ನಿರ್ಲಕ್ಷಿಸುವುದು ಈಗ ಸುಲಭವಲ್ಲ. ಪ್ರಣಾಳಿಕೆಗಳಲ್ಲಿ ಭರವಸೆ ನೀಡಿ ನಂತರ ಅನುಷ್ಠಾನದ ಹಂತದಲ್ಲಿ ತೋರುವ ನಿರ್ಲಕ್ಷ್ಯ ಧೋರಣೆಗಳನ್ನು ಪಕ್ಷಗಳು ಇನ್ನು ಮುಂದೆ ಬಿಡಬೇಕಾಗುತ್ತದೆ... ಇದು ರಾಜಕೀಯ ಪಕ್ಷಗಳಿಗೆ ರಾಜ್ಯದ ವಿವಿಧ ಮಹಿಳಾ ಸಂಘಟನೆಗಳು ನೀಡಿದ ಎಚ್ಚರಿಕೆ.

6.2.98 ರಂದು ನಗರದ ಮಿಥಿಕ್ ಸೊಸೈಟಿ ಸಭಾಂಗಣದಲ್ಲಿ ಜನವಾದಿ ಮಹಿಳಾ ಸಂಘಟನೆ, ಸುಮಂಗಲಿ ಸೇವಾ ಆಶ್ರಮ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ವೈ.ಡಬ್ಲ್ಯೂ.ಸಿ.ಎ., ಸಂಯುಕ್ತ ಮಹಿಳಾ ವೇದಿಕೆ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಮಹಿಳಾ ದಕ್ಷತಾ ಸಮಿತಿ, ಎ.ಐ.ಡಬ್ಲ್ಯೂ.ಸಿ. ಮುಂತಾದ 8 ಸಂಘಟನೆಗಳು ರಾಜಕೀಯ ಪಕ್ಷಗಳೊಂದಿಗೆ ಏರ್ಪಡಿಸಿದ್ದ ಮುಖಾಮುಖಿ ಕಾರ್ಯಕ್ರಮದಲ್ಲಿ ಮೂಡಿ ಬಂದ ಅಭಿಪ್ರಾಯಗಳಿವು.

"ಲೋಕಸಭಾ ಚುನಾವಣೆ ಮತ್ತು ಮಹಿಳೆ-ರಾಜಕೀಯ ಪಕ್ಷಗಳ ಮುಂದಿರುವ ಸವಾಲುಗಳು ಮತ್ತು ಸಾಧ್ಯತೆಗಳು" ಎಂಬ ಕುರಿತು ಮಾತನಾಡಲು ಕಾಂಗ್ರೆಸ್ ಪಕ್ಷವನ್ನು ಪ್ರತಿನಿಧಿಸಿ ಬಂದ ಬಿ.ಎ.ಹಸನಬ್ಬನವರು "ಮಹಿಳೆಗೆ ಮಹಿಳೆಯೇ ಶತ್ರು" ನಮಗೆ ಬೇಕಾದವರನ್ನು ನಾವು ಆಯ್ಕೆ ಮಾಡಿಕೊಳ್ಳುತ್ತೇವೆ-ಕೇಳಲು ನೀವ್ಯಾರು? ಎನ್ನುವ ಮಾತುಗಳನ್ನಾಡಿ ಪಕ್ಷದ ಸರ್ವಾಧಿಕಾರಿ ಮನೋಭಾವದ ವಕ್ತಾರರೆಂಬುದನ್ನು ಧೃಡಪಡಿಸಿದರು. ಮತ್ತು ನೇರವಾಗಿ ಸಭಿಕರ ಖಂಡನೆಗೆ ಗುರಿಯಾದರು. ಮಹಿಳೆಯರಿಗೆ ಶೇ. 33 ಮೀಸಲಾತಿಗೆ ಬದ್ಧರೆಂದು ಹೇಳಿಕೊಂಡ ಅವರು ಸಂಸತ್ತಿನ ಅಧಿವೇಶನದಲ್ಲಿ ಚರ್ಚೆಗೆ ಬಂದಾಗ ಸಭಾತ್ಯಾಗ ಮಾಡಿದ್ದೇಕೆಂಬ ಪ್ರಶ್ನೆಗೆ ನಿರುತ್ತರರಾದರು. ಷಾಬಾನು ಪ್ರಕರಣದ ಕುರಿತಾದ ಪ್ರಶ್ನೆಗೆ - ಸುಪ್ರೀಂಕೋರ್ಟ್ ತೀರ್ಪು ಶರಿಯತ್ ವಿರೋಧಿಯಾಗಿತ್ತು. ನಮಗೆ ಶರೀಯತ್ ಸರ್ವೋಚ್ಛ ಎಂಬಂತಹ ಮೂಲಭೂತವಾದೀತನದ ಉತ್ತರವನ್ನು ನೀಡಿ ತೀವ್ರ ಟೀಕೆಗೆ ಒಳಗಾದರು. ಬಿ.ಜೆ.ಪಿ.ಯನ್ನು ಪ್ರತಿನಿಧಿಸಿ ಬಂದ ಶ್ರೀಮತಿ ಪ್ರಮಿಳಾ ನೇಸರ್ಗಿಯವರು ಬಿ.ಜೆ.ಪಿ. ಮಹಿಳಾ ಪರವಾದ ನಿಲುವುಗಳನ್ನು ಹೊಂದಿದೆ ಎಂದರಲ್ಲದೆ ಬಿ.ಜೆ.ಪಿ.ಯು ಸಮಾನ ನಾಗರಿಕ ಸಂಹಿತೆಗೆ ತಮ್ಮದೇ ಸ್ಪಷ್ಟೀಕರಣ ನೀಡಿದರು. ಬಿ.ಜೆ.ಪಿ. ಮಹಿಳಾ ಮೀಸಲಾತಿಗೆ ಬದ್ಧವೆಂದ ಅವರು ಹಿಂದಿನ ಅಧಿವೇಶನದಲ್ಲಿ ತಮ್ಮ ಪಕ್ಷ ನಡೆದುಕೊಂಡ ರೀತಿಯ ಬಗ್ಗೆ ಮತ್ತು ಬಿ.ಜೆ.ಪಿ.ಯ ಮೇಲಿನ ಆರ್.ಎಸ್.ಎಸ್. ಹಿಡಿತಗಳ ಬಗ್ಗೆ ಉತ್ತರ ಕೊಡಲು ವಿಫಲರಾದರು.

ಲೋಕಶಕ್ತಿಯಿಂದ ಬಂದ ಪ್ರಮೋದ್ ಹೆಗ್ಡೆ- ರಾಮಕೃಷ್ಣ ಹೆಗಡೆಯವರ ಹೆಗ್ಗಳಿಕೆಗಳನ್ನು ಹೇಳಿಕೊಂಡರಾದರೂ ಕೆಲವೇ ದಿನಗಳ ಹಿಂದೆ ಬಿ.ಜೆ.ಪಿ. ಮತ್ತಿತರ ಮುಖಂಡರನ್ನು ಕೋಮುವಾದಿಗಳೆಂದು ಜರೆದು ಮಾತನಾಡಿದ ನೀವು ಈಗ ಹೇಗೆ ಅವರೊಡನೆ ಒಂದಾಗಿ ಬೆರೆತಿರುವಿರಿ? ಎಂಬ ಪ್ರಶ್ನೆಗೆ ತಮ್ಮ ಅಸಹಾಯಕತೆಯನ್ನು ತೋಡಿಕೊಂಡರು. ಜನತಾದಳ, ಕರ್ನಾಟಕ ವಿಕಾಸ ಪಕ್ಷ, ಸಿ.ಪಿ.ಐ. ಪಕ್ಷಗಳ ಮುಖಂಡರು ತಮ್ಮ ಪಕ್ಷಗಳ ಬದ್ಧತೆಯ ಬಗ್ಗೆ ತಿಳಿಸಿದರು. ಸಿ.ಪಿ.ಐ.(ಎಂ)ನ್ನು ಪ್ರತಿನಿಧಿಸಿ ಭಾಗವಹಿಸಿದ ಕಾಂ|| ಜಿ.ಎನ್. ನಾಗರಾಜ್‌ರವರು ಎಡಪಕ್ಷಗಳು ಮತ್ತು ಅವುಗಳ ಮಹಿಳಾ ಪರ ನಿಲುವುಗಳು-ಪ.ಬಂಗಾಲದ ಸಮರ್ಥ ಪಂಚಾಯತ್ ವ್ಯವಸ್ಥೆಯಲ್ಲಿ ಪರಿಣಾಮಕಾರೀ ಪಾತ್ರ ನಿರ್ವಹಿಸುತ್ತಿರುವ ಮಹಿಳೆಯರ ಕುರಿತು, ಅಲ್ಲಿನ ಭೂಸುಧಾರಣೆ ಕಾಯ್ದೆಯನ್ವಯ ಆದ ಭೂಮಿಹಂಚಿಕೆಯ ಫಲ 30 ಲಕ್ಷ ಮಹಿಳೆಯರಿಗೆ ದೊರೆತಿದೆ ಎಂಬುದನ್ನು ಸಾದ್ಯಂತವಾಗಿ ವಿವರಿಸಿದರು ಮತ್ತು ಸಿ.ಪಿ.ಐ.(ಎಂ) ಸದಾ ಈ ರೀತಿಯ ಸಾಮಾಜಿಕ ಪರಿವರ್ತನೆಗೆ ಬದ್ಧವಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಲೋಕಸಭಾ ಚುನಾವಣೆಯ ಮುಖ್ಯ ಅಂಶಗಳಾದ ಕೋಮುವಾದ, ಭ್ರಷ್ಟಾಚಾರ, ಹೊಸ ಆರ್ಥಿಕ ನೀತಿಗಳ ಪರಿಣಾಮದಿಂದ ಉಂಟಾದ ಸಮಸ್ಯೆಗಳ ಕುರಿತು ಡಾ|| ವಿಜಯ(ಸಂಪಾದಕಿ-ಸಂಕುಲ), ಶ್ರೀಮತಿ ಶರಣ್ಯಹೆಗ್ಡೆ (ಅಧ್ಯಕ್ಷೆ, ಮಹಿಳಾ ದಕ್ಷತಾ ಸಮಿತಿ) ಶ್ರೀಮತಿ ಪಾರ್ವತಿ ಮೆನನ್(ಫ್ರಂಟ್‌ಲೈನ್)ರವರು ವಿಷಯ ಮಂಡಿಸಿದರು. ಸಭೆಯ ಅಧ್ಯಕ್ಷತೆಯನ್ನು ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕಿ ಎಸ್. ವರಲಕ್ಷ್ಮಿ ಯವರು ವಹಿಸಿದ್ದರು. ಜೆ.ಡಬ್ಲ್ಯೂ.ಪಿ.ಯ ಕೃಷ್ಣಕುಮಾರಿ ಸ್ವಾಗತಿಸಿದರು. ವಿಮಲಾ ಕೆ.ಎಸ್.(ಅಧ್ಯಕ್ಷೆ, ಜೆ.ಎಂ.ಎಸ್.) ಕಾರ್ಯಕ್ರಮ ನಿರ್ವಹಣೆ ಮಾಡಿದರು. ಜಾಗೃತಿ ಮಹಿಳಾ ಅಧ್ಯಯನ ಕೇಂದ್ರದ ಎನ್. ಗಾಯಿತ್ರಿ ವಂದನಾರ್ಪಣೆ ಮಾಡಿದರು. ○

ಚುನಾವಣಾ ಕಣದಲ್ಲಿ ಕ್ರಿಮಿನಲ್‌ಗಳು:ಇದರಲ್ಲಂತೂ ಬಿ.ಜೆ.ಪಿ ಎಲ್ಲಕ್ಕೂ ಮುಂದೆ!

ಬಿ.ಜೆ.ಪಿ. ಈಗ 12ನೇ ಲೋಕಸಭಾ ಚುನಾವಣೆಗಳಲ್ಲಿ ಎಲ್ಲಕ್ಕೂ ಮುಂದೆ ಎಂದು ಅಡ್ವಾಣಿಯವರು ಬೆನ್ನು ತಟ್ಟಿಕೊಂಡಿದ್ದಾರೆ. ಅದು ಎಂತಹ ಭ್ರಮೆಯೆಂದು ಇನ್ನೆರಡು ವಾರಗಳಲ್ಲಿ ಎಲ್ಲರಿಗೂ ತಿಳಿಯಲಿದೆ. ಆದರೆ ಒಂದು ವಿಷಯದಲ್ಲಂತೂ ಅದು ಎಲ್ಲಕ್ಕೂ ಮುಂದೆ ಎಂದು ಈಗಲೇ ಗೊತ್ತಾಗಿದೆ- ಕ್ರಿಮಿನಲ್ ದಾಖಲೆಯ ಅಭ್ಯರ್ಥಿಗಳ ಸಂಖ್ಯೆಯಲ್ಲಿ, ಬಹುಶಃ ಮುಂದೆ ಕ್ರಿಮಿನಲ್ ಹಿನ್ನೆಲೆಯ ಎಂ.ಪಿ.ಗಳ ಸಂಖ್ಯೆಯಲ್ಲೂ.

ಚುನಾವಣಾ ಆಯೋಗ ಕ್ರಿಮಿನಲ್ ವ್ಯಕ್ತಿಗಳನ್ನು ಅಭ್ಯರ್ಥಿಗಳನ್ನಾಗಿ ಮಾಡಬೇಡಿ ಎಂದು ಎಲ್ಲಾ ರಾಜಕೀಯ ಪಕ್ಷಗಳನ್ನು ಕೇಳಿಕೊಂಡಿತ್ತು. ಆದರೆ ಅದು ಹಾಗೆಂದು ವಿನಂತಿಸಿಕೊಳ್ಳಬಹುದಷ್ಟೆ. 'ಔಟ್‌ಲುಕ್' ಪತ್ರಿಕೆ ನೇಮಿಸಿದ ವರಿಷ್ಠರ ಒಂದು ಮಂಡಳಿ 12 ನೇ ಲೋಕಸಭಾ ಚುನಾವಣೆಗಳಲ್ಲಿ ಭಾಗ ವಹಿಸುತ್ತಿರುವ ಅಭ್ಯರ್ಥಿಗಳ ಹಿನ್ನೆಲೆಗಳನ್ನು ಪರಿಶೀಲಿಸಿ ಒಂದು ಪಟ್ಟಿಯನ್ನು ಸಲ್ಲಿಸಿದೆ. ಇದರಲ್ಲಿ ಚುನಾವಣೆ ಸ್ಪರ್ಧಿಸಲು ತಮ್ಮ ಕ್ರಿಮಿನಲ್ ವ್ಯಕ್ತಿತ್ವದಿಂದಾಗಿ ಅನರ್ಹರಾದ 72 ಅಭ್ಯರ್ಥಿಗಳನ್ನು ಗುರುತಿಸಲಾಗಿದೆ. ಈ 72 ರಲ್ಲಿ 16 ಮಂದಿ ಬಿ.ಜೆ.ಪಿ. ಅಭ್ಯರ್ಥಿಗಳು! ಅದರ ಮಿತ್ರ ಪಕ್ಷಗಳಾದ ಶಿವಸೇನೆ, ಸಮತಾ ಪಕ್ಷಗಳಿಂದ ತಲಾ ಇಬ್ಬರು, ಜನತಾಂತ್ರಿಕ ಬಿ.ಎಸ್.ಪಿ. ಹಾಗೂ ಎ.ಐ.ಎ.ಡಿ.ಎಂ.ಕೆ.ಯ ತಲಾ ಒಬ್ಬರ ಹೆಸರುಗಳಿವೆ. ಅಂದರೆ ಒಟ್ಟು 22.

ಈ ಹಿನ್ನೆಲೆಯಲ್ಲಿ ಇತರ ಪಕ್ಷಗಳ ಪಾಲು. ಸಮಾಜವಾದಿ ಪಾರ್ಟಿ-12, ಕಾಂಗ್ರೆಸ್ (ಐ)-9, ರಾಷ್ಟ್ರೀಯ ಜನತಾ ದಳ ಹಾಗೂ ಬಿ.ಎಸ್.ಪಿ. ತಲಾ ಐವರು, ಬಿಹಾರ್ ಜನ ಕಾಂಗ್ರೆಸ್-2, ಹಿಮಾಚಲ ವಿಕಾಸ್ ಕಾಂಗ್ರೆಸ್, ಹರ್‍ಯಾಣಾ ಲೋಕದಳ, ಕರ್ನಾಟಕ ವಿಕಾಸ ಪಾರ್ಟಿ ಹಾಗೂ ಜನತಾದಳ ತಲಾ ಒಂದೊಂದು.

ಸಂಯುಕ್ತ ರಂಗವನ್ನು ಆರಿಸಿ ತನ್ನಿ

ಪುಟ 1 ರಿಂದ

ನಿಂತುಹೋಗುತ್ತಿತ್ತು. ದೇಶದ ದುರ್ಬಲ ವರ್ಗಗಳು ಮುಖ್ಯವಾಗಿ ರೈತರು ಮತ್ತು ಸಾಮಾನ್ಯ ಜನ ತೀವ್ರ ಕಷ್ಟಕ್ಕೊಳಗಾಗುತ್ತಿದ್ದರು. ಪೊಟಾಶ್ ಮತ್ತು ಫಾಸ್ಪೇಟ್ ಗೊಬ್ಬರಗಳಿಗೆ ಸಬ್ಸಿಡಿಯನ್ನು ಕೊಡುವ ಮೂಲಕ ಈ ಗೊಬ್ಬರಗಳ ಉಪಯೋಗವನ್ನು ರೈತರು ಮಾಡಲು ಸಾಧ್ಯ ಮಾಡಿಕೊಟ್ಟಿದೆ ಸಂಯುಕ್ತ ರಂಗ ಸರಕಾರ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಬಡತನದ ರೇಖೆಯ ಕೆಳಗಿರುವ ಲಕ್ಷಾಂತರ ಅತಿ ಬಡವ ಕುಟುಂಬಕ್ಕೆ ಅರ್ಧ ದರಗಳಲ್ಲಿ ಅಕ್ಕಿ ಇತ್ಯಾದಿ ಒದಗಿಸಿದ ಸರಕಾರ ಸಂಯುಕ್ತ ರಂಗದ ಸರಕಾರ.

6. ಕಬ್ಬಿನ ಬೆಳೆಗಾರರಿಗೆ 3-4 ವರ್ಷ ಕಬ್ಬು ಅರೆದ ದರಗಳನ್ನೂ ಕೊಡದಿದ್ದಾಗ, ಕಬ್ಬುಬೆಳೆಗಾರರು ತೀವ್ರವಾಗಿ ಬಳಲುತ್ತಿದ್ದಾಗ, ಅವರಿಗೆ 6,000 ಕೋಟಿಗಿಂತಲೂ ಅಧಿಕ ಹಣ ಒದಗಿಸಿ ಕೊಟ್ಟ ಸರಕಾರ ಸಂಯುಕ್ತ ರಂಗ ಸರಕಾರ.

7. ಇಡೀ ದೇಶದಲ್ಲಿ ಈ 48 ತಿಂಗಳುಗಳಲ್ಲಿ ಯಾವುದೇ ರೀತಿಯಲ್ಲಿ ಮತೀಯ ಗಲಭೆಗಳಿಗೆ ಎಡೆ ಮಾಡಿಕೊಡದೆ ಯಶಸ್ವಿಯಾಗಿ ತಡೆ ಹಿಡಿದ ಸರಕಾರ ಸಂಯುಕ್ತರಂಗ ಸರಕಾರ. ಆದರೂ ಹಲವೆಡೆ ಬಿ.ಜೆ.ಪಿ. ಮತೀಯ ಶಕ್ತಿಗಳು ಇಂತಹ ಮತೀಯ ಗಲಭೆಗಳಿಗೆ ಪ್ರೋತ್ಸಾಹ ಕೊಡುತ್ತಾ ಬಂದಿದ್ದಾರೆ ಎಂಬುದನ್ನು ಇಲ್ಲಿ ತುಲನಾತ್ಮಕವಾಗಿ ನೋಡಬೇಕು.

ದೇಶದ ಸಂವಿಧಾನದ "ಜಾತ್ಯಾತೀತ ತತ್ವ"ವನ್ನು ಎತ್ತಿ ಹಿಡಿದು, ಎಲ್ಲಾ ಅಲ್ಪ ಸಂಖ್ಯಾತರಿಗೆ ರಕ್ಷಣೆ ಕೊಟ್ಟ ಸರಕಾರ ಸಂಯುಕ್ತರಂಗ ಸರಕಾರ.

ಇದೇ ವೇಳೆ ರಾಷ್ಟ್ರಾಧ್ಯಕ್ಷರು ಬಿ.ಜೆ.ಪಿಗೆ ಕೇಂದ್ರದಲ್ಲಿ ಅಧಿಕಾರ ಕೊಟ್ಟರೂ, ಲೋಕಸಭೆಯಲ್ಲಿ ವಿಶ್ವಾಸಮತವನ್ನು ಪಡೆಯಲಾರದೆ 13 ದಿನಗಳ ಅಂತರದಲ್ಲಿ "ಬಿ.ಜೆ.ಪಿ.ಯ ಪ್ರಧಾನಿ" ವಾಜಪೇಯಿ ರಾಜಿನಾಮೆ ಕೊಟ್ಟು ಹೊರನಡೆಯ ಬೇಕಾಯಿತು. ಬಿ.ಜೆ.ಪಿ ಯೇತರ ಕಾಂಗ್ರೆಸ್ಸೇತರ ಪಕ್ಷಗಳಿಗೆ 'ದೇಶವನ್ನು ಆಳಲು ಸಾಧ್ಯ" ಎಂದು ತನ್ನ ಸಮಾನ ಕನಿಷ್ಠ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುತ್ತಾ ಬಂದಿದೆ ಸಂಯುಕ್ತ ರಂಗ ಸರಕಾರ.

ಜನತೆ ತಮ್ಮನ್ನು ಅಧಿಕಾರದಿಂದ ಕೆಳಗಿಳಿಸಿದಾಗ, ಹೇಗಾದರೂ ಮಾಡಿ ತಾವು ಅಧಿಕಾರಕ್ಕೆ ಬರಬೇಕೆಂಬ ಒಂದೇ ಒಂದು ಹಂಚಿಕೆಯಿಂದ ಕಾಂಗ್ರೆಸ್ ಪಕ್ಷವು ಕ್ಷುಲ್ಲಕ ಕಾರಣವನ್ನು ಮುಂದಿಟ್ಟು "ಸಂಯುಕ್ತ ರಂಗ" ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸಿತು. ನಾಚಿಕೆಗೇಡು!

ಬಿ.ಜೆ.ಪಿ. ಪಕ್ಷವು ಉತ್ತರ ಪ್ರದೇಶದಲ್ಲಿ ಎಲ್ಲಾ ಮೌಲ್ಯಗಳನ್ನು ಬೀದಿಗೆ ಎಸೆದು ಕ್ರಿಮಿನಲ್ ದಾಖಲೆಗಳುಳ್ಳ ಹಲವು ಮಂತ್ರಿಗಳನ್ನು ನೇಮಿಸಿಕೊಂಡು95 ಮಂದಿಯ ಮಂತ್ರಿ ಮಂಡಳವನ್ನು ರಚಿಸಿತಲ್ಲದೇ ಅದೇ ಬಿ.ಜೆ.ಪಿ ಕೇಂದ್ರದಲ್ಲೂ ಅದೇ ರೀತಿಯ ಸರಕಾರವನ್ನು ತರಲು ಪ್ರಯತ್ನಿಸಲಿಲ್ಲವೇ! ನಾಚಿಕೆಗೇಡು! ಭ್ರಷ್ಟತೆಯ ಹಲವಾರು ಮೊಕದ್ದಮೆಗಳನ್ನು ಎದುರಿಸುತ್ತಿರುವ ಹಾಗೂ 1996ರಲ್ಲಿ ತಮಿಳುನಾಡಿನ ಜನತೆಯಿಂದ ತೆಗೆದು ಬಿಸಾಡಲ್ಪಟ್ಟ ಜಯಲಲಿತಾ ಇವರ ಜೊತೆ ಬಿ.ಜೆ.ಪಿ. ಚುನಾವಣಾ ಮೈತ್ರಿ ಮಾಡಿಕೊಂಡಿದೆ-ನಾಚಿಕೆಗೇಡು!

ರಾಮ ಮಂದಿರ ಕಟ್ಟುವದು, 370ನೇ ಕಲಮು ತೆಗೆದು ಹಾಕುವುದು, ಸಮಾನ ಸಿವಿಲ್ ಕೋಡು ತರುವದು ಇದೇ ತಮ್ಮ ಚುನಾವಣೆ ಘೋಷಣೆ ಎಂದು ಸಾರುವ ಮೂಲಕ ಇಡೀ ದೇಶವು ಸ್ವಾತಂತ್ರ್ಯ ಹೋರಾಟದ ವೇಳೆ ಎತ್ತಿ ಹಿಡಿದ ತತ್ವಗಳ ಮೇಲೆ, ನಮ್ಮ ಸಂವಿಧಾನ ಎತ್ತಿ ಹಿಡಿದ ತತ್ವಗಳ ಮೇಲೆ ಸವಾಲು ಎಸೆದಿದೆ. ದೇಶದ ಸಮಗ್ರತೆಯ ಮೇಲೆ ಸವಾಲೆಸೆದಿದೆ. ಕೋಟಿ ಕೋಟಿ ಅಲ್ಪ ಸಂಖ್ಯಾತ ನಾಗರಿಕರ ಮೂಲಭೂತ ಹಕ್ಕುಗಳ ಮೇಲೆ ಸವಾಲೆಸೆದಿದೆ.

ಖಂಡಿತವಾಗಿ ಬಿ.ಜೆ.ಪಿಯನ್ನು ಸಂಪೂರ್ಣವಾಗಿ ಸೋಲಿಸಿ, ಸಂಯುಕ್ತರಂಗದ ಪಕ್ಷಗಳ ಉಮೇದುವಾರರನ್ನು, ಕರ್ನಾಟಕದಲ್ಲಿ ಸಿ.ಪಿ.ಐ.(ಎಂ) ಅಭ್ಯರ್ಥಿಯನ್ನು ಕೋಲಾರ (ಮೀಸಲು) ಕ್ಷೇತ್ರದಲ್ಲಿ ಗೆಲ್ಲಿಸಿಕೊಡುವಿರಿ ಎಂಬ ವಿಶ್ವಾಸ ನಮಗಿದೆ. ○

ಅಣಕ



ಶರತ್ ಚಂದ್ರ

ಭಂಡ ಕ್ಯಾಪ್ಟನೇ ಸರಿ!

ಅಪ್ಪ: ಏನ್ಮಗಾ! ಇಲೆಕ್ಷನ್ ಹತ್ರ ಬರ್‍ತಾ ಇದೆ. ಯಾರಿಗೆ ಓಟ್ ಹಾಕ್ಬೇಕಂತ ಮಾಡಿದ್ದೀ?

ಮಗ: ನೀನು ಯಾರಿಗೆ ಹಾಕ್ಬೇಕಂತ ಇದ್ಯಾ?

ಅಪ್ಪ: ನಾನು ಕಾಂಗ್ರೆಸ್ಸಿಗೆ ಹಾಕ್ಬೇಕಂತ ಇದ್ದೀನಿ. ಎಲ್ಲಾ ಭದ್ರ ಮಾಡ್ತಾರಂತಲ್ಲ ಮಗಾ! ನೀನೇಂತಿಯಾ?

ಮಗ: ಕಾಂಗ್ರೆಸ್ಸಿಗಂತೂ ನಾನು ಹಾಕಲ್ಲ. ಅವ್ರಿಗೆ ಯಾವುದೂ ಭದ್ರ ಇದ್ದಂಗ್ ಕಾಣಲಿಲ್ಲ.

ಅಪ್ಪ: ಯಾಕಪ್ಪಾ ಹಾಗಂತಿಯಾ ?

ಮಗ: ಕಾಂಗ್ರೆಸ್ಸಿಗೆ ಕಡೆಗಾಲ ಬಂದಂಗ್ ಕಾಣಿಸ್ತಾ ಇದೆ.

ಅಪ್ಪ : ಯಾಕಪ್ಪಾ ಹಾಗಂತಿಯಾ ?

ಮಗ: ನೀನು ಯಾವಾಗ್ಲಾದ್ರೂ ಹಿಂದಿ ಪಿಚ್ಚರ್ ನೋಡಿದ್ಯಾ?

ಅಪ್ಪ: ಹಿಂದಿ ಪಿಚ್ಚರ್‌ಗೂ ಇಲೆಕ್ಷನ್ಗೂ ಏನೋ ಸಂಬಂಧ ?

ಮಗ: ಸಂಬಂಧ ಇದೆ. ಹಿಂದಿ ಪಿಚ್ಚರ್‌ನಲ್ಲಿ ಕಡೆಗಾಲ ಬಂದಾಗ ಮಾಫ್ ಕರೋ! ಮಾಫ್ ಕರೋ! ಅಂತಾರೆ ಕೇಡಿಗಳು. ಕಾಂಗ್ರೆಸ್ಸಿಗರೆಲ್ಲಾ ಮಾಫ್ ಕರೋ! ಮಾಫ್ ಕರೋ! ಅಂತಿದ್ದಾರಲ್ಲಾ!

ಅಪ್ಪ: ಮತ್ತೆ ಯಾರಿಗೆ ಹಾಕ್ಬೇಕಂತ ಇದ್ಯಾ?

ಮಗ: ನಾನು ಈಗ ಬರ್‍ತಾ ಇರೋವಾಗ ಹುಡುಗ್ರು ಕ್ರಿಕೆಟ್ ಆಡ್ತಾ ಇದ್ರು. ಎರಡೂ ಟೀಮಿನವ್ರು ಸಮಬಲ ಇದ್ರು. ನೋಡ್ತಾ ಇದ್ದ ಹಾಗೆ ಒಂದು ಟೀಮು ಸೋಲಕೆ ಶುರುವಾಯ್ತು. ಆ ಸೋಲುವ ಟೀಮಿನ ಕ್ಯಾಪ್ಟನ್ ಮಾತ್ರ ಜೋರಾಗಿ ಇದ್ದ. ಎದುರಾಳಿ ಟೀಮಿನ ಇಬ್ಬರು ಬೌಲರು, ಇಬ್ಬರು ಫೀಲ್ಡರುಗಳನ್ನ ಅಡ್ಜಸ್ಟ್ ಮಾಡಿಬಿಟ್ಟ. ಅದ್ರೂ ಆ ಟೀಮು ಸೋಲೊದ್ರಲ್ಲಿತ್ತು. ಆಗ ಆ ಸೋಲುವ ಟೀಮಿನ ಕ್ಯಾಪ್ಟನ್, ಎದುರಾಳಿ ಟೀಮಿನ ಒಂದಿಬ್ರಿಗೆ ಚೆನ್ನಾಗಿ ಹೊಡೆದ. ಅಂಪೈರಿಗೂ ಹೆದ್ರಿಸಿದ. ಕೊನೆಗೂ ಸೋಲೋದ್ರಲ್ಲಿದ್ದ ಆ ಟೀಮು ಗೆದ್ದಿತು. ನನಗೆ ಆಗ ಗೊತ್ತಾಯ್ತು. ಭಂಡ ಕ್ಯಾಪ್ಟನ್ ಇದ್ರೆನೆ ಯಾವುದೇ ಟೀಮು ಗೆಲ್ಲೋದು ಅಂತ.

ಅಪ್ಪ: ಏನಪ್ಪಾ ಭಂಡ ಕ್ಯಾಪ್ಟನ್ ಸರಿ ಅಂತಿಯಲ್ಲಾ! ಅದು ಹೋಗ್ಲಿ ಅದಕ್ಕೂ ಇಲೆಕ್ಷನ್ಗೂ ಏನೋ ಸಂಬಂಧ ?

ಮಗ: ಸಂಬಂಧ ಇದೆ. ನಾನು ಆಗ್ಲೇ ನಿರ್ಧಾರ ಮಾಡಿಬಿಟ್ಟೆ. ನಾನು ಬಿಜೆಪಿಗೇ ಓಟು ಹಾಕೋದು ಅಂತ.

ಅಪ್ಪ: ಏನಪ್ಪಾ ನಂಗೆ ಒಂದೂ ಅರ್ಥ ಆಗ್ತಾ ಇಲ್ಲ. ಮಾಫ್ ಕರೋ! ಅನ್ತಾ ಇರೋವ್ರಿಗೆ ಕಡೆಗಾಲ ಅಂತಿಯಾ. ಭಂಡರಿಗೇ ನಿನ್ನ ಓಟು ಅಂತಿಯಾ. ಕಾಲ ಹಾಳಾಗೋಯ್ತು.

ವಾಜಪೇಯಿಯವರ ತಪ್ಪೊಪ್ಪಿಗೆ ಪತ್ರದ ಅನುವಾದ

ನ್ಯಾಯಾಲಯದಲ್ಲಿ "ನೀನು ದೊಂಬಿಯ ಕೃತ್ಯದಲ್ಲಿ ತೊಡಗಿ ಏನಾದರೂ ನಷ್ಟ ಮಾಡಿದ್ದೀಯಾ?' ಎಂದು ಕೇಳಿದಾಗ ಶ್ರೀ ಅಟಲ್ ಬಿಹಾರಿ ವಾಜಪೇಯಿ ಈ ಕೆಳಗಿನ ಹೇಳಿಕೆ ನೀಡಿದರು -

ವಾಜಪೇಯಿಯವರು ಬರೆದುಕೊಟ್ಟ ತಪ್ಪೊಪ್ಪಿಗೆ ಪತ್ರದ ಚಿತ್ರ

"27 ಆಗಸ್ಟ್ 1942 ರಂದು ಬಟೇಶ್ವರ ಬಝಾರಿನಲ್ಲಿ ಅಲ್ಲಾ ಹಾಡುತ್ತಿದ್ದರು. ಸುಮಾರು ಮಧ್ಯಾಹ್ನ 2 ಗಂಟೆಗೆ ಕಕುವಾ ಅಲಿಯಾಸ್ ಲೀಲಾಧರ್ ಮತ್ತು ಮಹುವಾ 'ಅಲ್ಲಾ'ಕ್ಕೆ ಬಂದು ಒಂದು ಭಾಷಣ ಮಾಡಿದರು ಹಾಗೂ ಅರಣ್ಯ ಕಾನೂನನ್ನು ಮುರಿಯುವಂತೆ ಜನಗಳನ್ನು ಒತ್ತಾಯಿಸಿದರು. ಇನ್ನೂರು ಜನ ಅರಣ್ಯ ಕಚೇರಿಗೆ ಹೋದರು. ನಾನು ನನ್ನ ಅಣ್ಣನೊಂದಿಗೆ ಆ ಜನರನ್ನು ಹಿಂಬಾಲಿಸಿ ಬಟೇಶ್ವರ ಅರಣ್ಯ ಕಚೇರಿ ತಲುಪಿದೆ. ನಾನು ಮತ್ತು ನನ್ನಣ್ಣ ಕೆಳಗೆ ನಿಂತೆವು. ಬೇರೆಲ್ಲರೂ ಮೇಲೆ ಹೋದರು. ಅಲ್ಲಿದ್ದವರಲ್ಲಿ ಮಹುವಾ ಮತ್ತು ಕಕುವಾರನ್ನು ಬಿಟ್ಟು ಬೇರೆ ಯಾರ ಹೆಸರು ನನಗೆ ತಿಳಿದಿಲ್ಲ.

ಇಟ್ಟಿಗೆಗಳು ಬೀಳುತ್ತಿವೆ ಎಂದು ನನಗನಿಸಿತು. ಯಾರು ಗೋಡೆಯನ್ನು ನೆಲಕ್ಕೆ ಬೀಳಿಸುತ್ತಿರುವವರು ಎಂದು ನನಗೆ ತಿಳಿಯಲಾಗಲಿಲ್ಲ. ಆದರೆ ಇಟ್ಟಿಗೆಗಳು ಖಂಡಿತವಾಗಿಯೂ ಬೀಳುತ್ತಿದ್ದವು. ನಾನು ನನ್ನಣ್ಣನೊಂದಿಗೆ ಮಲ್ಪುರಾಕ್ಕೆ ಹೊರಟೆ. ಜನ ಜಂಗುಳಿ ನಮ್ಮ ಹಿಂದಿತ್ತು. ಮೇಲೆ ಹೇಳಿದ ವ್ಯಕ್ತಿಗಳು ಹಟ್ಟಿಯಿಂದ ಆಡುಗಳನ್ನು ಬಲವಂತದಿಂದ ಹೊರಗೋಡಿಸಿದರು. ಜನಜಂಗುಳಿ ಬಿಚೋರಿಯತ್ತ ಹೊರಟಿತು. ಅರಣ್ಯ ಕಚೇರಿಯಲ್ಲಿ ಹತ್ತು ಹನ್ನೊಂದು ಮಂದಿಯಿದ್ದರು. ನಾನು ನೂರುಗಜ ದೂರದಲ್ಲಿದ್ದೆ. ನಾನೇನು ನಷ್ಟ ವುಂಟು ಮಾಡಲಿಲ್ಲ. ಸರ್ಕಾರಿ ಕಟ್ಟಡವನ್ನು ಧ್ವಂಸ ಮಾಡುವಲ್ಲಿ ನಾನೇನೂ ಸಹಾಯ ನೀಡಲಿಲ್ಲ. ನಂತರ ನಾವು ನಮ್ಮ-ನಮ್ಮ ಮನೆಗಳಿಗೆ ಹೋದೆವು"


ಈ ಹೇಳಿಕೆಯನ್ನು ಓದಿ ಹೇಳಿ ಧೃಢ ಪಡಿಸಲಾಯಿತು.

ಸಹಿ: ಎಸ್.ಹಸನ್ ಸಹಿ: ಅಟಲ್ ಬಿಹಾರಿ ವಾಜಪೇಯಿ

1.9.1942

'ಭಾರತ ಕಾದಿರುವ ವ್ಯಕ್ತಿ'





ಸ್ವಾತಂತ್ರ್ಯ ಹೋರಾಟದಿಂದ ನೂರುಗಜ ದೂರ ನಿಂತ ಹೋರಾಟಗಾರ!

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ತ್ಯಾಗ-ಬಲಿದಾನ ಮಾಡಿದ ದಾಖಲೆಯಿರುವ ಒಬ್ಬನಾದರೂ ಕಾವಿ ಪಡೆಯ ಮುಖಂಡನ ಹೆಸರು ಸಿಗುವುದಿಲ್ಲ ಎಂಬುದು ಬಹಳ ಮಂದಿಗೆ ತಿಳಿದಿರಲಿಕ್ಕಿಲ್ಲ. ಚುನಾವಣೆ ಸಮೀಪಿಸಿದಂತೆ, ದಿಲ್ಲಿ ಗದ್ದುಗೆಯೇರುವ ಕನಸಿನಿಂದ ಚಡಪಡಿಸುತ್ತಿರುವ ಬಿಜೆಪಿ ಅದಕ್ಕಾಗಿ ಚರಿತ್ರೆಯನ್ನೇ ತಿರುಚಲು ಮುಂದಾಯಿತು. ಅಡ್ವಾಣಿ ಸ್ವಾತಂತ್ರ್ಯ ಹೋರಾಟದ ಪರಂಪರೆಯ ವಾರಸುದಾರರಲ್ಲಿ ಬಿಜೆಪಿಯೂ ಸೇರಿದೆ ಎಂದು ನಂಬಿಸಲು ಸ್ವರ್ಣಜಯಂತಿ ರಥಯಾತ್ರೆ ನಡೆಸಿ ವಿಫಲರಾದರು.

ಇದಕ್ಕೆ ಮೊದಲು 1996 ರಲ್ಲಿ ವಾಜಪೇಯಿಯವರು 13 ದಿನಗಳ ಪ್ರಧಾನಿಯಾದಾಗ ಅವರ ಬದುಕಿನ ಬಗ್ಗೆ ನೀಡಿದ ಅಧಿಕೃತ ವಿವರದಲ್ಲಿ 'ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಬಂಧಿತರಾಗಿದ್ದರು' ಎಂದು ಹೇಳಲಾಗಿತ್ತು. ನಂತರ ಆಗಸ್ಟ್ 15,1947 ರಂದು 'ದೈನಿಕ ಜಾಗರಣ' ಪತ್ರಿಕೆಯಲ್ಲಿ ಸ್ವತಃ ವಾಜಪೇಯಿಯವರೇ ಲೇಖನ ಬರೆದು 'ಸ್ವಾತಂತ್ರ್ಯ ಹೋರಾಟದಲ್ಲಿ ತನ್ನ ಪಾತ್ರವನ್ನು ಸುಂದರ ಮಾತುಗಳಲ್ಲಿ ವರ್ಣಿಸಿದ್ದರು!

ನಂತರ ಡಿಸೆಂಬರ್ 25, 1997 ರಂದು ಅವರ ಜನ್ಮದಿನದಂದು ಹೊರಡಿಸಿದ 'ಭಾರತ ಕಾದಿರುವ ವ್ಯಕ್ತಿ' (Man India Waits) ಎಂಬ 8 ಪುಟಗಳ ವರ್ಣಮಯ ಪ್ರಾಯೋಜಿತ ಪುರವಣಿಯಲ್ಲಿ ಒಂದು ಲೇಖನದಲ್ಲಿ 'ಅಟಲ್ ಬಿಹಾರಿ ವಾಜಪೇಯಿಯವರು ವಿದ್ಯುಕ್ತವಾಗಿ ರಾಜಕೀಯಕ್ಕೆ ಪ್ರವೇಶಿಸಿದ್ದು ಮೊದಲ ಸಾರ್ವತ್ರಿಕ ಚುನಾವಣೆಯ ಸ್ವಲ್ಪ ಮೊದಲು ಆರಂಭಗೊಂಡ ಮೊದಲ ನೈಜ ಕಾಂಗ್ರೆಸ್ಸೇತರ ಪಕ್ಷ ಭಾರತೀಯ ಜನಸಂಘದೊಂದಿಗೆಯಾದರೂ, ಒಂದರ್ಥದಲ್ಲಿ ಅವರಲ್ಲಿ ರಾಷ್ಟ್ರೀಯವಾದಿ ಹುಮ್ಮಸ್ಸನ್ನು ಪ್ರೇರೇಪಿಸಿದ್ದು 1942 ರ ಕ್ವಿಟ್ ಇಂಡಿಯಾ ಚಳುವಳಿ. ಸ್ವಾತಂತ್ರ್ಯಕ್ಕಾಗಿ ಹೆಚ್ಚುತ್ತಿದ್ದ ಒತ್ತಾಯಕ್ಕೆ ದನಿ ಸೇರಿಸಿದ್ದಕ್ಕೆ 1942 ರಲ್ಲಿ ಅವರು ಬಂಧನಕ್ಕೊಳಗಾದರು'' ಎನ್ನಲಾಗಿತ್ತು.

ಇತ್ತೀಚೆಗೆ ಜನವರಿ 21, 1998 ರಂದು ನೀಡಿದ ಹೇಳಿಕೆಯಲ್ಲೂ ವಾಜಪೇಯಿಯವರ ಸ್ವಗ್ರಾಮ ಬಟೇಶ್ವರದಲ್ಲಿ ಕ್ವಿಟ್ ಇಂಡಿಯಾ ಆಂದೋಲನದಲ್ಲಿ ಭಾಗವಹಿಸಿರುವದಾಗಿ ಹೇಳಿದರು. ಆದರೆ ಅದರ ಮುಖ್ಯ ಅಂಶಗಳನ್ನು ಮಾತ್ರ ಅವರು ತಿಳಿಸಲಿಲ್ಲ.

ಈ ಬಗ್ಗೆ ವಿವರವಾದ ಮಾಹಿತಿ ಸಂಗ್ರಹಿಸಿರುವ ಪತ್ರಕರ್ತರಿಂದ ಅದೀಗ ಬೆಳಕಿಗೆ ಬಂದಿದೆ. ಈ ಘಟನೆಯ ಬಗ್ಗೆ ಸಂಕ್ಷಿಪ್ತವಾಗಿ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಜತೆಗೆ ಇರುವ ಅವರ ಮುಚ್ಚಳಿಕೆ ಪತ್ರದ ಕನ್ನಡ ಅನುವಾದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಅವರ ಅಮೋಘ ಪಾತ್ರದ ಬಗ್ಗೆ ಎಲ್ಲವನ್ನೂ ಹೇಳುತ್ತದೆ.

ಈ ಮುಚ್ಚಳಿಕೆ ಪತ್ರದ ಬಗ್ಗೆ 23 ವರ್ಷಗಳ ಹಿಂದೆ ಸುದ್ದಿ ಪ್ರಕಟವಾದಾಗ ಸಂಘ ಪರಿವಾರದ ಮುಖಂಡರು ಅದೆಲ್ಲಾ ಸುಳ್ಳೆಂದು ನಿರಾಕರಿಸಿದ್ದರು. ವಾಜಪೇಯಿಯವರು ಮಾತ್ರ ಮೌನವಾಗಿದ್ದರು. ಇತ್ತೀಚೆಗೆ ಕೂಡಾ ವಾಜಪೇಯಿಯವರ ವಕೀಲರು ಈ ಬಗ್ಗೆ ಪ್ರಕಟಿಸಿದರೆ ಕಾನೂನು ಕ್ರಮ ಕೈಗೊಳ್ಳುವ ಬೆದರಿಕೆಯನ್ನು ಹಾಕಿದ್ದರು. ಆದರೆ ಜನವರಿ 25 ರಂದು 'ಫ್ರಂಟ್‌ಲೈನ್' ಸಂಪಾದಕರೊಂದಿಗೆ ನೀಡಿದ ಸಂದರ್ಶನದಲ್ಲಿ ತಪ್ಪೊಪ್ಪಿಗೆ ಪತ್ರಕ್ಕೆ ತಾನೇ ಸಹಿ ಹಾಕಿರುವುದಾಗಿ ಒಪ್ಪಿ ಕೊಂಡರು, ತನ್ನ ವಕೀಲರ ನೋಟಿಸ್ ಪತ್ರವನ್ನು ಹಿಂತೆಗೆದು ಕೊಂಡರು!

ಈಗ ಒಂದು ಮಾತಂತೂ ಸ್ಪಷ್ಟ - ಅಟಲ್ ಬಿಹಾರಿ ವಾಜಪೇಯಿಯವರ ಸ್ವಗ್ರಾಮ ಬಟೇಶ್ವರ ಕ್ವಿಟ್ ಇಂಡಿಯಾ ಚಳುವಳಿಯ ಕೂಗಿನಿಂದ ಪ್ರತಿಧ್ವನಿತವಾಗಿದ್ದಾಗ ವಾಜಪೇಯಿಯವರು ಪೋಲೀಸರಿಂದ ತನ್ನನ್ನು ತಪ್ಪಿಸಿಕೊಳ್ಳುವಲ್ಲಿ ಮಗ್ನರಾಗಿದ್ದರು. ಒಂದರ್ಥದಲ್ಲಿ ಇಡೀ ಕಾವಿಪಡೆಗಳಲ್ಲಿ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದೆನೆನ್ನುವ ಏಕೈಕ ಸದಸ್ಯ ನಿಜವಾಗಿಯೂ 1942 ರಲ್ಲಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು - ಅವರು ತನ್ನ ಸ್ವಂತ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದರು! ○

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್

ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,

ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27